ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 27 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 191 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯಿಂದ ನೆರವೇರಿದ ಚಾಮುಂಡೇಶ್ವರಿ ರಥೋತ್ಸವ

ಶುಭ ಮುಹೂರ್ತದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಿದ ಯದುವೀರ್

■ ಚಾಮುಂಡೇಶ್ವರಿಗೆ ಸಿಂಹವಾಹಿನಿ ಅಲಂಕಾರ ■ ದೇವಸ್ಥಾನದ ಸುತ್ತ ಉತ್ಸವ ಮೂರ್ತಿ ಮೆರವಣಿಗೆ ■ ವಜ್ರಾಭರಣಗಳಿಂದ ಕಂಗೊಳಿಸಿದ ನಾಡದೇವತೆ ■ ಭಕ್ತಿಯಲ್ಲಿ ಮಿಂದೆದ್ದ ಅಪಾರ ಭಕ್ತ ಸಮೂಹ



ಮೈಸೂರು, ಅ.26(ಬಿಎಲ್‌ಯು)– ಚಾಮುಂಡಿ ಬೆಟ್ಟದಲ್ಲಿ ಗುರುವಾರ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶುಭ ಮುಹೂರ್ತದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಿದರು. ಭಕ್ತಿ ಭಾವದಲ್ಲಿ ಮಿಂದೆದ್ದ ಅಪಾರ ಭಕ್ತ ಸಮೂಹ ಶಕ್ತಿ ದೇವತೆಯನ್ನು ಕಣ್ತುಂಬಿಕೊಂಡು ಧನ್ಯತಾ ಭಾವ ತಾಳಿದರು.

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಪೂರ್ಣಗೊಂಡ ಎರಡು ದಿನದ ನಂತರ ಮೈಸೂರಿನಲ್ಲಿ ಮತ್ತೊಂದು ಸಂಭ್ರಮ ಮನೆ ಮಾಡಿತ್ತು. ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಸಂಪ್ರದಾಯದಂತೆ ಪವಿತ್ರ ಧಾರ್ಮಿಕ ಹಿನ್ನೆಲೆ ಇರುವ ಶ್ರೀ ಕ್ಷೇತ್ರ ಚಾಮುಂಡಿಬೆಟ್ಟದಲ್ಲಿ ಇಂದು ರಥೋತ್ಸವ ಅದ್ಧೂರಿಯಾಗಿ ನಡೆಯಿತು.


ಇದಕ್ಕೂ ಮೊದಲು ಚಾಮುಂಡೇಶ್ವರಿ ದೇವಾಲಯದಲ್ಲಿ ಇಂದು ಮುಂಜಾನೆ 3.30 ಗಂಟೆಗೆ ಚಾಮುಂಡೇಶ್ವರಿ ದೇವಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ತ್ರಿಷಥಿ ನಾಮಾರ್ಚನೆ ನೆರವೇರಿತು. ತರುವಾಯ ವಜ್ರಾಭರಣಗಳಿಂದ ಚಾಮುಂಡೇಶ್ವರಿಗೆ ಸಿಂಹವಾಹಿನಿ ● 9ನೇ ಪುಟಕ್ಕೆ

ನಾಳೆ ಚಾಮುಂಡೇಶ್ವರಿ ತೆಪ್ಪೋತ್ಸವ

ಚಾಮುಂಡಿಬೆಟ್ಟದಲ್ಲಿ ರಥೋತ್ಸವದ ನಂತರವೂ ಹಲವು ಸಾಂಪ್ರದಾಯಿಕ ಆಚರಣೆಗಳು ನಾಳೆಯಿಂದ ನಡೆಯಲಿವೆ. ನಾಳೆ ಬೆಳಗ್ಗೆ ರೇವತಿ ನಕ್ಷತ್ರದಲ್ಲಿ ಚಾಮುಂಡೇಶ್ವರಿ ದೇವಿಯ ಅಶ್ವಾರೋಹಣ ನಡೆಯಲಿದ್ದು, ಅಕ್ಟೋಬರ್ 28 ರಂದು ಅಶ್ವಿನಿ ನಕ್ಷತ್ರದಲ್ಲಿ ಬೆಳಗ್ಗೆ ವಸಂತ ಪೂಜೆ, ಅವಭೃತ ತೀರ್ಥಸ್ನಾನ ಹಾಗೂ ಮಂಟಪೋತ್ಸವದ ಧಾರ್ಮಿಕ ವಿಧಿ ವಿಧಾನ ನೆರವೇರಲಿದೆ. ಸಂಜೆ ತೆಪ್ಪೋತ್ಸವ ಹಾಗೂ ಧ್ವಜಾರೋಹಣ ನಡೆಯಲಿದೆ. ಅಕ್ಟೋಬರ್ 29 ರಂದು ಕೃಷ್ಣ ಭರಣಿ ನಕ್ಷತ್ರದಲ್ಲಿ ಸಂಜೆ ಪಂಚೋಪಚಾರ ಪೂಜೆ, ಕೈಲಾಸವಾಹನೋತ್ಸವ, ಶಯನೋತ್ಸವ ನಡೆಯಲಿದೆ. ಅಕ್ಟೋಬರ್ 30 ರಂದು ಕೃತಿಕಾ ನಕ್ಷತ್ರದಲ್ಲಿ ಚಾಮುಂಡೇಶ್ವರಿ ದೇವಿಗೆ ಮಹಾಭಿಷೇಕ, ಸಿಂಹವಾಹನ, ಮಂಟಪೋತ್ಸವ ನಡೆಯಲಿದೆ. ಅಕ್ಟೋಬರ್ 31 ರಂದು ರೋಹಿಣಿ ನಕ್ಷತ್ರದಲ್ಲಿ ಸಂಜೆ ಮುಡಿ ಉತ್ಸವ ಅಥವಾ ಜವಾಹಿರಿ ಉತ್ಸವವೂ ನಡೆಯಲಿದೆ. ಅಂತಿಮವಾಗಿ ಮಂಟಪೋತ್ಸವದೊಂದಿಗೆ ಅಕ್ಟೋಬರ್ 21 ರಿಂದ ಚಾಮುಂಡಿಬೆಟ್ಟದಲ್ಲಿ ನಡೆದ ಎಲ್ಲಾ ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿ ವಿಧಾನಗಳು ಸಮಾಪ್ತಿಗೊಳ್ಳಲಿದೆ.

ವಿದ್ಯುತ್ ಕ್ಷಾಮ ಭೀತಿ

ಕರೆಂಟ್ ಕಡಿತ ಅನಿವಾರ್ಯತೆಯ ಸುಳಿವು ನೀಡಿದ ಸಚಿವ ಕೆ.ಜೆ.ಜಾರ್ಜ್





ಬೆಂಗಳೂರು, ಅ.26(ಕೆಎಂಶಿ)– ಮಳೆಗಾಲದಲ್ಲೇ 20ರಿಂದ 30 ಮಿಲಿಯನ್ ಯೂನಿಟ್ ಪ್ರತಿನಿತ್ಯ ಕೊರತೆ ಇದ್ದು, ಬೇಸಿಗೆಯಲ್ಲಿ ಇದು ದ್ವಿಗುಣಗೊಳ್ಳಬಹುದು ಎಂಬ ಆತಂಕ ವ್ಯಕ್ತಪಡಿಸಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, ವಿದ್ಯುತ್ ಕಡಿತಗೊಳಿಸುವ ಬಗ್ಗೆ ಪರೋಕ್ಷ ಸುಳಿವು ನೀಡಿದ್ದಾರೆ.

ಸಮಸ್ಯೆ ಎದುರಿಸಲು ಸರ್ಕಾರ, ಎಲ್ಲಾ ಹಂತದಲ್ಲೂ ಪ್ರಯತ್ನ ಮಾಡುತ್ತಿದೆ. ಆದರೆ, ವಿದ್ಯುತ್ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಆತಂಕ ಉಂಟು ಮಾಡಿದೆ ಎಂದಿದ್ದಾರೆ. ಇದರ ಮಧ್ಯೆ ನಮ್ಮ ಉತ್ಪಾದನೆಯಲ್ಲಿ ಶೇ.30ರಷ್ಟು ಕೊರತೆ ಉಂಟಾಗಿದೆ. ಕೊರತೆ ಸರಿದೂಗಿ ಹೆಚ್ಚುವರಿ ಬೇಡಿಕೆ ಈಡೇರಿಸಲು ಕೇಂದ್ರ ಮತ್ತು ಹೆಚ್ಚು ವಿದ್ಯುತ್ ಉತ್ಪಾದಿಸುವ ರಾಜ್ಯಗಳ ಜತೆ ಖರೀದಿ ಸಂಬಂಧ ಮಾತುಕತೆ ನಡೆಸಿದ್ದೇವೆ ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಇಂಧನ ಖಾತೆ ಸಚಿವರ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿಗಳು ವಿದ್ಯುತ್ ಖರೀದಿಗೆ ಸಂಬಂಧಿಸಿದಂತೆ ಮಾಡಿರುವ ಆರೋಪಗಳನ್ನು ತಳ್ಳಿಹಾಕಿದ್ದು, ಎದುರಾಗಿರುವ ಸಮಸ್ಯೆ ಹಾಗೂ ಅವುಗಳ ಪರಿಹಾರಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ಈ ಬಾರಿ ವಿದ್ಯುತ್ ಬೇಡಿಕೆ ಎಷ್ಟರಮಟ್ಟಿಗೆ ಏರಿಕೆಯಾಗಿದೆ ಎಂದರೆ, ಆಗಸ್ಟ್ ತಿಂಗಳ ವಿದ್ಯುತ್ ಬಳಕೆ ಬೇಸಿಗೆ ಕಾಲದಲ್ಲಿನ ಬಳಕೆಯನ್ನು ಮೀರಿಸಿದೆ. ಈ ಅಕ್ಟೋಬರ್‌ನಲ್ಲೇ 15,000 ಮೆ.ವ್ಯಾ.ಗಿಂತ ಹೆಚ್ಚಿನ ವಿದ್ಯುತ್ ಬೇಡಿಕೆ ಇದೆ. ಆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಒದಗಿಸುವುದು ನಮ್ಮ ಜವಾಬ್ದಾರಿ. ಅದಕ್ಕಾಗಿ ಪ್ರಯತ್ನ ಮಾಡಿದ್ದು, ಅದರಂತೆ ವಿದ್ಯುತ್ ಖರೀದಿ ಮತ್ತು ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ನಿಯಮದ ಪ್ರಕಾರ ವಿದ್ಯುತ್ ಖರೀದಿ ಮತ್ತು ಕಲ್ಲಿದ್ದಲು ಆಮದು ಪ್ರಕ್ರಿಯೆ ನಡೆಯುತ್ತಿದ್ದು, ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಅವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದರು.

ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಪ್ರತಿ ತಿಂಗಳಿಗೆ 200 ಮಿಲಿಯನ್ ಯೂನಿಟ್‌ಗಿಂತ ಹೆಚ್ಚಿನ ವಿದ್ಯುತ್ ಬಳಕೆ ಆಗುತ್ತಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಅತ್ಯಧಿಕ ಅಂದರೆ 11,268 ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇತ್ತು. 2022ರ ಆಗಸ್ಟ್‌ನಲ್ಲಿ ಗರಿಷ್ಠ ಬಳಕೆ 208 ಮಿಲಿಯನ್ ಯೂನಿಟ್‌ನಷ್ಟಿದ್ದರೆ, ಈ ವರ್ಷ ಆಗಸ್ಟ್‌ನ ಗರಿಷ್ಠ ಬಳಕೆ 294 ಮಿಲಿಯನ್ ಯೂನಿಟ್‌ಗೆ ಏರಿದೆ. ಇಂತಹ ಸವಾಲಿನ ಪರಿಸ್ಥಿತಿಯಲ್ಲೂ, ರೈತರ ಪಂಪ್ ಸೆಟ್‌ಗೆ 5 ಗಂಟೆಗಳ ನಿರಂತರ ವಿದ್ಯುತ್ ಪೂರೈಸಲು ಇಂಧನ ಸಚಿವಾಲಯವು ● 6ನೇ ಪುಟಕ್ಕೆ

ವನ್ಯಜೀವಿ ಉತ್ಪನ್ನ ಇರಿಸಿಕೊಂಡವರು ಸರ್ಕಾರಕ್ಕೆ ಮರಳಿಸಲು ಒಂದು ಅವಕಾಶ

● ತಮ್ಮ ಬಳಿ ಇರಿಸಿಕೊಳ್ಳಲು ಅನುಮತಿ ಇಲ್ಲವೇ ಸರ್ಕಾರಕ್ಕೆ ಮರಳಿಸಲು ಅವಕಾಶವಾಗುವಂತೆ ಕಾನೂನು ಸಾಧ್ಯತೆಗಳ ಬಗ್ಗೆ ಪರಾಮರ್ಶೆ; ಅರಣ್ಯ ಸಚಿವ ಈಶ್ವರ ಖಂಡ್ರೆ ● ಬಹುತೇಕರಿಗೆ ಇದು ಅಪರಾಧ ಎಂಬ ಅರಿವೇ ಇಲ್ಲ; ಅವರಿಗೆ ಅವಕಾಶ ನೀಡುವ ಚಿಂತನೆ ● ಗ್ರಾಮೀಣ ಪ್ರದೇಶದಲ್ಲಿ ಸಾರಂಗ, ಜಿಂಕೆ ಚರ್ಮ, ಕೊಂಬು; ಆನೆ ದಂತದ ಕಲಾಕೃತಿ ಇನ್ನಿತರ ಪದಾರ್ಥಗಳ ಸಂಗ್ರಹಣೆ ಮಾಡಿರುವುದು ಸಾಮಾನ್ಯ ಸಂಗತಿ ● ಇದೆಲ್ಲಾ 'ಹುಲಿ ಉಗುರಿನ' ಮಹಿಮೆ



ಬೆಂಗಳೂರು, ಅ.26(ಕೆಎಂಶಿ)– ಅಕ್ರಮವಾಗಿ ವನ್ಯಜೀವಿ ಉತ್ಪನ್ನಗಳನ್ನು ಇಟ್ಟುಕೊಂಡಿರುವವರು ಅವುಗಳನ್ನು ಸರ್ಕಾರಕ್ಕೆ ಮರಳಿಸಲು ಕೊನೆಯ ಅವಕಾಶ ನೀಡುವ ಕಾನೂನು ಸಾಧ್ಯತೆಗಳನ್ನು ಪರಾಮರ್ಶಿಸಲಾಗುತ್ತಿದೆ ಎಂದು ಅರಣ್ಯ, ವನ್ಯಜೀವಿ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಹುಲಿ ಉಗುರಿನ ಲಾಕೆಟ್ ಇರುವ ಸರ ಧರಿಸಿರುವವರ ವಿರುದ್ಧ ನಿತ್ಯ ದೂರುಗಳು ಬರುತ್ತಿದ್ದು, ಬಹುತೇಕರಿಗೆ ಇದು ಅಪರಾಧ ಎಂಬ ಅರಿವೇ ಇಲ್ಲ ಎಂಬುದು ಗೋಚರವಾಗುತ್ತಿದೆ ಎಂದು ಅವರು ತಿಳಿಸಿದರು. ವಿಕಾಸಸೌಧದ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ತರುವಾಯ ಮಾತನಾಡಿದ ಅವರು, ತಮ್ಮ ಪೂರ್ವಜರು ಹೊಂದಿದ್ದ ವನ್ಯಜೀವಿ ಅಂಗಾಂಗದಿಂದ ಮಾಡಿದ ಟ್ರೋಫಿ, ಫಲಕ, ಪೆಂಡೆಂಟ್ ಸೇರಿದಂತೆ ಯಾವುದೇ ಉತ್ಪನ್ನಗಳನ್ನು ಅರಣ್ಯ ಇಲಾಖೆಯಿಂದ ದೃಢೀಕರಿಸಿಕೊಂಡು ಮಾಲೀಕತ್ವದ ಹಕ್ಕು ಪಡೆದುಕೊಳ್ಳಲು 2003ರವರೆಗೆ ಹಲವು ಅವಕಾಶ ನೀಡಲಾಗಿತ್ತು. ಹಲವರು ತಮ್ಮ ಬಳಿ ಇದ್ದ ವನ್ಯಜೀವಿ ಉತ್ಪನ್ನಗಳಿಗೆ ಮಾಲೀಕತ್ವದ ಹಕ್ಕು ಪಡೆದಿದ್ದಾರೆ. ಇನ್ನೂ ಅನೇಕರು ದೃಢೀಕರಣ ಮತ್ತು ಪ್ರಮಾಣ ಪತ್ರ ಪಡೆದಿಲ್ಲ ಎಂದು ಹೇಳಿದರು. ● 9ನೇ ಪುಟಕ್ಕೆ

ಹುಲಿ ಉಗುರು ಹುಡುಕಿ ಹೋದರೆ ಸಿಕ್ಕಿದ್ದು ಆನೆಯ ದವಡೆ ಹಲ್ಲು!

ಈ ಸಂಬಂಧ ವ್ಯಕ್ತಿ ಬಂಧನ



ಆನೆಯ ದವಡೆ ಹಲ್ಲು

ಮೈಸೂರು, ಅ.26(ಎಂಟಿವೈ)– ರಾಜ್ಯದಾದ್ಯಂತ ಹುಲಿ ಉಗುರು ಸೆಲಬ್ರಿಟಿಗಳ ನಿದ್ದೆಗೆಡಿಸುತ್ತಿರುವ ವೇಳೆಯೇ ಮೈಸೂರಲ್ಲಿ ಅರಣ್ಯಾಧಿಕಾರಿಗಳ ತಂಡ ಮನೆಯೊಂದರ ಮೇಲೆ ದಾಳಿ ಮಾಡಿ ಆನೆಯ ದವಡೆ ಹಲ್ಲೊಂದನ್ನು ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದೆ.

ಮೈಸೂರಿನ ಉದಯಗಿರಿ ನಿವಾಸಿ ಅಭಿರಾಮ್ ಸುಂದರನ್(70), ವನ್ಯಜೀವಿ ಸಂರಕ್ಷಣಾ ಕಾನೂನು ಉಲ್ಲಂಘಿಸಿ, ಬಂಧನಕ್ಕೊಳಗಾದ ವ್ಯಕ್ತಿ. ಹುಲಿ ಉಗುರು ಹೊಂದಿದ್ದಾರೆ ಎಂಬ ಮಾಹಿತಿ ಮೇರೆಗೆ ಮೈಸೂರು ಅರಣ್ಯಾಧಿಕಾರಿಗಳ ತಂಡ ಅಭಿರಾಮ್ ಸುಂದರನ್ ಅವರ ಮನೆಯಲ್ಲಿ ಶೋಧ ನಡೆಸಿದಾಗ ರೂಮ್‌ನಲ್ಲಿ ಬಚ್ಚಿಟ್ಟಿದ್ದ ಆನೆಯ ದವಡೆ ಹಲ್ಲು ಪತ್ತೆಯಾಗಿದೆ. ರಾಜ್ಯದ ಹಲವೆಡೆ ಕೆಲ ಸೆಲಬ್ರಿಟಿಗಳು ಹಾಗೂ ರಾಜಕಾರಣಿಗಳಿಗೆ ಹುಲಿ ಉಗುರು ಉರುಳಾಗಿ ಪರಿಣಮಿಸಿರುವ ಹಿನ್ನೆಲೆಯಲ್ಲಿ ಅನಾಮಿಕರೊಬ್ಬರು ನೀಡಿದ ಮಾಹಿತಿ ಆಧರಿಸಿ, ಶೋಧ ನಡೆಸಿದಾಗ ಆನೆ ದವಡೆ ಹಲ್ಲು ಪತ್ತೆಯಾಗಿದೆ. ಆರೋಪಿ ಮನೆಯಲ್ಲಿ ಸಿಕ್ಕಿರುವ ದವಡೆ ಹಲ್ಲು ● 6ನೇ ಪುಟಕ್ಕೆ

ಸ್ವಸ್ಥಾನಕ್ಕೆ ಮರಳಿದ ಯಶಸ್ವಿ ದಸರಾ ರೂವಾರಿಗಳಾದ ಗಜಪಡೆ

ಸಾಂಪ್ರದಾಯಿಕ ಪೂಜೆ ನೆರವೇರಿಸಿ, ಬೀಳ್ಕೊಟ್ಟ ಜಿಲ್ಲಾಡಳಿತ

ಪೊಲೀಸ್ ಬೆಂಗಾವಲು ಪಡೆಯೊಂದಿಗೆ ಕ್ಯಾಂಪ್‌ನತ್ತ ಸಾಗಿದ ಜಂಬೋಪಡೆ





ಮೈಸೂರು, ಅ.26(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದ ಯಶಸ್ಸಿನ ರೂವಾರಿಗಳಾದ ಗಜಪಡೆ ಮೈಸೂರು ಅರಮನೆ ಆವರಣದಿಂದ ಗುರುವಾರ ಸ್ವಸ್ಥಾನಕ್ಕೆ ತೆರಳಿದವು. ಜಿಲ್ಲಾಡಳಿತ ಹಾಗೂ ಅರಮನೆ ಮಂಡಳಿ ವತಿಯಿಂದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಎಲ್ಲಾ ಆನೆಗಳಿಗೂ ಪೂಜೆ ಸಲ್ಲಿಸಿ ಗೌರವಯುತವಾಗಿ ಬೀಳ್ಕೊಡಲಾಯಿತು.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಸೆ.1ರಂದು ಮೈಸೂರಿಗೆ ಆಗಮಿಸಿದ್ದ ಮೊದಲ ತಂಡದ 9 ಆನೆಗಳು, ಸೆ.5ರಂದು ಅರಮನೆ ಪ್ರವೇಶಿಸಿದ್ದವು. ಸೆ.25ರಂದು ಎರಡನೇ ತಂಡದಲ್ಲಿ 5 ಆನೆಗಳು ಅರಮನೆಗೆ ಆಗಮಿಸಿದ್ದವು. ಜಂಬೂಸವಾರಿ ಮೆರವಣಿಗೆಯಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ● 6ನೇ ಪುಟಕ್ಕೆ

> “ದಸರಾ ಮಹೋತ್ಸವದಲ್ಲಿ ಗಜಪಡೆ ತಮ್ಮ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸಿ, ತಮ್ಮ ತಮ್ಮ ಶಿಬಿರಗಳತ್ತ ತೆರಳುತ್ತಿವೆ. ಈ ವೇಳೆ ಗಜಪಡೆಗೆ ಸಾಂಪ್ರದಾಯಿಕ ಪೂಜೆ ನೆರವೇರಿಸಿ ಬೀಳ್ಕೊಡಲಾಗಿದೆ. ಮಾವುತರು, ಕಾವಾಡಿಗಳು ಸೇರಿದಂತೆ ಗಜಪಡೆಯ 55 ಸಿಬ್ಬಂದಿಗೆ ಗೌರವಧನ ನೀಡಿ, ಗೌರವಿಸಲಾಗಿದೆ.
>
> –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಮೈಸೂರಲ್ಲಿ ರಾಮಮಂದಿರ ಮಾದರಿ ಇಂದು ಸಂಜೆವರೆಗೆ ಸಾರ್ವಜನಿಕರ ದರ್ಶನಕ್ಕೆ ಅವಕಾಶ



ಮೈಸೂರು,ಅ.26(ಆರ್‌ಕೆ)–ಮೈಸೂರಿನ ದಟ್ಟಗಳ್ಳಿಯ ಕನಕದಾಸನಗರದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಅಯೋಧ್ಯೆಯ ರಾಮಮಂದಿರದ ಮಾದರಿಯನ್ನು ಪ್ರತಿಷ್ಠಾಪಿಸಲಾಗಿದ್ದು, ನಾಳೆ (ಅ.27) ಸಂಜೆವರೆಗೆ ಸಾರ್ವಜನಿಕರು ದರ್ಶನ ಮಾಡಬಹುದು.

ಮಹಾಲಕ್ಷ್ಮಿ ದೇವಸ್ಥಾನದ ಗೋಧೆಯ ಬಳಗ ಟ್ರಸ್ಟ್ ವತಿಯಿಂದ ಕಲಾವಿದ ವಿನಯ್ ಕುಮಾರ್ ಅವರು ಥರ್ಮಾಕೋಲ್‌ನಿಂದ ತಯಾರಿಸಿರುವ ಅಯೋಧ್ಯೆ ಶ್ರೀ ರಾಮಮಂದಿರದ ಪ್ರತಿರೂಪವನ್ನು ನವರಾತ್ರಿ ಉತ್ಸವದ ಅಂಗವಾಗಿ ಅ. 15ರಿಂದ ಪ್ರತಿಷ್ಠಾಪಿಸಿ ಭಕ್ತಾದಿಗಳ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಟ್ರಸ್ಟ್‌ನ ವಸುಧಾ ಮಹಾಲಕ್ಷ್ಮಿ ತಿಳಿಸಿದ್ದಾರೆ.

ರಾಮಮಂದಿರದ ಮಾದರಿಯನ್ನು ನಾಳೆ (ಅ.27) ಸಂಜೆವರೆಗೆ ನೋಡಬಹುದಾಗಿದೆ. ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರದ ಕಟ್ಟಡ ಉದ್ಘಾಟನೆಯಾಗುವವರೆಗೆ ದೇಶದ 108 ಕಡೆಗಳಲ್ಲಿ ಈ ಮಾದರಿಯನ್ನು ಪ್ರತಿಷ್ಠಾಪಿಸಲು ವಿನಯಕುಮಾರ್ ಬಯಸಿದ್ದು, ಮೈಸೂರಿನಲ್ಲಿ 41ನೇ ಪ್ರತಿಷ್ಠಾಪನೆಯಾಗಿದೆ. ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ದೇವಾಲಯದಲ್ಲಿ 40ನೇ ಪ್ರದರ್ಶನವಾಗಿತ್ತು ಎಂದು ತಿಳಿಸಿದ್ದಾರೆ.

ಕಳೆದ 12 ದಿನಗಳಿಂದಲೂ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾದ ರಾಮಮಂದಿರ ಮಾದರಿಯನ್ನು ನೋಡಲು ಭಕ್ತರ ದಂಡೇ ಬರುತ್ತಿದ್ದು, ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ ವಾಲ್ಮೀಕಿ ರಾಮಾಯಣ ಪಠಣ, ಶ್ರೀ ರಾಮನ ಸ್ಮರಣೆಯಂತಹ ಭಕ್ತಿ ಪ್ರಧಾನ ಕಾರ್ಯಕ್ರಮಗಳು ನಡೆಯುತ್ತಿವೆ.

9 ಅಡಿ ಎತ್ತರ, 15 X 15 ಅಡಿ ಅಗಲವಿರುವ ಮಾದರಿಯು ಅತ್ಯಾಕರ್ಷಕವಾಗಿದ್ದು, ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿದೆ. ಶುಕ್ರವಾರ ರಾತ್ರಿ ಮಾದರಿಯನ್ನು ತೆರವುಗೊಳಿಸಿ ಕಳುಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪುರುಷರ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ

ಮೈಸೂರು, ಅ.26– ನ.13ರಿಂದ 16ರವರೆಗೆ ನಡೆಯಲಿರುವ ಕರ್ನಾಟಕ ರಾಜ್ಯ ಮಟ್ಟದ ಸೀನಿಯರ್ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾವಳಿಗೆ ಮೈಸೂರು ಜಿಲ್ಲಾ ತಂಡದ ಪುರುಷ ತಂಡವನ್ನು ನ.29ರ ಮಧ್ಯಾಹ್ನ 3 ಗಂಟೆಗೆ ಮೈಸೂರು ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ವತಿಯಿಂದ ಪುರುಷರ ಕಬಡ್ಡಿ ಆಟಗಾರರನ್ನು ಆಯ್ಕೆ ಮಾಡಲಾಗುವುದು. ಆಸಕ್ತಿ ಹೊಂದಿರುವ ಆಟಗಾರರು ಸರಿಯಾದ ಸಮಯಕ್ಕೆ ಆಯ್ಕೆ ಪ್ರಕ್ರಿಯೆಗೆ ಹಾಜರಾಗಬೇಕಾಗಿ ಕೋರಲಾಗಿದೆ. ಮಾಹಿತಿಗೆ ಮೊ. 9591933699 ಸಂಪರ್ಕಿಸಬಹುದು.

ಇಂದು ಅಂತರ್ ಕಾಲೇಜು ವಚನ ಗಾಯನ ಸ್ಪರ್ಧೆ

ಮೈಸೂರು, ಅ.26 (ಪಿಎಂ)– ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ ಮತ್ತು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಜಂಟಿ ಆಶ್ರಯದಲ್ಲಿ ಅ.27ರಂದು ಬೆಳಗ್ಗೆ 10.30ಕ್ಕೆ ಅಂತರ್ ಕಾಲೇಜು ವಚನ ಗಾಯನ ಸ್ಪರ್ಧೆ ಮತ್ತು ವಿಚಾರ ಸಂಕಿರಣ (ದತ್ತಿ ಕಾರ್ಯಕ್ರಮ) ಆಯೋಜಿಸಲಾಗಿದೆ.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಉದ್ಘಾಟಿಸಲಿದ್ದಾರೆ. ಬಳಿಕ ವಚನ ಗಾಯನ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 2.30ಕ್ಕೆ ವಿಚಾರ ಸಂಕಿರಣ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ಜರುಗಲಿದೆ. ಮೊದಲ ಗೋಷ್ಠಿಯಲ್ಲಿ 'ವಚನಕಾರರ ಆರ್ಥಿಕ ಚಿಂತನೆ ಮತ್ತು ಪ್ರಸ್ತುತತೆ' ಕುರಿತು ನಿವೃತ್ತ ಪ್ರಾಧ್ಯಾಪಕಿ ಡಾ.ಸಿ.ಜಿ.ಉಷಾದೇವಿ, ಎರಡನೇ ಗೋಷ್ಠಿಯಲ್ಲಿ 'ವಿಜ್ಞಾನ ಯುಗದಲ್ಲಿ ವಚನ ಸಾಹಿತ್ಯದ ಅವಶ್ಯಕತೆ' ಕುರಿತು ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ವಿಚಾರ ಮಂಡಿಸಲಿದ್ದಾರೆ.

ದತ್ತಿ ದಾಸೋಹಿಗಳಾದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಟನದಲ್ಲಿ ನಾಟಕ 'ಅಂಧಯುಗ'



ಮೈಸೂರು, ಅ. 26– ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಅ. 29ರಂದು ಸಂಜೆ 6.30ಕ್ಕೆ ಸರಿಯಾಗಿ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಟನ ಪಯಣ: ರೆಪರ್ಟರಿ ತಂಡದ ಕಲಾವಿದರಿಂದ ಧರ್ಮವೀರ ಭಾರತಿ ಅವರ 'ಅಂಧಯುಗ' ನಾಟಕವು ಮಂಡ್ಯ ರಮೇಶ್ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ. ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ತಿಪ್ಪೇಸ್ವಾಮಿ ಅವರು ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನಾಟಕದ ವಸ್ತ್ರಾಲಂಕಾರ ರಂಜನಾ ಕೇರಾ, ಸಂಗೀತ ಸಂಯೋಜನೆ ನಟನದ ರಂಗ ಕಲಾವಿದೆ, ಉಪನ್ಯಾಸಕರಾದ ದಿಶಾ ರಮೇಶ್, ನಾಟಕದ ದೃಶ್ಯ ಸಂಯೋಜನೆ ಮತ್ತು ವಿನ್ಯಾಸ ನಟನದ ಪ್ರಾಂಶುಪಾಲ ಮೇಘ ಸಮೀರ ಅವರದ್ದು.



ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ತೋಟಗಾರಿಕಾ ಪಿತಾಮಹ ಮರಿಗೌಡರ ಪ್ರತಿಮೆಗೆ ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ನೇತೃತ್ವದಲ್ಲಿ ಪುಷ್ಪಾರ್ಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಆರ್.ಸರ್ವೇಶ್, ನಿರ್ದೇಶಕರಾದ ಸೂರ್ಯಕುಮಾರ್, ಬಿ.ಪಿ.ಬೋರೇಗೌಡ, ಹೊಸಹುಂಡಿ ರಘು, ಬಿ.ಎನ್.ಪ್ರಭುಸ್ವಾಮಿ, ಟಿ.ರಾಮೇಗೌಡ, ಎಸ್.ಆರ್.ಶ್ರೀನಿವಾಸ್, ಜೆ.ಮಹದೇವ, ಕೆ.ಸುಜಾತ, ಎಸ್.ಜಿ.ನಳಿನಿ, ಎಚ್.ಎಸ್.ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ 50 ಸೀಟುಗಳ ಹೆಚ್ಚಳಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್

ಮೈಸೂರು,ಅ.26(ಪಿಎಂ)–ಶತಮಾನೋತ್ಸವದ ಹಿನ್ನೆಲೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಎಂಎಂಸಿ–ಆರ್‌ಐ) 50 ಸೀಟುಗಳ ಹೆಚ್ಚಳಕ್ಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರೂ ಆದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ತಿಳಿಸಿದರು.

ಮೈಸೂರಿನ ಎಂಎಂಸಿ–ಆರ್‌ಐ ಸಭಾಂಗಣದಲ್ಲಿ ಸಂಸ್ಥೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ಶತಮಾನೋತ್ಸವ ಹಿನ್ನೆಲೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಸೀಟುಗಳ ಹೆಚ್ಚಳ ಮಾಡಲಾಗುತ್ತದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಸಂಬಂಧ 50 ಸೀಟುಗಳ ಹೆಚ್ಚಳಕ್ಕಾಗಿ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಇಂದು ಮೈಸೂರು ವೈದ್ಯಕೀಯ ಕಾಲೇಜು ಅಧೀನಕ್ಕೊಳಪಡುವ ಕೆಆರ್‌ಆಸ್ಪತ್ರೆ, ಟ್ರಾಮಾ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಚೆಲುವಾಂಬ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಇಲ್ಲಿ ಇನ್ನಷ್ಟು ಅಗತ್ಯ ಸೌಲಭ್ಯ ಕಲ್ಪಿಸಿ ಮತ್ತಷ್ಟು ಸುಧಾರಣೆ ತರುವ ಸಂಬಂಧ ಇಂದಿನ ಸಭೆಯಲ್ಲಿ ಚರ್ಚೆ ಮಾಡಿದ್ದೇನೆ ಎಂದರು.

ನಾವು ಮಾತನಾಡುವುದು ಜನರಿಗೆ ಉಪಯೋಗ ಆಗುವಂತದಾಗಿರಬೇಕು...!

"ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಿನ ವಿಜಯದಶಮಿ ವೇಳೆಗೆ ತಾವೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಹೇಳಿಕೊಂಡಿದ್ದಾರೆ ಎನ್ನಲಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ನಾವು ಮಾತನಾಡುವುದು ಜನರಿಗೆ ಉಪಯೋಗ ಆಗುವುದಾಗಿರಬೇಕು. ನಮ್ಮ ಕೆಲಸ ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕು ಎಂಬುದು ನನ್ನ ಭಾವನೆ. ಇದರ ಹೊರತಾಗಿ ಬೇರೆ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ ಎಂದು ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಸಮಸ್ಯೆಗಳು ಸಾಕಷ್ಟು ಇವೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಸಂಬಂಧ ಹಲವು ಸೂಚನೆ ನೀಡಿದ್ದೇನೆ. ಮೈಸೂರು ವೈದ್ಯಕೀಯ ಕಾಲೇಜಿನ ಅಧೀನದ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯನ್ನು ಇದೇ ಡಿಸೆಂಬರ್ ಅಥವಾ ಮುಂದಿನ ವರ್ಷದ ಜನವರಿ ಒಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿದ್ದೇನೆ. ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವ (2024) ಹಿನ್ನೆಲೆಯಲ್ಲಿ ಇಲ್ಲಿ ಇನ್ನಷ್ಟು ಅಗತ್ಯ ಸೌಲಭ್ಯ ಕಲ್ಪಿಸಿ ಸುಧಾರಣೆಗೆ ಯೋಜನೆ ರೂಪಿಸಲಾಗುತ್ತಿದೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.


ಶತಮಾನೋತ್ಸವದ ಹಿನ್ನೆಲೆಯಲ್ಲಿ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಿದ್ದೇನೆ. ಜೊತೆಗೆ ಹೊಸದಾಗಿ ಪ್ರಾರಂಭಿಸಿರುವ ಟ್ರಾಮಾ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಚರ್ಚೆ ಮಾಡಲಾಗಿದೆ. ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಸೌಲಭ್ಯ ಒದಗಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹುಲಿ ಉಗುರು ಪೆಂಡೆಂಟ್ ಕುರಿತಂತೆ ಪ್ರತಿಕ್ರಿಯಿಸಿದ ಅವರು, ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಎಲ್ಲರೂ ಕಾನೂನು ಪಾಲನೆ ಮಾಡಬೇಕು. ಹಾಗಾಗಿ ಕಾನೂನು ಉಲ್ಲಂಘನೆ ಮಾಡಬಾರದು ಎಂದರು.

ಇಂದಿನಿಂದ ಮೈಸೂರು ಮೆಡಿಕಲ್ ಕಾಲೇಜಲ್ಲಿ ವೈದ್ಯಕೀಯ ವಸ್ತುಪ್ರದರ್ಶನ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲರಿಂದ ಉದ್ಘಾಟನೆ





ಮೈಸೂರು, ಅ.26 (ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ)ಯ ಗ್ರಂಥಾಲಯ ಸಭಾಂಗಣದಲ್ಲಿ ನಾಳೆ (ಅ.27)ಯಿಂದ ಒಂದು ತಿಂಗಳ ಕಾಲ ವೈದ್ಯಕೀಯ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿದೆ.

ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿರುವ ಈ ವಸ್ತು ಪ್ರದರ್ಶನವನ್ನು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಉದ್ಘಾಟಿಸುವರು ಎಂದು ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ ತಿಳಿಸಿದ್ದಾರೆ.

ಪ್ರತೀ ದಿನ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ತೆರೆದಿರುವ ವಸ್ತು ಪ್ರದರ್ಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಅಂಗರಚನಾ ಶಾಸ್ತ್ರ, ಮೆಡಿಸಿನ್, ಯೂರಾಲಜಿ, ನೆಫ್ರೋಲಜಿ, ಸರ್ಜರಿ, ಆರ್ಥೋ, ಇಎನ್‌ಟಿ, ಚರ್ಮ ರೋಗ, ಆಫ್ತಾಮಾಲಜಿ, ಪ್ಲಾಸ್ಟಿಕ್ ಸರ್ಜರಿ ಸೇರಿದಂತೆ ಸಂಸ್ಥೆಯ ಎಲ್ಲಾ 21 ವಿಭಾಗಗಳ ಮುಖ್ಯಸ್ಥರು ವಸ್ತುಪ್ರದರ್ಶನದಲ್ಲಿ ತಮ್ಮ ವಿಭಾಗದ ವೈದ್ಯಕೀಯ ಪರಿಕರಗಳನ್ನು ಪ್ರದರ್ಶಿಸುವರು. ಕಾಲೇಜಿನ ಪ್ರಮುಖ ದ್ವಾರ, ಎಸ್‌ಬಿಐ ಬಳಿಯ ಗೇಟ್, ಚೆಲುವಾಂಬ ಆಸ್ಪತ್ರೆ ಎದುರಿನ ಗೇಟ್ ಹಾಗೂ ಶೇಷಾದ್ರಿ ಅಯ್ಯರ್ ರಸ್ತೆಯ ದ್ವಾರದ ಮೂಲಕ ಸಾರ್ವಜನಿಕರು ಪ್ರವೇಶಿಸಿ ಗ್ರಂಥಾಲಯ ನೂತನ ಕಟ್ಟಡದ ವಸ್ತುಪ್ರದರ್ಶನ ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯ ಉನ್ನತ ಮಟ್ಟದ ಸಭೆ

ಪ್ರಾದೇಶಿಕತೆ, ಸಾಮಾಜಿಕ ನ್ಯಾಯ, ಅರ್ಹತೆ, ಪ್ರತಿಭೆಗೆ ಅವಕಾಶ ನೀಡುವಂತೆ ಸಿದ್ದರಾಮಯ್ಯ ಸೂಚನೆ



ಬೆಂಗಳೂರು,ಅ.26–ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಅರ್ಹರಿಗೆ ಪ್ರಶಸ್ತಿ ನೀಡಬೇಕು. ಪ್ರಾದೇಶಿಕ ನ್ಯಾಯ ಕಡ್ಡಾಯವಾಗಿ ಪಾಲನೆಯಾಗಬೇಕು. ಎಲ್ಲಾ ಜಾತಿ, ಧರ್ಮ, ಲಿಂಗಗಳಿಗೂ ಪ್ರಾತಿನಿಧ್ಯ ದೊರಕಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ಕನ್ನಡದ ಪರವಾಗಿ ಕಾರ್ಯನಿರ್ವಹಿಸಿರುವಂತಹ ಸಂಘ ಸಂಸ್ಥೆಗಳಿಗೆ ಒಟ್ಟಾರೆ 10 ಪ್ರಶಸ್ತಿಗಳನ್ನು ನೀಡಬೇಕು ಎಂದು ಆಯ್ಕೆ ಸಮಿತಿ ಸದಸ್ಯರು ಅಭಿಪ್ರಾಯಪಟ್ಟರು.

ಈ ಬಾರಿ 68 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಬೇಕಿದ್ದು, ಕರ್ನಾಟಕ ಸಂಭ್ರಮದ ಪ್ರಯುಕ್ತ ಸಂಘ ಸಂಸ್ಥೆಗಳಿಗೆ 10 ಪ್ರಶಸ್ತಿಗಳನ್ನು ಮೀಸಲಿಡಲು ಸಭೆಯಲ್ಲಿ ತೀರ್ಮಾನ ಮಾಡಲಾಯಿತು. ಅರ್ಜಿ ಕೊಡುವವರು ಹೆಚ್ಚಿದ್ದ ಕಾರಣ, ಅದಕ್ಕೆ ಕಡಿವಾಣ ಹಾಕಲು ಏಕೀಕರಣ ಆಗಿ ಎಷ್ಟು ವರ್ಷಗಳಾಗಿದೆಯೋ ಅಷ್ಟು ಪ್ರಶಸ್ತಿಗಳನ್ನು ನೀಡಲು ಹಿಂದೆ ನಮ್ಮ ಸರ್ಕಾರವೇ ತೀರ್ಮಾನ ಕೈಗೊಂಡಿತ್ತು ಎಂದು ಮುಖ್ಯಮಂತ್ರಿಗಳು ತಿಳಿಸಿದರು.


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹ್ಮದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಸಮಿತಿ ಸದಸ್ಯರಾದ ಪ್ರೊ.ಜಾಣಗೆರೆ ವೆಂಕಟರಾಮಯ್ಯ, ಡಾ.ಎಚ್.ಎಲ್.ಪುಷ್ಪಾ, ಡಾ.ವೀರಣ್ಣ ದಂಡೆ, ಡಾ.ಮೂಡ್ನಾಕೂಡು ಚಿನ್ನಸ್ವಾಮಿ, ಅಲ್ಲಮಪ್ರಭು ಬೆಟ್ಟದೂರು, ಪಿಂಡಿಪಾಪನಹಳ್ಳಿ ವೆಂಕಟಪ್ಪ ಟಾಕಪ್ಪ ಕಣ್ಣೂರು, ಪಿಚ್ಚಳ್ಳಿ ಶ್ರೀನಿವಾಸ್, ಡಾ.ವಿಠಲ್ ಐ.ಬೆಣಗಿ– ಕೃಷಿ, ಡಾ: ಸಣ್ಣರಾಮು, ವೆಂಕಟರಾಮಯ್ಯ, ಡಾ.ಎಂ.ಎಸ್.ಮೂರ್ತಿ, ಡಾ.ಗೀತಾ ಶಿವಮೊಗ್ಗ, ಡಾ.ಜಯದೇವಿ ಜಂಗಮಶೆಟ್ಟಿ, ಐರೋಡಿ ಗೋವಿಂದಪ್ಪ, ಸಾಧು ಕೋಕಿಲ, ಸುಕನ್ಯಾ ಪ್ರಭಾಕರ್, ಫಯಾಜ್ ಖಾನ್, ಹೃಷಿಕೇಶ್ ಬಹದ್ದೂರ್ ದೇಸಾಯಿ, ನರಸಿಂಹಲು ವಡವಾಟಿ, ಡಿ.ಎನ್.ನರಸಿಂಹರಾಜು, ಡಾ.ಪುರುಷೋತ್ತಮ ಬಿಳಿಮಲೆ, ಚನ್ನಬಸವಣ್ಣ, ಶೈಲೇಶ್ ಚಂದ್ರಗುಪ್ತ, ಜೆ.ಲೋಕೇಶ್ ಉಪಸ್ಥಿತರಿದ್ದರು.

ಉಚಿತ ವಾಕ್–ಶ್ರವಣ ಮೌಲ್ಯಮಾಪನ, ಶ್ರವಣ ಸಾಧನ ವಿತರಣಾ ಶಿಬಿರ

ಮೈಸೂರು, ಅ. 26–ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಅಲ್ ಯವರ್ ಜಂಗ್ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಡಿಸಾಬಿಲಿಟೀಸ್ (ದಿವ್ಯಾಂಗ್‌ಜನ್, ಮುಂಬೈ) ಸಹಯೋಗದಲ್ಲಿ ನ.8 ಮತ್ತು 9ರಂದು ಉಚಿತ ವಾಕ್ ಮತ್ತು ಶ್ರವಣ ಮೌಲ್ಯಮಾಪನ, ಶ್ರವಣ ಸಾಧನ ವಿತರಣಾ ಶಿಬಿರ ಆಯೋಜಿಸಲಾಗಿದೆ.

ಮೈಸೂರಿನ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಶ್ರವಣ ಸಮಸ್ಯೆ ಇರುವವರು ಭಾರತದ ಸರ್ಕಾರದ ಎಡಿಪಿಐ ಯೋಜನೆಯೊಳಗೆ ಅರ್ಹರಾಗಿದ್ದರೆ ತಮ್ಮ ಶ್ರವಣ ಪರೀಕ್ಷೆಯನ್ನು ಮಾಡಿಸಿಕೊಂಡು ನಂತರ ಉಚಿತವಾಗಿ ಶ್ರವಣ ಸಾಧನವನ್ನು ಪಡೆಯಬಹುದು. ಕಿವಿ ಪರೀಕ್ಷೆ ಮತ್ತು ಉಚಿತ ಶ್ರವಣೋಪಕರಣವನ್ನು ಪಡೆಯಲು ನ. 6ರೊಳಗೆ ದೂರವಾಣಿ 0821–2548229 ಮೂಲಕ ಅಥವಾ ಖುದ್ದಾಗಿ ಬಂದು ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.10.2023 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ಅಮೃತೇಶ್ವರ ದೇವಸ್ಥಾನ :** ನವರಾತ್ರಿ ಪ್ರಯುಕ್ತ ನಡೆದ ವಿಸ್ತಾರ ಸಹಸ್ರ ಚಂಡಿ ಹೋಮದ ಪೂರ್ಣಾಹುತಿ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ :** ಶತಮಾನೋತ್ಸವದ ಅಂಗವಾಗಿ ವೈದ್ಯಕೀಯ ವಸ್ತು ಪ್ರದರ್ಶನ, ಸ್ಥಳ: ನೂತನ ಗ್ರಂಥಾಲಯ ಕಟ್ಟಡ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ಎಂ.ಕಾಂ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ.ನಾಗರಾಜು, ಸ್ಥಳ: ಪ್ರೊ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ವಿಶ್ವಮಾನವ ನೌಕರರ ವೇದಿಕೆ:** ಡಾ.ಪಿ.ರವೀಂದ್ರನಾಥ್ ಮತ್ತು ಡಾ.ಸಿ.ಎ.ಶ್ರೀಧರ ಅವರಿಗೆ ಬೀಳ್ಕೊಡುಗೆ ಮತ್ತು ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ, ಮುಖ್ಯ ಅತಿಥಿಗಳು: ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಮೈಸೂರು ವಿವಿ ಕುಲಸಚಿವರಾದ ಶೈಲಜಾ, ಮೈಸೂರು ವಿವಿ ಹಣಕಾಸು ಅಧಿಕಾರಿ ರೇಖಾ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಯುವರಾಜ ಕಾಲೇಜು ಅಮೃತ ಮಹೋತ್ಸವ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕನ್ನಡ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಬೆಳಗ್ಗೆ 10.30ಕ್ಕೆ ಅಂತರ ಕಾಲೇಜು ವಚನ ಗಾಯನ ಸ್ಪರ್ಧೆ ಮತ್ತು ವಿಚಾರ ಸಂಕಿರಣ, ಉದ್ಘಾಟನೆ: ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮಧ್ಯಾಹ್ನ 2.30ಕ್ಕೆ ವಿಚಾರ ಸಂಕಿರಣ ಹಾಗೂ ಬಹುಮಾನ ವಿತರಣೆ, ವಿಶ್ರಾಂತ ಪ್ರಾಧ್ಯಾಪಕ ಡಾ.ಸಿ.ಜಿ.ಉಷಾದೇವಿ ಅವರಿಂದ ವಚನಕಾರರ ಆರ್ಥಿಕ ಚಿಂತನೆ ಮತ್ತು ಪ್ರಸ್ತುತತೆ ಕುರಿತು ಉಪನ್ಯಾಸ, ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಅವರಿಂದ ವಿಜ್ಞಾನ ಯುಗದಲ್ಲಿ ವಚನ ಸಾಹಿತ್ಯದ ಅವಶ್ಯಕತೆ ಕುರಿತು ಉಪನ್ಯಾಸ, ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಅವರಿಂದ ಬಹುಮಾನ ವಿತರಣೆ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಕಾಲೇಜು ಸಭಾಂಗಣ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಮುದ್ದುರಾಮ ಪ್ರತಿಷ್ಠಾನ:** ಜೀವನ ಮೌಲ್ಯಗಳು ಉಪನ್ಯಾಸ ಮಾಲೆ, ಸಂಪನ್ಮೂಲ ವಿದ್ವಾಂಸರು: ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಉಪಸ್ಥಿತರು: ಮುದ್ದುರಾಮ ಪ್ರತಿಷ್ಠಾನ ಉಪಾಧ್ಯಕ್ಷ ಪ್ರೊ.ನೀಲಗಿರಿ ತಳವಾರ, ಅಧ್ಯಕ್ಷತೆ: ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ:** ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭ, ಉದ್ಘಾಟನೆ: ಕರಾಮುವಿವಿ ಡೀನ್ (ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಮುಖ್ಯ ಅತಿಥಿಗಳು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಆಡಳಿತ ಮಂಡಳಿ ಸದಸ್ಯ ಡಾ. ಟಿ.ಕೆ. ಉಮೇಶ್, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. ಕೆ.ಎಸ್. ಲೀಲಾ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ :** ಸ್ಕೂಲ್ ಆಫ್ ಲೈಫ್ ಸೈನ್ಸಸ್ 'ಸ್ಪಾರ್ಕಲ್ ಸಿನ' ಉಪನ್ಯಾಸ ಸಭಾಂಗಣ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಗೌರವ ಅತಿಥಿಗಳು: ಜೆಎಸ್‌ಎಸ್ ಕುಲಾಧಿಪತಿ ಡಾ.ಬಿ.ಸುರೇಶ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಉಪಕುಲಪತಿ ಡಾ.ಸುರೀಂದರ್ ಸಿಂಗ್, ಸ್ಥಳ:ಶ್ರೀರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.

■ **ಮಹಾರಾಜ ಕಾಲೇಜು, ಡಾ.ಕೆ.ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ :** ಡಾ.ಕೆ.ಕೃಷ್ಣಮೂರ್ತಿಯವರ ಕಾವ್ಯ ಮೀಮಾಂಸಾ ಕೃತಿಗಳ ಸಮೀಕ್ಷೆ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಸಿ.ಎ.ಶ್ರೀಧರ್, ಪ್ರಾಸ್ತಾವಿಕ ನುಡಿ: ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕ ಡಾ.ಕೆ.ಲೀಲಾಪ್ರಕಾಶ್, ಉಪಸ್ಥಿತರು: ಬಹುಶ್ರುತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಕಾಲೇಜು ಆಡಳಿತಾಧಿಕಾರಿ ಡಾ.ವಿ.ಷಣ್ಮುಗಂ, ಪ್ರಾಧ್ಯಾಪಕ ಪ್ರೊ.ಕೆ.ತಿಮ್ಮಯ್ಯ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಕಾಲೇಜು ಆವರಣ, ಮಧ್ಯಾಹ್ನ 2ರಿಂದ.

■ **ಸರ್ಕಾರ್ ಮೆಹಬೂಬ್ ಸುಭಾನಿ ಫೌಂಡೇಷನ್ :** ಜುಲೂಸ್ ಗೌಸಿಯಾ ಮೆರವಣಿಗೆ, ಸ್ಥಳ: ಮಸೀದಿ ಅಜಮ್ ಅಹಲೆ ಸುನ್ನತ್ ವಲ್ ಜಮಾತ್, ಅಶೋಕ ರಸ್ತೆ, ಮಧ್ಯಾಹ್ನ 3.15ರಿಂದ.

■ **ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್:** ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು: ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂಸದ ಪ್ರತಾಪ್ ಸಿಂಹ, ಗೌರವ ಅತಿಥಿಗಳು: ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ, ವಿಶೇಷ ಆಹ್ವಾನಿತರು: ನರೆಡ್ಕೋ ಅಧ್ಯಕ್ಷ ಜಿ.ಹರಿಬಾಬು, ಉಪಾಧ್ಯಕ್ಷ ವೆಂಕಯ್ಯ ಮುಪ್ಪಚೌದರಿ, ಶ್ಯಾಮ್‌ಕುಮಾರ್ ಮಾರೆಡ್ಡಿ, ಎಂ.ಸತೀಶ್ ಕುಮಾರ್, ಮನೋಜ್ ಲೋದಾ, ಅಧ್ಯಕ್ಷತೆ : ನರೆಡ್ಕೋ ಮೈಸೂರು ಛೇರ್ಮನ್ ಟಿ.ಜಿ.ಆದಿಶೇಷನ್ ಗೌಡ, ಅಧ್ಯಕ್ಷ ವಿ.ಸಿ.ರವಿಕುಮಾರ್, ಸ್ಥಳ: ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ–ಡಾ.ಜಿ.ಎಂ.ಹೆಗಡೆ, 7.15 ಭಾವಗೀತೆಗಳು–ಸಿ. ಅಶ್ವಥ್, ಸಂಗೀತಾ ಕಟ್ಟಿ, 10.00 ಲಾಲ್ಗುಡಿ ಜಿ.ಜೆ.ಆರ್. ಕೃಷ್ಣ ಮತ್ತು ಲಾಲ್ಗುಡಿ ವಿಜಯಲಕ್ಷ್ಮಿ –ಯುಗಳ ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಮಧು ಬಾಲಕೃಷ್ಣ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಪಿ.ಸುಮನಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಮಲ್ಲಾಡಿ ಸಹೋದರರು–ಹಾಡುಗಾರಿಕೆ, 4.00 ಮಹಿಳಾರಂಗ–ಸಖೀ ಸಾಹಿತ್ಯ–ಕವಯಿತ್ರಿ ಶೋಭಾ ಗಂಗಾಧರ್ ಅವರೊಂದಿಗೆ ಮಾತುಕತೆ. ಭಾಗವಹಿಸುವವರು ಅಬ್ದುಲ್ ರಶೀದ್, 4.30 ವೃತ್ತಿ ಮಾರ್ಗದರ್ಶನ–ಸೂಕ್ಷ್ಮ ಜೀವಿ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸುಮನಾ ಕೆ. ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಗ್ರಾಮೀಣರಿಗೆ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಕೆ.ಎಸ್. ಸರಿತಾ ಹಾಗೂ ನವೀನ್‌ಕುಮಾರ್, 8.00 ಸಂಧ್ಯಾರಾಗ–ನಿವೃತ್ತ ಹಿರಿಯ ಅರಣ್ಯಾಧಿಕಾರಿ ಬಿದಿರು ಲಕ್ಷ್ಮಣ್ ಎಂದೇ ಖ್ಯಾತರಾದ ಎ.ಸಿ. ಲಕ್ಷ್ಮಣ್ ಹಾಗೂ ಅವರ ಮಡದಿ ಸಾವಿತ್ರಿ ಲಕ್ಷ್ಮಣ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ ಜಿ.ಶಾಂತಕುಮಾರ್, 9.30 ಮಧುರೈ ಮಣಿ ಅಯ್ಯರ್–ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವ ಗಾಯನ ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

'ಕಲಿಯುವ ಮನೆ'ಯ ಸ್ಫೂರ್ತಿ ದಿವ್ಯಾ

ಬಿಸಿಎ ಮುಗಿಸಿ ಎಂಸಿಎಗೆ ಪ್ರವೇಶ ಪಡೆಯುವ ತವಕ

ಮೈಸೂರು, ಅ.26(ಎಸ್‌ಬಿಡಿ)– ಮೈಸೂರಿನ 'ಕಲಿಯುವ ಮನೆ'ಯ ಹಳೆ ವಿದ್ಯಾರ್ಥಿನಿಯೊಬ್ಬರು ಬಿ.ಸಿಎ ಪದವಿ ಪೂರೈಸುವ ಮೂಲಕ ಕಲಿಕಾ ಸಮಸ್ಯೆಯುಳ್ಳ ಮಕ್ಕಳಿಗೆ ಸ್ಫೂರ್ತಿಯಾಗಿದ್ದಾರೆ.

ಆಂಧ್ರಪ್ರದೇಶ ಮೂಲದ ದಿವ್ಯಾ, ಅಂತಿಮ ಸೆಮಿಸ್ಟರ್‌ನಲ್ಲಿ ಶೇ.81ರಷ್ಟು ಅಂಕಗಳೊಂದಿಗೆ ಬಿ.ಸಿಎ ಪದವಿ ಮುಗಿಸಿದ್ದಾರೆ. ಎಂ.ಸಿಎ ಪದವಿಗೆ ಸೇರಲು ಸಿಇಟಿ ಫಲಿತಾಂಶಕ್ಕಾಗಿ ಕಾದಿದ್ದಾರೆ. ಪದವಿ ಪಡೆಯುವುದರಲ್ಲಿ ವಿಶೇಷವೇನಿದೆ? ಎಂಬ ಪ್ರಶ್ನೆ ಸಾಮಾನ್ಯರಲ್ಲಿ ಮೂಡಬಹುದು. ಆದರೆ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳು ಹಾಗೂ ಪೋಷಕರಿಗೆ ಇದು ಸ್ಫೂರ್ತಿದಾಯಕ ಸಂಗತಿ.

ದಿವ್ಯಾ, ಬಾಲ್ಯದಲ್ಲೇ ಅಪಘಾತದಲ್ಲಿ ತಂದೆಯನ್ನು ಕಳೆದುಕೊಂಡವರು. ಅವರ ತಾಯಿ ಆಂಧ್ರದ ಶಾಲೆಯೊಂದರಲ್ಲಿ ಡಿ–ಗ್ರೂಪ್ ನೌಕರೆ. ಕುಟುಂಬ ಕಷ್ಟದಲ್ಲಿದ್ದ ಕಾರಣ ದಿವ್ಯಾ ಅವರ ಮಾವ ಆಕೆಯನ್ನು ಮೈಸೂರಿಗೆ ಕರೆತಂದು ಶಾಲೆಗೆ ಸೇರಿಸುತ್ತಾರೆ. ಆದರೆ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕೆ ಸಾಧ್ಯವಾಗಿಲ್ಲ. ಕಡೆಗೆ ಕೆಂಚಲಗೂಡು ಗ್ರಾಮದಲ್ಲಿ ದಿವ್ಯಾ ದೀಪ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ 'ಕಲಿಯುವ ಮನೆ'ಗೆ ಸೇರಿಸಿದ್ದಾರೆ.



ಕಲಿಕಾ ಸಮಸ್ಯೆಯಿಂದ ಔಪಚಾರಿಕ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದಿರುವ ಮಕ್ಕಳಿಗಾಗಿ ಇರುವ ಈ ಪರ್ಯಾಯ ಶಾಲೆಯಲ್ಲಿ ಬೆರೆಯುತ್ತಾಳೆ.

ದಿವ್ಯಾಗೆ ಅಕ್ಷರ ಗುರುತಿಸುವುದಕ್ಕೂ ಗೊತ್ತಾಗುತ್ತಿರಲಿಲ್ಲ. ಈ ನಡುವೆ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ದಿವ್ಯಾಗೆ ಕಲಿಕಾ ತೊಂದರೆ ಇರುವುದು ಖಚಿತವಾಗಿತ್ತು. ಆಗ 13 ವರ್ಷವಾಗಿದ್ದ ಆಕೆಯ ವಿದ್ವತ್ ಕಾರ್ಯಕ್ಷಮತೆ ಪ್ರಾಥಮಿಕ ಶಾಲೆ ಮಟ್ಟದಲ್ಲಿದೆ, ಶೇ.60ರಷ್ಟು ಶೈಕ್ಷಣಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಈಕೆಗೆ ವಿಶೇಷ ಕಲಿಕೆಯ ಅಗತ್ಯವಿದೆ ಎಂದು ವರದಿ ನೀಡಲಾಗಿತ್ತು. ಈ ನಿಟ್ಟಿನಲ್ಲಿ ದಿವ್ಯಾ ಅವರಿಗೆ ಕಲಿಯುವ ಮನೆಯಲ್ಲಿ ಶಿಕ್ಷಣ ನೀಡಲಾಗಿತ್ತು.

ವಿಶೇಷ ಗಮನವಿರಿಸಿ ದಿವ್ಯಾಳಿಗೆ ಕಲಿಸಲಾಯಿತು. 17 ವರ್ಷವಿದ್ದಾಗ ಸಂಸ್ಥೆಯ 2018ರ ಪ್ರಜ್ಞಾ ತಂಡದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಉತ್ತೀರ್ಣರಾದರು. ಅಷ್ಟರಲ್ಲಾಗಲೇ ದಿವ್ಯಾ ಕಲಿಕಾ ಮಟ್ಟ ವಿಕಸನವಾಗಿತ್ತು. ಮೈಸೂರಿನ ಸಾಮಾನ್ಯ ಕಾಲೇಜಿನಲ್ಲಿ ಪಿಯುಸಿ ಪೂರ್ಣಗೊಳಿಸಿ, ತುಮಕೂರಿನ ಕಾಲೇಜೊಂದರಲ್ಲಿ ಬಿ.ಸಿಎ ಸೇರಿದರು. ಇದೀಗ ಉತ್ತಮ ಅಂಕಗಳೊಂದಿಗೆ ಬಿ.ಸಿಎ ಪೂರ್ಣಗೊಳಿಸಿ, ಎಂ.ಸಿಎಗೆ ಸೇರಲು ಮುಂದಾಗಿದ್ದಾರೆ.

ಹಲವು ಕಾರಣಗಳಿಂದ ಎಷ್ಟೋ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಇತರೆ ವಿದ್ಯಾರ್ಥಿಗಳಂತೆ ಸಾಮಾನ್ಯ ಕಲಿಕೆ ಅವರಿಂದ ಸಾಧ್ಯವಾಗುವುದೇ ಇಲ್ಲ. ಇದರಿಂದ ಪೋಷಕರೂ ಚಿಂತೀಗೀಡಾಗಿ ಇಡೀ ಕುಟುಂಬದ ವಾತಾವರಣವೇ ಹಾಳಾಗುವ ಸಂದರ್ಭ ಸೃಷ್ಟಿಯಾಗುತ್ತದೆ. ಅಂತಹ ವಿದ್ಯಾರ್ಥಿಗಳೂ ಪರ್ಯಾಯ ಕಲಿಕಾ ಮಾರ್ಗ ಹಾಗೂ ಸೂಕ್ತ ಮಾರ್ಗದರ್ಶನದಿಂದ ಅವರೂ ಸಾಮಾನ್ಯ ವಿದ್ಯಾರ್ಥಿಗಳಂತೆ ಸಾಧಿಸಬಲ್ಲರು ಎನ್ನುವುದಕ್ಕೆ ದಿವ್ಯಾ ಮಾದರಿಯಾಗಿದ್ದಾರೆ.

ಚಿಕ್ಕಬಳ್ಳಾಪುರ ಬಳಿ ಭೀಕರ ಅಪಘಾತ: 13 ಮಂದಿ ಸಾವು



ಮೃತರ ಕುಟುಂಬಕ್ಕೆ ತಲಾ 2 ಲಕ್ಷ ಪರಿಹಾರ ಘೋಷಿಸಿದ ಸಿಎಂ

ಬೆಂಗಳೂರು, ಅ.26– ಚಿಕ್ಕಬಳ್ಳಾಪುರದ ಚಿತ್ರಾವತಿ ಸಮೀಪ ಗುರುವಾರ ಸಂಭವಿಸಿದ ಭೀಕರ ಅಪಘಾತದಲ್ಲಿ 13 ಮಂದಿ ಮೃತಪಟ್ಟಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಎಂ, ಚಿಕ್ಕಬಳ್ಳಾಪುರದ ಚಿತ್ರಾವತಿ ಸಮೀಪ ಇಂದು ಸಂಭವಿಸಿದ ಭೀಕರ ಅಪಘಾತದಲ್ಲಿ 13 ಮಂದಿ ಮೃತಪಟ್ಟ ಸುದ್ದಿ ತಿಳಿದು ಅತೀವ ನೋವಾಯಿತು. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಮೃತ ದುರ್ದೈವಿಗಳ ಕುಟುಂಬಗಳಿಗೆ ತಲಾ 2 ಲಕ್ಷ ಪರಿಹಾರ ನೀಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಇಂದು ಬೆಳಗಿನ ಜಾವ ಚಿಕ್ಕಬಳ್ಳಾಪುರ ಸಂಚಾರಿ ಪೊಲೀಸ್ ಠಾಣೆಯ ಮುಂದೆಯೇ ರಸ್ತೆ ಬದಿ ನಿಂತಿದ್ದ ಸಿಮೆಂಟ್ ಲಾರಿಗೆ ಟಾಟಾ ಸುಮೋ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಸುಮೋದಲ್ಲಿ 12 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಮತ್ತು ಗಂಭೀರವಾಗಿ ಗಾಯಗೊಂಡಿದ್ದ ಒಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಟಾಟಾ ಸುಮೋ ಬಾಗೇಪಲ್ಲಿಯಿಂದ ಚಿಕ್ಕಬಳ್ಳಾಪುರದ ಕಡೆ ಹೋಗುತ್ತಿತ್ತು. ಆದರೆ ದಟ್ಟ ಮಂಜು ಕವಿದ ಹಿನ್ನೆಲೆಯಲ್ಲಿ ಟಾಟಾ ಸುಮೊ ಚಾಲಕನಿಗೆ ಸರಿಯಾಗಿ ರಸ್ತೆ ಕಾಣಿಸಿಲ್ಲ. ಇದರಿಂದ ರಸ್ತೆ ಬದಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ.



ಮೈಸೂರಿಗೆ ಗುರುವಾರ ಆಗಮಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಅವರು ಸ್ವಾಗತಿಸಿದರು. ಈ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ಹರೀಶ್, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಕೋಟೆ ಸುರೇಶ್, ಐಎನ್‌ಬಿಸಿಡಬ್ಲ್ಯೂಎಫ್ ತಾಲೂಕು ಅಧ್ಯಕ್ಷ ಪುಟ್ಟರಾಜು ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಅ.26–ಮೈಸೂರು ವಿಶ್ವವಿದ್ಯಾನಿಲಯ 2023–24ನೇ ವಿವಿಧ ಕೋರ್ಸ್‌ಗಳನ್ನು (ಡಿಪ್ಲೊಮಾ, ಪಿಜಿ ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್) ಪ್ರಾರಂಭಿಸಲಾಗಿದೆ. ಈ ಕೋರ್ಸ್‌ಗಳಿಗೆ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಅಂಕಿ ಅಂಶಗಳ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಇಲ್ಲಿ ವಿತರಿಸಲಾಗುತ್ತಿದೆ. ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅ.31 ಕೊನೆ ದಿನ ಆಗಿರುತ್ತದೆ. ದಂಡ ಸಹಿತ ನ.11ರಂದು ಕೊನೆ ದಿನ. ಹೆಚ್ಚಿನ ಮಾಹಿತಿಗೆ ಮೊ. 97397573358, 9743861386 ಸಂಪರ್ಕಿಸಬಹುದು.

ಶ್ರೀಮತಿ ಕೆ.ವಿಜಯ ನಿಧನ

ಮೈಸೂರು: ಮಹಾರಾಣಿ ಕಾಲೇಜಿನ ನಿವೃತ್ತ ಪ್ರೊಫೆಸರ್ ವಿ.ಕೆಂಪವೀರಯ್ಯ ಅವರ ಪತ್ನಿ ಶ್ರೀಮತಿ ಕೆ.ವಿಜಯ (71) ಅವರು ಇಂದು ರಾತ್ರಿ ಮೈಸೂರಿನ ಸರಸ್ವತಿಪುರಂನಲ್ಲಿರುವ ನಿವಾಸದಲ್ಲಿ ನಿಧನರಾದರು. ದಿವಂಗತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಶುಕ್ರವಾರ (ಅ.27) ಮಧ್ಯಾಹ್ನ 12 ಗಂಟೆಗೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



FORM NO.18 and 22
Notice for appearance in Appeals under Order 41 Rule 14 CPC, and Rules 1,2,4 and 11 of Chapter IV Karnataka High Court Rules and General Notice in Respect of interlocutory Application
IN THE HIGH COURT OF KARNATAKA AT BANGALORE
Notice to the R-1 to 12 vide order dated 13.10.2023
R.S.A.No.829 / 2018

Mr.H.B.ASHOK and Anr., ...Appellants
(By Sri Sabahath Sultana - Adv)
V/S
MR. RAMU and Ors., ...Respondents
(By Sri. M.N.Umashankar - Adr for R-13)
(By Sri. K.Ananda - Adv for R-14)
(By Sri N.Murali - Adv for R-15)

Appeal from the Judgement and decree dated 16.12.2017 passed in R.A.No.489/2016 on the file of the II additional District Judge, Mysuru and also on I.A.1/2018 for CD of 11 days in filing the above appeal

To: Respondents
R-1. MR. RAMU
S/o Doddamarigowda, aged about 58 years.
R-2. MRS. THAYAMMA
W/o Sri. Annegowda, aged about 50 years.
R-3. MRS. MANNIYAMMA
W/o Late Mr. Raju, aged about 38 years.
R-4. MR. SRIKANTH
S/o Late Mr.Raju, aged about 20 years.
R-5. MS. SWETHA D/o Late Mr. Raju, aged about 20 years. **R-1 to R-5 are R/at** No.579, Hosabeedi, Madikeri Main Road, Hinkal Mysuru - 570017.
R-6. MRS. NAGAMMA Dead by Lrs
R-6a. DODDEGOWDA
H/o late Nagamma, aged about 51 years.
R-6b. BASAVARAJU D
S/o Doddegowda, aged about 23 years.
R-6a and R-6b are R/at :#236, Lakshmipura, Kasaba Hobli, Naganahalli Post, Mysuru - 570003.
R-7. MR. PUTTU
S/o Doddamarigowda, aged about 42 years.
R-8. MR. BEERAPPA
S/o Doddamarigowda, aged about 38 years.
R-9. MRS. LAKSHMI
D/o Doddamarigowda, aged about 34 years.
R-10. MRS. JAYAMMA
W/o Late Shivanna, aged about 65 years.
R-11. MR. KARUNA
S/o Late Shivanna, aged about 28 years.
R-12. MRS. HEMA D/o Late Shivanna, aged about 23 years. **R-7 to R-12 are R/at** :#579, Hosabeedi, Madikeri Main Road, Hinkal, Mysuru - 570017.

Whereas the aforementioned appeal preferred has been registered by this Court.

Notice is hereby given to you to appear in this court in person or through an advocate duly instructed or through some one authorized by law to act for you in this case **on 01-12-2023 at 10.30 AM in** case you intend to contest the appeal. If you fail so to appear, the appeal will be dealt with, heard and decided in your absence.

Issued under my hand and the seal of this court on **13th day of October 2023.**

BY ORDER OF THE COURT
Assistant Registrar

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಅರ್ಜುನ್ ಟಿ ಬಿನ್ ಲೇಟ್ ತಿಮ್ಮೇಗೌಡ ರವರು ಮೈಸೂರು ತಾಲ್ಲೂಕು–570017, ಹಿನಕಲ್ ಗ್ರಾಮ, ಕಸಬಾ ಹೋಬಳಿ, ತಮ್ಮಡಗೇರಿ ಬೀದಿ, ಮನೆ ನಂ. 01 ರಲ್ಲಿ ವಾಸವಾಗಿರುವ ಲೇಟ್ ಹೆಚ್. ಎನ್. ಬಸವರಾಜು ರವರ ಧರ್ಮಪತ್ನಿಯಾದ ಶ್ರೀಮತಿ ಮೀನಾಕ್ಷಮ್ಮ ರವರಿಂದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 2ನೇ ಹಂತ, ನಿವೇಶನದ ಸಂಖ್ಯೆ 4040 ರ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು,

ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ಹಕ್ಕು ಅಥವಾ ತಕರಾರುಗಳಿದ್ದಲ್ಲಿ ಈ ದಿನದಿಂದ 07 (ಏಳು) ದಿನಗಳ ಒಳಗಾಗಿ ಈ ಕೆಳಗೆ ತಿಳಿಸಿದ ವಿಳಾಸಕ್ಕೆ ತಮ್ಮ ತಕರಾರನ್ನು ದಾಖಲೆ ಸಮೇತ ಸಲ್ಲಿಸಬಹುದಾಗಿರುತ್ತದೆ. 7 (ಏಳು) ದಿನಗಳ ಒಳಗಾಗಿ ಯಾವುದೇ ತಕರಾರುಗಳು ಬರದೇ ಹೋದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ಮಾಡಿಕೊಳ್ಳಲು ಬದ್ಧರಾಗಿರುತ್ತಾರೆ. ಏಳು (07) ದಿನಗಳ ಮೇಲ್ಪಟ್ಟು ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

-: ಅನುಸೂಚಿ ಸ್ವತ್ತಿನ ವಿವರ :-

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 2ನೇ ಹಂತ, ನಿವೇಶನದ ಸಂಖ್ಯೆ 4040, ರ ಸ್ವತ್ತಿಗೆ ಚೆಕ್ಕುಬಂಧಿ:– ಪೂರ್ವಕ್ಕೆ: ನಿವೇಶನ ಸಂಖ್ಯೆ 4069, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 4041, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 4039

ಈ ಮಧ್ಯ ಇರುವ ಪೂರ್ವ–ಪಶ್ಚಿಮ–12.00 ಮೀಟರ್ ಮತ್ತು ಉತ್ತರ–ದಕ್ಷಿಣ 09.00 ಮೀಟರ್, ಒಟ್ಟು ವಿಸ್ತೀರ್ಣ 108.00 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನದ ಸ್ವತ್ತು.

ಎಸ್. ಸುರೇಶ ಬಿ.ಬಿ.ಎಂ. ಎಲ್.ಎಲ್.ಬಿ
(ವಕೀಲರು)
ನಂ. 974, 7ನೇ ಮೇನ್, 3ನೇ ಹಂತ,
ಗೋಕುಲಂ, ಮೈಸೂರು–570 002
ಮೊಬೈಲ್ ಸಂಖ್ಯೆ 98862–29668

ದಿನಾಂಕ : 26–10–2023

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ.ರಸ್ತೆ, ಮೈಸೂರು
ಸಂಖ್ಯೆ:ಮೈನಪ್ರಾ/ವಿ.ತ–5ಬಿ/2023–24 ದಿನಾಂಕ: 14–08–2023

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀ ಮಾರಯ್ಯರವರಿಗೆ ದಿ:04.02.1985 ರಂದು ಕೆಸರೆ 3ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ: 721 ಮಂಜೂರಾಗಿದ್ದು, ದಿನಾಂಕ 22–05–1990ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಮಂಜೂರಾತಿದಾರರಾದ ಶ್ರೀ ಮಾರಯ್ಯ ರವರು ದಸ್ತಾವೇಜು ಸಂಖ್ಯೆ: 4ನೇ ಪುಸ್ತಕದ 3ನೇ ಸಂಪುಟದಲ್ಲಿ 283ನೇ ನಂಬರಾಗಿ, ದಿ:24–01–1991ರಂದು ಶ್ರೀಮತಿ ಯಶೋಧ ರವರಿಗೆ ನೋಂದಾಯಿತ ಜಿಪಿಎ ಮೂಲಕ ನೀಡಿರುತ್ತಾರೆ.

ತದನಂತರ ಶ್ರೀಮತಿ ಯಶೋಧರವರಿಗೆ ನೀಡಿರುವ ಜಿಪಿಎ ಅನ್ನು 4ನೇ ಪುಸ್ತಕದ 3ನೇ ಸಂಪುಟದಲ್ಲಿ 395ನೇ ಪುಟದಲ್ಲಿ 142ನೇ ನಂಬರಾಗಿ, ದಿನಾಂಕ: 08.02.1994 ರಂದು ನೋಂದಾಯಿತ ರದ್ದತಿ ಆಗಿರುತ್ತದೆ.

ನಂತರ ಶ್ರೀ ಮಾರಯ್ಯ ರವರು 1ನೇ ಪುಸ್ತಕದ 1253ನೇ ಸಂಪುಟದಲ್ಲಿ 171–173ನೇ ಪುಟದಲ್ಲಿ 4988ನೇ ನಂಬರಾಗಿ, ದಿನಾಂಕ 08–02–1994ರಂದು ಶ್ರೀ ಎಂ.ರಾಮು ರವರಿಗೆ ನೋಂದಾಯಿತ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಶ್ರೀ ಎಂ.ರಾಮು ರವರು 1ನೇ ಪುಸ್ತಕದ 1433ನೇ ಸಂಪುಟದಲ್ಲಿ 119–121ನೇ ಪುಟದಲ್ಲಿ 3753ನೇ ನಂಬರಾಗಿ, ದಿನಾಂಕ: 10–11–1995ರಂದು ಶ್ರೀ ತಮ್ಮೇಗೌಡರವರಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅದರಂತೆ ಕ್ರಯದಾರರಾದ ಶ್ರೀ ತಮ್ಮೇಗೌಡ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ಕ್ರಯವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.
(ಸ್ಥಳೀಯ ಪತ್ರಿಕೆ ಹಾಗೂ ರಾಜ್ಯ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲು ಸೂಚಿಸಿದೆ)

ಸಹಿ/– ವಿಶೇಷ ತಹಶೀಲ್ದಾರರು
ವಲಯ ಕಚೇರಿ–5ಬಿ
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣರ ಸಂಘ (ರಿ.)
ನಂ.1222, 1ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570004.

ಪತ್ರಿಕಾ ಪ್ರಕಟಣೆ

ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ ಸಮುದಾಯದಲ್ಲಿ ಈ ಮೂಲಕ ಸಮುದಾಯದ ಬಂಧುಗಳಿಗೆ ತಿಳಿಸುವುದೇನೆಂದರೆ, ನಮ್ಮ ಸಂಘವು ನೋಂದಣಿಯಾಗಿ ಅಕ್ಟೋಬರ್ ಮಾಹೆಗೆ 50 ವರ್ಷಗಳು ತುಂಬಿರುವ ವಿಚಾರವು ಹರ್ಷದಾಯಕವಾಗಿದ್ದು, ಸದರಿ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಇದೇ ತಿಂಗಳು 28–10–2023ನೇ ಶನಿವಾರ ಮತ್ತು 29–10–2023ನೇ ಭಾನುವಾರದ ದಿವಸ ಸಂಘದ ಕಟ್ಟಡದಲ್ಲಿ ಆಚರಿಸಲಾಗುತ್ತಿದೆ. ಸಮಾಜ ಬಾಂಧವರಿಗೆ ಈಗಾಗಲೇ ಆಹ್ವಾನ ಪತ್ರಿಕೆಯನ್ನು ತಲುಪಿಸಲಾಗಿದೆ. ಒಂದು ವೇಳೆ ಸಮುದಾಯದ ಯಾವುದೇ ಕುಟುಂಬಕ್ಕೆ ಆಹ್ವಾನ ಪತ್ರಿಕೆ ತಲುಪದಿದ್ದ ಪಕ್ಷದಲ್ಲಿ ಇದನ್ನೇ ವೈಯಕ್ತಿಕ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಮೇಲ್ಕಂಡ ಎರಡೂ ದಿನದ ಸಮಾರಂಭಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸಂಘದ ವತಿಯಿಂದ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಸಹಿ/– ಜಿ.ಎ.ಉಮೇಶ್, ಕಾರ್ಯದರ್ಶಿ

ದಸರಾ ವೇಳೆ ಬಗೆಬಗೆಯ ಖಾದ್ಯ ಸವಿದ ಸ್ಥಳವೀಗ ಅನೈರ್ಮಲ್ಯದ ತಾಣ

ತಿನಿಸುಗಳಂತೆ ಈಗ ತ್ಯಾಜ್ಯವೂ ತರಾವರಿ!





ಆಹಾರ ಮೇಳ ನಡೆದ ಭಾರತ್ ಸ್ಕೌಟ್ಸ್–ಗೈಡ್ಸ್ ಮೈದಾನದಲ್ಲಿ ಗುರುವಾರ ಸಂಜೆ ಕಂಡು ಬಂದ ದೃಶ್ಯ. ಮದ್ಯದ ಎರಡು ಬಾಟಲಿಗಳೂ ಬಿದ್ದಿರುವುದನ್ನು ಕಾಣಬಹುದು.

ಮೈಸೂರು, ಅ.26 (ಪಿಎಂ)– ದಸರಾ ಹಿನ್ನೆಲೆಯಲ್ಲಿ ಆಹಾರ ಮೇಳ ನಡೆದ ಸ್ಥಳವೀಗ ಅನೈರ್ಮಲ್ಯದ ತಾಣವಾಗಿದೆ. ಎಲ್ಲೆಂದರಲ್ಲಿ ಕಾಣಸಿಗುವ ರಾಶಿ ರಾಶಿ ಪ್ಲಾಸ್ಟಿಕ್ ಬಾಟಲಿಗಳು ಸೇರಿದಂತೆ ತರಾವರಿ ತ್ಯಾಜ್ಯಗಳ ತಾಣವಾಗಿ ಮಾರ್ಪಟ್ಟಿದೆ. ಮೈಸೂರು ನಗರದ ಹೃದಯ ಭಾಗದಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದ ದುಸ್ಥಿತಿ ಇದು. ಇಲ್ಲಿ 8 ದಿನಗಳ ಕಾಲ ನಡೆದ ಆಹಾರ ಮೇಳದಲ್ಲಿ ತರಾವರಿ ತಿನಿಸುಗಳು ಇದ್ದಂತೆಯೇ ಬಗೆ ಬಗೆಯ ತ್ಯಾಜ್ಯಗಳ ಗುಡ್ಡೆಯೂ ಇದೀಗ ಇಲ್ಲಿ ತಲೆ ಎತ್ತಿದೆ.





ಮೇಳವು ದಸರಾ ಉದ್ಘಾಟನೆಯಾದ ಅ.15ರಂದು ಚಾಲನೆ ಪಡೆದುಕೊಂಡು, ಅ.22ಕ್ಕೆ ಮುಕ್ತಾಯ ಕಂಡಿದೆ. ಮೇಳ ಸಮಾಪ್ತಿಗೊಂಡು 4 ದಿನಗಳು ಕಳೆದರೂ ಮೈದಾನದ ಸ್ವಚ್ಛತೆಯತ್ತ ಗಮನ ನೀಡದ ಕಾರಣ ಇಡೀ ಮೈದಾನವೀಗ ಗಬ್ಬೆದ್ದು ನಾರುವಂತಾಗಿದ್ದು, ಆಹಾರ ತ್ಯಾಜ್ಯಗಳ ದುರ್ವಾಸನೆ ಇಲ್ಲಿನ ವಾತಾವರಣವನ್ನು ಆವರಿಸುವಂತಾಗಿದೆ. ಮೇಳದಲ್ಲಿ ತಾತ್ಕಾಲಿಕ ಮಳಿಗೆಗಳ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಸಲಾಕೆ ಹಾಗೂ ಶಾಮಿಯಾನ ತೆರವು ಕಾರ್ಯವೂ ಆಮೆಗತಿಯಲ್ಲಿ ನಡೆಯುತ್ತಿದೆ. ಅನೈರ್ಮಲ್ಯಕ್ಕೆ ಎಡೆ ಮಾಡುವ ತ್ಯಾಜ್ಯಗಳನ್ನಾದರೂ ತ್ವರಿತಗತಿಯಲ್ಲಿ ತೆರವು ಮಾಡುವುದು ಸೂಕ್ತವಲ್ಲವೇ ಎಂಬುದು ಪ್ರಜ್ಞಾವಂತ ನಾಗರಿಕರ ಪ್ರಶ್ನೆಯಾಗಿದೆ.

150ಕ್ಕೂ ಹೆಚ್ಚಿನ ಮಳಿಗೆಗಳು ಇಲ್ಲಿ ನಿರ್ಮಾಣಗೊಂಡಿದ್ದವು. ಸಸ್ಯಾಹಾರ ಮಾತ್ರವಲ್ಲದೆ, ಮಾಂಸಾಹಾರದ ಮಳಿಗೆಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಇವುಗಳಿಂದ ಉತ್ಪತ್ತಿಯಾದ ತ್ಯಾಜ್ಯವೀಗ ಅಶುಚಿತ್ವಕ್ಕೆ ಕಾರಣವಾಗಿದೆ. ಪ್ಲಾಸ್ಟಿಕ್ ಬಾಟಲಿ, ಗಾಜಿನ ಬಾಟಲಿ, ಪ್ಲಾಸ್ಟಿಕ್ ಕವರ್, ಪಾನೀಯ ಸೇವಿಸಿದ ಪ್ಲಾಸ್ಟಿಕ್ ಪೈಪ್, ಪ್ಲಾಸ್ಟಿಕ್ ಚೀಲ, ಪೇಪರ್ ತಟ್ಟೆಗಳು ಇಲ್ಲಿ ರಾಶಿ ರಾಶಿಯಾಗಿ ಗುಡ್ಡೆ ಬಿದ್ದಿದ್ದರೂ ಶುಚಿಗೊಳಿಸುವ ಕಾರ್ಯಕ್ಕೆ ಮಾತ್ರ ಇನ್ನೂ ಚಾಲನೆ ಸಿಕ್ಕಿಲ್ಲ.

ದಸರಾ ಆಹಾರ ಮೇಳವು ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಗಳಿಸುವ ಮೂಲಕ ಹೆಚ್ಚಿನ ಜನರು ಇಲ್ಲಿಗೆ ಲಗ್ಗೆ ಇಟ್ಟು ಬಗೆಬಗೆ ತಿನಿಸು ಸವಿಯುವ ತಾಣವಾಗುತ್ತಾ ಸಾಗಿದೆ. ಹೀಗಾಗಿ ಈ ಹಿಂದಿನ ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಥಳಗಳಲ್ಲಿ ಆಹಾರ ಮೇಳ ಆಯೋಜಿಸುವುದು ರೂಢಿಗೆ ಬಂದಿತ್ತು. ಆದರೆ ಈ ಬಾರಿ ಕಾರಣಾಂತರಗಳಿಂದ ಒಂದೇ ಕಡೆಗೆ ಸೀಮಿತವಾಗಿತ್ತು.

ಹಾಗಾಗಿ ಆಹಾರ ಪ್ರಿಯರ ಲಗ್ಗೆ ಈ ಬಾರಿ ಭಾರಿಯೇ ಹೆಚ್ಚಿತ್ತು ಎನ್ನಬಹುದು. ರುಚಿ ತಿನಿಸುಗಳನ್ನು ಬಾಯಿ ಚಪ್ಪರಿಸಿ ತಿನ್ನಲು ಜನಸಾಗರವೇ ಇಲ್ಲಿಗೆ ಹರಿದು ಬರುತ್ತಿತ್ತು. ಸಂಜೆಯಾಗುತ್ತಿದ್ದಂತೆ ಇಲ್ಲಿನ ಜನದಟ್ಟಣೆಯಲ್ಲಿ ಕಾಲಿಡಲೂ ಜಾಗ ಇಲ್ಲದಂತಾಗುತ್ತಿತ್ತು. ಈಗ ಕಾಲಿಟ್ಟಲ್ಲಿ ಬಗೆಬಗೆಯ ತ್ಯಾಜ್ಯಗಳು ಅಂಟಿಕೊಳ್ಳುವ ದುಸ್ಥಿತಿ ನಿರ್ಮಾಣವಾಗಿದೆ.

ದಸರಾ ಹಿನ್ನೆಲೆಯಲ್ಲಿ ಸ್ವಚ್ಛತೆ ಮತ್ತು ವ್ಯವಸ್ಥೆ ಉಪ ಸಮಿತಿ ವತಿಯಿಂದ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲು ಅ.13ರಂದೇ ಚಾಲನೆ ನೀಡಲಾಗಿತ್ತು. ಈ ಕಾರ್ಯಕ್ಕಾಗಿ ಪಾಲಿಕೆ ಪೌರಕಾರ್ಮಿಕರ ಹೊರತಾಗಿ ಹೆಚ್ಚುವರಿಯಾಗಿ ಗುತ್ತಿಗೆದಾರರ ಮೂಲಕ 385 ಸ್ವಚ್ಛತಾ ಸಿಬ್ಬಂದಿ ನಿಯೋಜಿಸಲಾಗಿತ್ತು. ಇವರು ದಿನದ 3 ಪಾಳಿಯಲ್ಲಿ ಅ.25ರವರೆಗೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಾರೆಂದು ಸದರಿ ಉಪಸಮಿತಿಯವರೇ ಮಾಹಿತಿ ನೀಡಿದ್ದರು. ಇಷ್ಟೆಲ್ಲಾ ವ್ಯವಸ್ಥೆ ಮಾಡಿಕೊಂಡೂ ಆಹಾರ ಮೇಳದಲ್ಲಿ ಈ ಪರಿಯ ತ್ಯಾಜ್ಯ ತಲೆ ಎತ್ತಲು ಹೇಗೆ ಸಾಧ್ಯ ಎಂಬುದು ಪ್ರಶ್ನೆಯಾಗಿದೆ. ಒಂದು ವೇಳೆ ಆಗಾಗ್ಗೆ ಸ್ವಚ್ಛತೆ ಮಾಡಿದ್ದೂ ಕೊನೆ ದಿನದಲ್ಲಿ ಮಳಿಗೆ ಖಾಲಿ ಮಾಡಿದ ಸಂದರ್ಭ ಉತ್ಪತ್ತಿಯಾದ ತ್ಯಾಜ್ಯ ಎಂದುಕೊಂಡರೂ ಮೇಳ ಮುಗಿದ 4 ದಿನಗಳು ಕಳೆದರೂ ಶುಚಿ ಮಾಡದೇ ಇರುವುದು ಎಷ್ಟು ಸರಿ ಎಂಬುದು ಜನರ ಪ್ರಶ್ನೆಯಾಗಿದೆ.

ಮದ್ಯದ ಬಾಟಲಿಗಳೂ ಇವೆ: ಇಲ್ಲಿ ವಿವಿಧ ರೀತಿಯ ತ್ಯಾಜ್ಯ ಗುಡ್ಡೆ ಹಿಡಿದಿರುವ ಜೊತೆಗೆ ಕೆಲವೆಡೆ ಮದ್ಯದ ಬಾಟಲಿಗಳು ಇವೆ. ಒಂದೆರಡು ಮದ್ಯದ ಬಾಟಲಿಗಳೂ ಬಿದ್ದಿದ್ದು, ಇವುಗಳನ್ನು ಮೇಳದ ಸಂದರ್ಭದಲ್ಲಿ ಬೀಸಾಡಲಾಗಿದೆಯೋ ಅಥವಾ ಮುಗಿದ ಬಳಿಕ ಎಸೆಯಲಾಗಿದೆಯೋ ಗೊತ್ತಿಲ್ಲ. ಒಟ್ಟಾರೆ ನಾನಾ ತ್ಯಾಜ್ಯಗಳ ಜೊತೆಗೆ ಮದ್ಯದ ಬಾಟಲಿಗಳೂ ಇರುವುದು ಗುರುವಾರ ಸಂಜೆ ಕಂಡಿತು.

ಸೂಸುತ್ತಿದೆ ದುರ್ವಾಸನೆ: ಮೈದಾನದಲ್ಲಿ ವಿವಿಧ ರೀತಿಯ ಒಣಕಸ ರಾಶಿ ಹಿಡಿದಿರುವುದು ಒಂದೆಡೆಯಾದರೆ, ಇಲ್ಲಿರುವ ವಿವಿಧ ರೀತಿಯ ಹಸಿ ಕಸದಿಂದ ದುರ್ವಾಸನೆ ಹೊರಹೊಮ್ಮುತ್ತಿದೆ. ಈ ಮೈದಾನಕ್ಕೆ ಹೊಂದಿಕೊಂಡಂತೆ ಒಂದೆಡೆ ಶಾಲೆ ಇದ್ದರೆ, ಮತ್ತೊಂದೆಡೆ ಮೈಸೂರು ವಿವಿ ಕ್ರಾಫರ್ಡ್ ಭವನ ಇದ್ದು, ಕೃಷ್ಣರಾಜ ಬುಲೇವಾರ್ಡ್ ಮುಖ್ಯ ರಸ್ತೆ ಸಹ ಇದೆ. ಇಲ್ಲಿ ನಿತ್ಯ ಜನಸಂಚಾರ ಇದ್ದು, ಗಾಳಿ ಬೀಸುತ್ತಿದ್ದಂತೆ ಆಗಾಗ್ಗೆ ಹೊರಸೂಸುವ ದುರ್ವಾಸನೆ ಹಿನ್ನೆಲೆಯಲ್ಲಿ ಇತ್ತ ಓಡಾಡುವ ಜನ ಮೂಗು ಹಿಡಿದು ಸಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆಹಾರ ಮೇಳ ಆಯೋಜಿಸಿದ್ದ ಉಪಸಮಿತಿಯವರು ಇನ್ನಾದರೂ ಇತ್ತ ಗಮನಹರಿಸಿ ತ್ವರಿತಗತಿಯಲ್ಲಿ ಸ್ವಚ್ಛತೆಗೆ ಕ್ರಮ ವಹಿಸುವರೇ ಕಾದು ನೋಡಬೇಕಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : "ಅಪ್ಪ,ಅಮೆರಿಕ ದೂರಾನೋ ಅಥವಾ ಆಕಾಶಾನೋ?"
ಅಪ್ಪ : "ಅಮೆರಿಕ, ಯಾಕಂದ್ರೆ ಆಕಾಶ ಆದ್ರೆ ಇಲ್ಲಿಂದಾನೆ ಕಾಣುತ್ತೆ, ಆದರೆ ಅಮೆರಿಕ ಕಾಣಿಸೊಲ್ಲ!"

ಮೈಸೂರು ಮಿತ್ರ

ಶುಕ್ರವಾರ, 27 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜಗತ್ತಿನ ತುಂಬಾ ಸುಲಭದ ಮತ್ತು ಕಷ್ಟದ ಸಂಗತಿ ಎಂದರೆ "ತಪ್ಪು". ಇನ್ನೊಬ್ಬರು ಮಾಡಿದರೆ ಗಮನಿಸುವುದು 'ಸುಲಭ', ನಾವೇ ಮಾಡಿದರೆ ಒಪ್ಪುವುದು 'ಕಷ್ಟ'. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುರು ಕೊಟ್ಟ ಜೋಳಿಗೆ ಅಂತ ಗೂಟಕ್ಕೆ ಹಾಕಿದರೆ ಊಟ ಹಾಕೀತೆ?

ನಿಮ್ಮ ಪತ್ರಗಳು

ಅತಿ ವೇಗದಲ್ಲಿ ಬೆಳೆಯುತ್ತಿರುವ ಭಾರತದ ಆರ್ಥಿಕತೆ

ಮಾನ್ಯರೆ,

ಭಾರತ 2030ರ ವೇಳೆಗೆ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯ ದೇಶವಾಗಲಿದೆ ಎಂಬ ಎಸ್ ಆಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟಲಿಜೆನ್ಸ್ ಸಂಸ್ಥೆಯ ವರದಿ ಸ್ವಾಗತಾರ್ಹವಾಗಿದೆ. ಈಗಾಗಲೇ ಬ್ರಿಟನ್ ದೇಶವನ್ನು ಹಿಂದಿಕ್ಕಿ, ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ದೇಶವಾಗಿರುವ ಭಾರತದ ಆರ್ಥಿಕ ಮೌಲ್ಯ 297 ಲಕ್ಷ ಕೋಟಿ ರೂಪಾಯಿಗಳಾಗಿದೆ. 2030ರ ವೇಳೆಗೆ ಇದು 606 ಲಕ್ಷ ಕೋಟಿಗಳಷ್ಟು ಆಗಲಿದೆ ಎಂದು ಅಂದಾಜಿಸಲಾಗಿದೆ. ಈ ಮೂಲಕ ಜಪಾನ್ ದೇಶವನ್ನು ಹಿಂದಿಕ್ಕಿ ವಿಶ್ವದ ಮೂರನೇ ಬಲಾಢ್ಯ ಆರ್ಥಿಕ ರಾಷ್ಟ್ರವಾಗಲು ಕ್ಷಣಗಣನೇ ಆರಂಭವಾಗಿದೆ. ಆರ್ಥಿಕ ತಜ್ಞರ ಸಮೀಕ್ಷೆಗಳ ಪ್ರಕಾರ, ಭಾರತದ ಜಿಡಿಪಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ ಶೇ 6.2 ರಿಂದ 6.3 ರಷ್ಟು ವೃದ್ಧಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಭಾರತದ ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣ ಇರಲಿದೆ ಎಂಬುದು ಕಳೆದ ದಶಕದಲ್ಲಿ ಆಗಿರುವ ವಿದೇಶಿ ನೇರ ಬಂಡವಾಳ ಹೂಡಿಕೆಯೇ ಸೂಚಿಸುತ್ತದೆ. ನಗರ ಪ್ರದೇಶಗಳಲ್ಲಿ ಕುಟುಂಬದ ಆದಾಯ ಹೆಚ್ಚಾಗುತ್ತಿರುವುದು ಸಹಾ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. 2023–24 ನೇ ವರ್ಷದಲ್ಲಿ ಸಹಾ, ಭಾರತವು ವಿಶ್ವದ ಪ್ರಮುಖ ಆರ್ಥಿಕ ವ್ಯವಸ್ಥೆಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ದೇಶವಾಗಿರುವುದು ನಮ್ಮ ಆರ್ಥಿಕತೆಯ ಬಲಾಢ್ಯತೆಯನ್ನು ಪ್ರತಿಬಿಂಬಿಸುತ್ತದೆ. ಒಟ್ಟಿನಲ್ಲಿ ಭಾರತ, ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವುದು ಗುಣಾತ್ಮಕ ಬೆಳವಣಿಗೆಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಯುದ್ಧವೆಂದರೆ ಹೋರಾಟಗಾರನ ಸಾವು, ತ್ಯಾಗ ಮಾತ್ರ!

ಮಾನ್ಯರೆ,

ಯುದ್ಧವೆಂದರೇನು? ಇದೊಂದು ಪ್ರಶ್ನೆ. ಇದೀಗ ನಡೆಯುತ್ತಿರುವ ಇಸ್ರೇಲ್ –ಹಮಾಸ್ ಕಾದಾಟದ ವೇಳೆ ನನ್ನ ಕಾಂಟಾಕ್ಟ್‌ನಲ್ಲಿದ್ದ ವ್ಯಕ್ತಿಯೊಬ್ಬರು ತಮ್ಮ ಸ್ಟೇಟಸ್‌ನಲ್ಲಿ ಹಾಕಿದ್ದ ಆಂಗ್ಲ ಒಕ್ಕಣೆ ನನ್ನ ಗಮನ ಸೆಳೆಯಿತು. ಅದನ್ನು ಯಾರು ಬರೆದರೋ ತಿಳಿಯದು. ಆದರೆ ಅದರ ಸಾರಾಂಶ ಮಾತ್ರ ಯುದ್ಧಾಳುಗಳ ಹಾಗೂ ಹಿಂಸಾಚಾರಿಗಳ ಕಣ್ಣು ತೆರೆಸುವಂತಿದೆ.

ಯುದ್ಧವೆಂದರೆ ಯುವಕರು ಕಾದಾಡುವ ಸ್ಥಳ. ಅವರ‍್ಯಾರಿಗೂ ಪರಸ್ಪರ ಪರಿಚಯವೇ ಇರುವುದಿಲ್ಲ. ಆದರೂ ಪರಸ್ಪರ ಕಾದಾಡಿ ಪರಸ್ಪರ ಸಾಯಿಸುತ್ತಾರೆ! ಹೇಗೆಂದರೆ ತಮ್ಮ ಹಿರಿಯರ ಅಜ್ಞಾನುವರ್ತಿಯಾಗಿ, ಯಾವ ಈ ಹಿರಿಯರು ಪರಸ್ಪರ ಗೊತ್ತಿರುವವರು! ಆದರೆ ಪರಸ್ಪರ ದ್ವೇಷಿಸುವವರು. ಆದರೆ ಪರಸ್ಪರ ಸಾಯಿಸುವುದಿಲ್ಲ ಹಾಗೂ ಸಾಯುವುದಿಲ್ಲ!! ಅದೆಷ್ಟು ಅರ್ಥ ಗರ್ಭಿತವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ದಸರಾದಲ್ಲಿ ಪೊಲೀಸರ ದರ್ಬಾರ್

ಮಾನ್ಯರೆ,

ಮೈಸೂರು ದಸರಾ ಮಹೋತ್ಸವ ವಿಜೃಂಭಣೆಯಿಂದ ನಡೆದು ಸಂಭ್ರಮದಿಂದ ತೆರೆ ಕಂಡಿದೆ. ಅಂಬಾರಿಯಲ್ಲಿ ತಾಯಿ ಚಾಮುಂಡಿ ದೇವಿ ದರ್ಶನ ಪಡೆದು ಭಕ್ತರು ಪುನೀತರಾಗಿದ್ದಾರೆ. ಆದರೆ ಈ ಬಾರಿ ದಸರಾದಲ್ಲಿ ಪೊಲೀಸರ ದುರ್ವರ್ತನೆಯಿಂದಾಗಿ ನಾಡದೇವಿ ಅಂಬಾರಿ ಹೊರುವ ಅಭಿಮನ್ಯುವಿಗೆ ಅಂಬಾರಿ ಕಟ್ಟುವುದು ತಡವಾಗಿ ಜಂಬೂ ಸವಾರಿಯ ಮುಹೂರ್ತವೂ ಮೀರಿತ್ತು. ಅಂಬಾರಿ ಆನೆಯ ಮಾವುತರಿಗೆ ಒಳ ಬಿಡಲು ಪೊಲೀಸರು ನಿರಾಕರಿಸಿದ್ದರಿಂದ ರೊಚ್ಚಿಗೆದ್ದ ಮಾವುತರು ಒಂದು ಹಂತದಲ್ಲಿ ಅಂಬಾರಿಯನ್ನು ನೀವೇ ಕಟ್ಟಿಕೊಳ್ಳಿ ನಾವು ವಾಪಸ್ ಹೋಗುತ್ತೇವೆ ಎಂದು ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದಲ್ಲದೆ ಪ್ರತಿ ವರ್ಷವೂ ನಿಮ್ಮದು ಇದೇ ಗೋಳು ನಮ್ಮಿಂದಲೇ ದಸರಾ ಹೊರತು ನಿಮ್ಮಿಂದಲ್ಲ ಎಂದು ನಿಂದಿಸಿದ ಘಟನೆ ಜಾಲತಾಣಗಳಲ್ಲಿ ಜಗಜ್ಜಾಹೀರಾಗಿದೆ. ಇದು ಒಂದೆಡೆಯಾದರೆ ಪಂಜಿನ ಕವಾಯತು ವೀಕ್ಷಿಸಲು ತೆರಳಿದ ಸಾರ್ವಜನಿಕರಿಗೆ ನೀರಿನ ಬಾಟಲಿ, ತಿಂಡಿ ಪಟ್ಟಣಗಳನ್ನು ಬಿಡಲು ಪೊಲೀಸರು ನಿರಾಕರಿಸಿ ಸಾರ್ವಜನಿಕರನ್ನು ಗಂಟೆಗಟ್ಟಲೆ ಕಾಯಿಸಿದ ಪ್ರಸಂಗವೂ ನಡೆದಿದೆ. ಆದರೆ ಇದೇ ಪೊಲೀಸರು ವ್ಯಾಪಾರ ಮಾಡುವವರೊಂದಿಗೆ ಒಳ ಒಪ್ಪಂದ ಮಾಡಿ ಕೊಂಡು ಪಂಜಿನ ಕವಾಯತು ಮೈದಾನದೊಳಗೆ ಮನಸೋ ಇಚ್ಛೆ ಬೆಲೆಗೆ ನೀರಿನ ಬಾಟಲಿ, ಚಿಪ್ಸ್, ಫ್ರೂಟಿ ಟೆಟ್ರಾ ಪ್ಯಾಕ್‌ಗಳನ್ನು ಮಾರಲು ಬಿಟ್ಟು ಮೈದಾನವನ್ನು ಗಬ್ಬೆಬ್ಬಿಸಿದ್ದೇಕೆ ಎಂಬ ಪ್ರಶ್ನೆ ಕಾಡದೇ ಇರದು. ಇನ್ನು ಮುಂದಾದರೂ ಪೊಲೀಸರು ಸಾರ್ವಜನಿಕರು ಹಾಗೂ ಮಾವುತರೊಂದಿಗೆ ಸೌಜನ್ಯದಿಂದ ವರ್ತಿಸಿ, ಪೊಲೀಸ್ ಇಲಾಖೆಯ ಘನತೆ ಕಾಪಾಡಲು ಪೊಲೀಸ್ ಆಯುಕ್ತರು ಕ್ರಮ ಕೈಗೊಳ್ಳಬೇಕು.

–ಚಂದ್ರಲಾ ಎ.ಜಿ. ಮೈಸೂರು

ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ನಂಜನಗೂಡು ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರ ದ್ವಿಚಕ್ರ ವಾಹನ ನಿಲ್ಲಿಸುವುದಕ್ಕೆ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಪ್ರಯಾಣಿಕರು ತಮ್ಮ ದ್ವಿಚಕ್ರ ವಾಹನವನ್ನು ನೂತನ ಬಸ್ ಸ್ಟ್ಯಾಂಡ್‌ನಲ್ಲಿರುವ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿ ಬರಬೇಕು. ರೈಲ್ವೆ ಸ್ಟೇಷನ್ ನಿಂದ ಬಸ್ ಸ್ಟ್ಯಾಂಡಿಗೆ ಹೋಗಿ ಬರಲು ಕಡಿಮೆ ಅಂದರೂ 10 ನಿಮಿಷ ಕಾಲಾವಕಾಶ ಬೇಕು. ಇದರಿಂದ ಎಷ್ಟೋ ಪ್ರಯಾಣಿಕರಿಗೆ ರೈಲು ಸಿಗದೇ ಇರುವ ನಿದರ್ಶನಗಳು ಉಂಟು. ಎಲ್ಲಾ ಪ್ರಯಾಣಿಕರು ಮುಂಚಿತವಾಗಿ ಬರುವುದಕ್ಕೆ ಆಗುವುದಿಲ್ಲ. ದಿನನಿತ್ಯದ ಒತ್ತಡಗಳು ಹಾಗೆ ಇರುತ್ತವೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ನೂತನ ಯುವ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ಕೂಡಲೇ ಈ ಮನವಿಗೆ ಸ್ಪಂದಿಸಿ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಿ ನಂಜನಗೂಡು ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರ ದ್ವಿಚಕ್ರ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ

–ಅಹಲ್ಯ .ಸಿ.ನಾ.ಚಂದ್ರ, ಜನತಾ ನಗರ ಮೈಸೂರು

ಈ ಅಂಚೆ ಪೆಟ್ಟಿಗೆಯನ್ನು ಹೊಸದಾಗಿ ಸ್ಥಾಪಿಸಿ

ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾ ಆರಕ್ಷಕ ಠಾಣೆ ಎದುರು ಅಂಚೆ ಪೆಟ್ಟಿಗೆ ಕುಸಿಯುವ ಹಂತ ತಲುಪಿದೆ. ಪ್ರಮುಖ ವೃತ್ತವಾದ್ದರಿಂದ ಆದಷ್ಟು ಬೇಗ ಹೊಸದಾದ ಗುಣಮಟ್ಟದ ಅಂಚೆ ಪೆಟ್ಟಿಗೆಯನ್ನು ಸ್ಥಾಪಿಸಬೇಕೆಂದು ಸಂಬಂಧಪಟ್ಟ ಅಂಚೆ ಅಧಿಕಾರಿಗಳಲ್ಲಿ ಮನವಿ.

–ಜಿ.ಪಿ. ರಾಜೇಶ್ ಮತ್ತು ಸ್ನೇಹಿತರು, ವಿ.ವಿ. ಮೊಹಲ್ಲಾ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಇರುವುದ ಬಿಟ್ಟು ಇಲ್ಲದಿದ್ದರ ಕಡೆ ತುಡಿಯುವುದು ತರವೇ!

ಮನುಷ್ಯ ಎಂದರೆ ಬಯಕೆಗಳ ಆಗರ. ನನಗೆ ಎಲ್ಲಾ ಸಿಕ್ಕಿದೆ, ಇನ್ನೇನೂ ಬೇಡ ಎಂದು ಹೇಳುವವರು ಬೆರಳೆಣಿಕೆಯಷ್ಟೂ ಸಿಗಲಾರರು. ನಿಮಗೇನು ಬೇಕು ಎಂದು ಕೇಳಿದರೆ ಬೇಕುಗಳ ದೊಡ್ಡ ಪಟ್ಟಿಯನ್ನೇ ಸಿದ್ದಪಡಿಸಿಟ್ಟು ಕೊಂಡಂತೆ ಹೇಳಿಬಿಡುತ್ತಾರೆ. ಹಾಗಿದ್ದರೆ ಈಗಿರು ವುದರಲ್ಲಿ ನಿಮಗೆ ತೃಪ್ತಿ ಇಲ್ಲವೇ? ಎಂದರೆ ಹಾಗಲ್ಲಾ, ಇನ್ನಷ್ಟು ಇದ್ದರೆ ಜೀವನ ಉತ್ತಮವಾಗುತ್ತದೆ ಎನ್ನುತ್ತಾರೆ. ನಡೆಯುವವನಿಗೆ ಸೈಕಲ್ ಹೊಡೆಯುವವನನ್ನು ಕಂಡಾಗ ತನಗೆ ಒಂದು ಸೈಕಲ್ ಇದ್ದರೆ ಸಂಚಾರ ಸರಾಗ ಎನಿಸಿದರೆ, ಸೈಕಲ್‌ನವನು ಸ್ಕೂಟರ್ ಕಡೆ ಕೈ ತೋರಿಸಿ ಅದು ಇದ್ದರೆ ಎಷ್ಟು ಚೆನ್ನ ಎನ್ನುತ್ತಾನೆ. ಹಾಗೆ ಸ್ಕೂಟರ್‌ನವನು ಕಾರನ್ನು, ಕಾರಿನವನು ಮತ್ತಷ್ಟು ಲಕ್ಷುರಿ ಕಾರನ್ನು, ಕೊನೆಗೆ ಹೆಲಿಕಾಪ್ಟರನ್ನು ಬಯಸುತ್ತಾನೆ. ಹೀಗೆ ನಮ್ಮ ಆಸೆಗಳು ಮುಗಿಯುವುದೇ ಇಲ್ಲ. ಇದ್ದುದನ್ನು ಸಂತೋಷದಿಂದ ಅನುಭವಿಸಬೇಕು ಎಂಬ ಕಡೆಗೆ ನಮ್ಮ ಲಕ್ಷ ಹೋಗುವುದೇ ಇಲ್ಲ. ಒಂದಿದ್ದರೆ ಮತ್ತೊಂದು, ಮಗದೊಂದು ಬಯಸುವುದು ಸಹಜ ಎಂಬಂತಾಗಿಬಿಟ್ಟಿದೆ. ಹಾಗಾದರೆ ಜೀವನದ ಅಗತ್ಯತೆ ಏನು? ಬರೀ ಮುಂದಿನ ಹಂತಗಳನ್ನು ಬಯಸುವುದೇ ಜೀವನವೇ?

ಹಲವರಿಗೆ ಮುಟ್ಟಿದ್ದೆಲ್ಲಾ ಚಿನ್ನವಾಗಬೇಕು ಎಂಬ ಹಂಬಲ. ತಾವು ಏನು ಮಾಡಿದರೂ ಅದರಿಂದ ಲಾಭ ಬರಬೇಕು, ಏನು ಬಯಸಿದರೂ ಅದು ಸಿಕ್ಕಿಬಿಡಬೇಕು ಎಂಬ ಮನೋಭಾವವಿರುತ್ತದೆ. ಸಿಗದಿದ್ದರೆ ಅವರು ನಿರಾಶರಾಗುತ್ತಾರೆ. ಕೈಯ್ಯಲ್ಲಿ ಲಕ್ಷ ರೂಪಾಯಿ ಇದ್ದರೆ, ಅವರ ಲಕ್ಷ ಮತ್ತೊಂದು ಲಕ್ಷದೆಡೆಗೆ ಇರುತ್ತದೆ. ಹೀಗಾಗಿ ಕೈಯ್ಯಲ್ಲಿರುವ ಲಕ್ಷದ ಉಪಯೋಗವೇ ಅವನಿಗೆ ಆಗುವುದಿಲ್ಲ. ಒಂದು ವೇಳೆ ಮತ್ತೊಂದು ಲಕ್ಷ ಸಿಕ್ಕಿದರೆ ಇನ್ನೊಂದೆರಡು ಲಕ್ಷದ ಕಡೆಗೆ ಲಕ್ಷ್ಯ ಹೋಗುವುದೇ ವಿನಃ ಇರುವುದನ್ನು ಉಪಯೋಗಿಸಬೇಕು ಎಂಬುದು ಹೊಳೆಯುವುದೇ ಇಲ್ಲ. ಇಂತಹವರಿಗೆ ಎಷ್ಟು ಕೊಟ್ಟರೂ ತೃಪ್ತಿ ಯಾಗುವುದಿಲ್ಲ. ಜೀವನ ಎಂದರೆ ಕೇವಲ ಬಯಕೆಗಳೇ ಆಗಿರಬಾರದು. ಇರುವುದನ್ನು ಉಪಯೋಗಿಸುವುದು ಜೀವನವಾಗುತ್ತದೆ. ನಾವು ಸಾಮಾನ್ಯವಾಗಿ ರಸ್ತೆ ಬದಿಯಲ್ಲಿ ಕೆಲಸ ಮಾಡುವವರನ್ನು ಗಮನಿಸುವುದಿಲ್ಲ. ಬದಲಿಗೆ ಮಹಡಿ ಮನೆಯ ಶ್ರೀಮಂತರೇ ನಮ್ಮ ದೃಷ್ಟಿಗೆ ಬೀಳುತ್ತಾರೆ. ಹಾಗೆ ನೋಡಿ ದರೆ ರಸ್ತೆ ಬದಿಯಲ್ಲಿ ದುಡಿಯುವವರು ಹೊಂದುವಷ್ಟು ಸಂತೋಷವನ್ನು ಇತರರು ಹೊಂದಿರುವುದಿಲ್ಲ. ಏಕೆಂದರೆ ಅವರ ಬಯಕೆಗಳು ಮಿತವಾಗಿರುತ್ತದೆ. ತಮ್ಮ ರಟ್ಟೆಯಲ್ಲಿನ ಶಕ್ತಿಗೆ ಅನುಗುಣವಾಗಿ ತಮಗೆ ಇಷ್ಟೇ ಹಣ ದೊರಕುತ್ತದೆ ಎಂಬುದು ಅವರಿಗೆ ತಿಳಿದಿರುತ್ತದೆ. ಅದಕ್ಕೆ ತಕ್ಕಂತೆ ದುಡಿದು, ತಿಂದು ಸಂತೋಷದಿಂದ ಅವರು ಜೀವನ ಮಾಡುತ್ತಾರೆ. ಸಣ್ಣಸಣ್ಣ ಮನೆಯಲ್ಲಿರುವವರು ಎಷ್ಟು ಸ್ವಚ್ಛಂದವಾಗಿ ನಗುನಗುತ್ತಾ ಜೀವಿಸುತ್ತಾರೆ ಎಂಬುದನ್ನು ನಾವು ಗಮನಿಸಬಹುದು, ಆದರೆ ಒಂದಷ್ಟು ಶ್ರೀಮಂತಿಕೆ ಇರುವವರು ಆಗಿರಲಾಗುವುದಿಲ್ಲ. ಏಕೆಂದರೆ ಅವರಲ್ಲಿ ಬಯಕೆಗಳ ದೊಡ್ಡ ಪಟ್ಟಿ ಇದ್ದು, ಅದು ಸಿಗುವತನಕ ತಮಗೆ ನೆಮ್ಮದಿಯಿಲ್ಲ ಎಂಬಂತೆ ದುಗುಡದಿಂದ ಅವರು ಸಂತಸದ ಗುಣವನ್ನೇ ಕಳೆದುಕೊಂಡಿರುತ್ತಾರೆ.

ಆದ್ದರಿಂದ ಮೊದಲು ನಮಗೆ ಏನು ದೊರಕಿದೆಯೋ ಅದನ್ನು ಸಂತೋಷದಿಂದ ಅನುಭವಿಸುವುದನ್ನು ಮೊದಲು ಕಲಿಯಬೇಕು. ಹಾಸಿಗೆ ಇದ್ದಷ್ಟು ಕಾಲು ಚಾಚಿ ನಿದ್ರೆ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ದೊಡ್ಡ ಹಾಸಿಗೆ ಬೇಕೆಂಬ ಬಯಕೆಯಲ್ಲಿ ಇರುವ ಹಾಸಿಗೆಯಲ್ಲಿ ನೆಮ್ಮದಿಯಿಂದ ಮಲಗಿ ನಿದ್ರಿಸುವುದನ್ನು ಕಳೆದುಕೊಳ್ಳಬಾರದು. ಶ್ರೀಮಂತಿಕೆ ಬೇಕು ನಿಜ, ಹಾಗೆಂದು ಅದಕ್ಕಾಗಿ ಹಂಬಲಿಸುತ್ತಾ, ಇರುವುದರ ಕಡೆಗೆ ನಿರ್ಲಕ್ಷ ವಹಿಸುವುದು ಬುದ್ಧಿವಂತಿಕೆ ಎನಿಸುವುದಿಲ್ಲ.



> ಏನೆಂದರೆ ಮುಟ್ಟಿದ್ದೆಲ್ಲಾ ಚಿನ್ನವಾಗಬೇಕು ಎಂದರೆ, ಬರೀ ಚಿನ್ನವನ್ನೇ ಮುಟ್ಟಬೇಕು. ಹಾಗೆಯೇ ಬಯಸಿದ್ದೆಲ್ಲಾ ಸಿಗಬೇಕು ಎಂದರೆ ಸಿಗೋದನ್ನೇ ಬಯಸಬೇಕು! ನಮ್ಮ ಗುರಿ ಮುಂದಿನ ಒಂದು ಹೆಜ್ಜೆ ಮಾತ್ರ ಆಗಿರಬೇಕು. ಮುಂದಿನ ಹತ್ತು ಹೆಜ್ಜೆಗಳ ಬಗ್ಗೆ ಮೊದಲ ಹೆಜ್ಜೆಯ ನಂತರವೇ ಯೋಚಿಸಬೇಕು. ಮೊದಲ ಹೆಜ್ಜೆಯನ್ನೇ ಸರಿಯಾಗಿ ಇಡದಿದ್ದರೆ ಮುಂದಿನ ಹೆಜ್ಜೆಗಳು ಸರಿದಾರಿಯಲ್ಲಿ ಇರಲು ಸಾಧ್ಯವೇ ಆಗುವುದಿಲ್ಲ. ಇದಕ್ಕೆ ಕಳ್ಳರು, ಸರಗಳ್ಳರು ಉದಾಹರಣೆ. ಒಂದೇ ಸಲಕ್ಕೆ ಶ್ರೀಮಂತರಾಗಬೇಕೆಂದು ಹೊರಡುವ ಅವರು ಕೊನೆಗೆ ಸೆರೆಮನೆ ಸೇರುತ್ತಾರೆ.

ಈ ಕಾರಣದಿಂದಾಗಿ ಹೇಳುವುದು ಏನೆಂದರೆ ಮುಟ್ಟಿದ್ದೆಲ್ಲಾ ಚಿನ್ನವಾಗಬೇಕು ಎಂದರೆ, ಬರೀ ಚಿನ್ನವನ್ನೇ ಮುಟ್ಟಬೇಕು. ಹಾಗೆಯೇ ಬಯಸಿದ್ದೆಲ್ಲಾ ಸಿಗಬೇಕು ಎಂದರೆ ಸಿಗೋದನ್ನೇ ಬಯಸಬೇಕು! ನಮ್ಮ ಗುರಿ ಮುಂದಿನ ಒಂದು ಹೆಜ್ಜೆ ಮಾತ್ರ ಆಗಿರಬೇಕು. ಮುಂದಿನ ಹತ್ತು ಹೆಜ್ಜೆಗಳ ಬಗ್ಗೆ ಮೊದಲ ಹೆಜ್ಜೆಯ ನಂತರವೇ ಯೋಚಿಸಬೇಕು. ಮೊದಲ ಹೆಜ್ಜೆಯನ್ನೇ ಸರಿಯಾಗಿ ಇಡದಿದ್ದರೆ ಮುಂದಿನ ಹೆಜ್ಜೆಗಳು ಸರಿದಾರಿಯಲ್ಲಿ ಇರಲು ಸಾಧ್ಯವೇ ಆಗುವುದಿಲ್ಲ. ಇದಕ್ಕೆ ಕಳ್ಳರು, ಸರಗಳ್ಳರು ಉದಾಹರಣೆ. ಒಂದೇ ಸಲಕ್ಕೆ ಶ್ರೀಮಂತರಾಗಬೇಕೆಂದು ಹೊರಡುವ ಅವರು ಕೊನೆಗೆ ಸೆರೆಮನೆಗೆ ಹೋಗಬೇಕಾಗುತ್ತದೆ, ಅಲ್ಲದೆ ಅವರ ಆಸ್ತಿಪಾಸ್ತಿಗಳು ಪರರ ಪಾಲಾಗುತ್ತವೆ. ಅದು ಬಿಟ್ಟು ಒಂದಷ್ಟು ಶ್ರಮದ ದುಡಿಮೆಯೆಡೆಗೆ ಗಮನ ಹರಿಸಿದರೆ ನಾವು ಕುಡಿಯುವ ಅಂಬಲಿಯೂ ಅಮೃತ ಸಮಾನವಾಗಿ ಭಾಸವಾಗುತ್ತದೆ.

ಮತ್ತೊಂದು ಒಳ್ಳೆಯ ಮಾತು ಎಂದರೆ ಕಣ್ಣೀರು ಸುರಿಸುವುದು ಸುಲಭ ಆದರೆ, ಕಣ್ಣೀರು ತುಂಬಿದ ದಿನಗಳನ್ನು ಕಳೆಯೋದು ಬಹಳ ಕಷ್ಟ ಎಂದು. ನಾವು ನಮ್ಮ ಬಳಿ ಏನೇ ಇದ್ದರೂ ದುರಾಸೆಯ ಕಾರಣ ಏನೂ ಇಲ್ಲವೆಂಬಂತೆ, ಇತರರ ಸಹಾನುಭೂತಿಯನ್ನು ಕಣ್ಣೀರು ಕರೆಯುವ ಮೂಲಕ ಪಡೆಯಲು ಬಯಸುತ್ತೇವೆ. ನಮ್ಮ ಕಷ್ಟಗಳನ್ನು ಬಣ್ಣ ಕಟ್ಟಿ ವರ್ಣಿಸಿ ಕಣ್ಣೀರು ಸುರಿಸಿದಾಗ ಆರಂಭದಲ್ಲಿ ಕೆಲವರು ನಮಗೆ ಸಾಂತ್ವನ ಹೇಳಬಹುದು ಹಾಗೂ ಸ್ವಲ್ಪ ಸಹಾಯವನ್ನೂ ಮಾಡಬಹುದು. ಆದರೆ ಇದು ಯಾವಾಗಲೂ ಹೀಗೇ ಆಗುತ್ತದೆ, ಎಲ್ಲಾ ಕಾಲದಲ್ಲೂ ಸಹಾನುಭೂತಿ ಸೂಚಿಸುವವರು ಸಿಕ್ಕೇಸಿಗುತ್ತಾರೆ ಎಂದು ನಿರೀಕ್ಷಿಸಲಾಗುವುದಿಲ್ಲ. ಕಣ್ಣೀರು ಸುರಿಸುವುದೇ ಕಾಯಕವಾದರೆ ನಾವು ನಿಷ್ಪ್ರಯೋಜಕರು ಎನಿಸಿಕೊಂಡುಬಿಡುತ್ತೇವೆ. ಕಣ್ಣೀರಲ್ಲೇ ಜೀವನ ಮಾಡಬೇಕೆಂದಾಗ ಅದು ಕಷ್ಟವೇ. ಅದು ಬಿಟ್ಟು ನಾವೇ ಕಣ್ಣೀರು ಒರೆಸಿಕೊಂಡು ನನ್ನ ಕಣ್ಣೀರಿಗೆ ಕಾರಣ ಏನು ಎಂದು ಕಂಡುಹಿಡಿದು ಮತ್ತೆ ಕಣ್ಣೀರು ಬಾರದಂತೆ ಜೀವನ ರೂಪಿಸಿಕೊಳ್ಳಬೇಕು.

ನಾವು ನಮ್ಮ ಸಮಾಜದಲ್ಲಿ ನೋವಿದ್ದರೂ ನಗುತ್ತಾ ಅದನ್ನು ಎದುರಿಸುವವರನ್ನು ಕಾಣುತ್ತೇವೆ. ವಿಶ್ವ ಕಂಡ ಪ್ರಸಿದ್ಧ ಹಾಸ್ಯ ನಟ ಚಾರ್ಲಿ ಚಾಪ್ಲಿನ್ ಹೇಳುತ್ತಿದ್ದ ಮಾತು ನೆನಪಿಸಿಕೊಳ್ಳಬೇಕು. ಎಲ್ಲರೂ ನನ್ನ ನಟನೆಯನ್ನು ನೋಡಿ ನಗುತ್ತಾರೆ. ಆದರೆ ಆ ನಗುವಿನ ಹಿಂದಿನ ನನ್ನ ನೋವನ್ನು ಯಾರು ಗಮನಿಸುವುದಿಲ್ಲ. ಅದಕ್ಕೆ ಮಳೆ ಬಂದಾಗ ನಾನು ಹಾಸ್ಯದ ಪಾತ್ರ ಮಾಡುತ್ತಾ, ಮಳೆ ನೀರಿನೊಡನೆ ಅತ್ತಾಗ, ನನ್ನ ಕಣ್ಣೀರನ್ನೂ ಜನರು ನಟನೆ ಎಂದೇ ಭಾವಿಸಿ ಸಂತೋಷ ಪಡುತ್ತಾರೆ. ಅವರು ಹಾಗೆ ಸಂತೋಷ ಪಟ್ಟರು ಎಂದು ನಾನು ದುಃಖಿಸುವುದಿಲ್ಲ ಎಂದು. ನನ್ನ ನೋವು ನನ್ನದೇ, ಅದನ್ನು ಹಂಚಿಕೊಳ್ಳುವುದಿಲ್ಲ ಎನ್ನುತ್ತಿದ್ದರು. ಹಾಸ್ಯ ಪಾತ್ರದವರ ನಗುವಿನ ಹಿಂದೆ ಅವರು ನೋವನ್ನೂ ಅನುಭವಿಸುತ್ತಿರುತ್ತಾರೆ. ಆದರೆ ಅವರಿಗೆ ಗೊತ್ತಿದೆ, ನಾನು ಜನರನ್ನು ನಗಿಸಬೇಕು, ಅದಕ್ಕಾಗಿ ಜನರು ನನ್ನನ್ನು ಇಷ್ಟಪಡುತ್ತಾರೆ. ಜನರ ಮುಂದೆ ನನ್ನ ಕಷ್ಟಗಳನ್ನು ಹೇಳಿ ನಾನು ಅಳುತ್ತಾ ಕೂತರೆ ಹಾಸ್ಯ ಬಯಸಿದ ಜನರು ನನ್ನಿಂದ ವಿಮುಖ ರಾಗುತ್ತಾರೆ ಎಂದು.

ಹೊರಜಗತ್ತಿಗೆ ತನ್ನ ಕಷ್ಟದ ಅರಿವಾಗದಂತೆ ನಗುವ, ನಗಿಸುವ ನಟನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ ಜೀವನವೇ ಬೇರೆ, ಉದ್ಯೋಗವೇ ಬೇರೆ. ನನ್ನ ವೈಯಕ್ತಿಕ ಬದುಕು, ಅದರ ಕಷ್ಟ ಸುಖಗಳು ನನಗೆ ಮಾತ್ರ ಸೇರಿದ್ದು, ಹೊರನೋಟಕ್ಕೆ ಜನರ ಮುಂದೆ ನನಗೆ ಸಮಸ್ಯೆ ಇಲ್ಲವೆಂಬಂತೆ ಜೀವನ ಮಾಡಬೇಕು. ನಮಗೆ ಹೊಟ್ಟೆ ನೋವಿದೆ ಎಂದರೆ ಅದನ್ನು ಎಲ್ಲರ ಮುಂದೆ ಹೇಳಿಕೊಳ್ಳುವುದರಲ್ಲಿ ಅರ್ಥವಿರುವುದಿಲ್ಲ, ಬದಲಿಗೆ ನಮ್ಮ ಹೊಟ್ಟೆ ನೋವಿನ ಬಗ್ಗೆ ನಾವು ವೈದ್ಯರಲ್ಲಿ ಹೇಳಿಕೊಂಡಾಗ ಮಾತ್ರ ಅದಕ್ಕೆ ಪರಿಹಾರ ಸಿಗಲು ಸಾಧ್ಯವಾಗುತ್ತದೆ. ಹೀಗೆ ನಮ್ಮ ಸಮಸ್ಯೆಯನ್ನು ಎಲ್ಲರ ಬಳಿ ಹೇಳಿ ಕೊಂಡಲ್ಲಿ ಯಾವುದೇ ಪರಿಹಾರ ಸಿಗುವುದಿಲ್ಲ, ಬದಲಾಗಿ ಕೆಲವರು ನಮ್ಮ ಬಗ್ಗೆ ಸಹಾನುಭೂತಿ ತೋರಬಹುದು, ಕೆಲವರು ಕನಿಕರದ ದೃಷ್ಟಿಯಿಂದ ನೋಡಬಹುದು ಅಷ್ಟೆ. ಆದರೆ ನಮ್ಮ ಸಮಸ್ಯೆಯನ್ನು ನಾವು ಯಾರಲ್ಲಿ ಹೇಳಿಕೊಳ್ಳಬೇಕೋ ಅವರಲ್ಲಿ ಮಾತ್ರ ಹೇಳಿಕೊಂಡು ಇತ್ಯರ್ಥಕ್ಕೆ ಪ್ರಯತ್ನಿಸಬೇಕು.

ನಮಗೆ ಏನು ಹಾಗೂ ಎಷ್ಟು ಅಗತ್ಯತೆ ಇದೆಯೋ ಅಷ್ಟನ್ನು ಮಾತ್ರ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಈ ಹಿಂದೆ ಪೆಟ್ರೋಲ್, ಡೀಸೆಲ್‌ಗಳ ಬೆಲೆ ಏರಿಕೆ ಮಧ್ಯರಾತ್ರಿಯಿಂದ ಜಾರಿ ಮಾಡಲಾಗುತ್ತಿತ್ತು. ಕೆಲವೊಮ್ಮೆ ಹೆಚ್ಚಳದ ಬಗ್ಗೆ ಮಾಹಿತಿ ಸೋರಿಕೆಯಾಗುತ್ತಿತ್ತು. ಬೆಲೆ ಹೆಚ್ಚಾಗುವುದು ಸಾಮಾನ್ಯ. ಹಾಗಾಗಿ ರಾತ್ರಿಯಿಂದ ಬೆಲೆ ಏರಿಕೆಯಾಗುತ್ತದೆ ಎಂದು ಅನೇಕರು ಹಿಂದಿನ ದಿನವೇ ತಮ್ಮ ವಾಹನಗಳ ಟ್ಯಾಂಕ್‌ಗಳನ್ನು ಭರ್ತಿ ಮಾಡಿಸಿಕೊಳ್ಳುತ್ತಿದ್ದರು. ಅವರಿಗೆ ಏನೋ ಸಮಾಧಾನ. ಒಂದಷ್ಟು ದುಡ್ಡು ಉಳಿಸಿದೆವು ಎಂದು. ಆದರೆ ಆ ರೀತಿ ಟ್ಯಾಂಕ್ ಭರ್ತಿ ಮಾಡಿಸಿದ್ದು ಎಷ್ಟು ಸಮಯದವರೆಗೆ ಬರುತ್ತದೆ. ಮತ್ತೆ ಇಂಧನ ಹಾಕಿಸುವುದು ಒಂದೆರಡು ದಿನ ಮುಂದಕ್ಕೆ ಹೋಗಬಹುದು ಅಷ್ಟೇ. ಹೀಗೆ ನಾನು ವಿವೇಚನೆಯಿಲ್ಲದೆ ಕೆಲವು ಸಲ ವರ್ತಿಸಿ ಬಿಡುತ್ತೇವೆ. ಅದೇ ರೀತಿ ಪೆಟ್ರೋಲ್ ಬಂಕಿನವರು ನಾಳೆಯಿಂದ ದರ ಹೆಚ್ಚಾಗುತ್ತದೆ ಎಂದು ತಮ್ಮಲ್ಲಿ ಸ್ಟಾಕ್ ಇದ್ದರೂ ಸ್ಟಾಕ್ ಇಲ್ಲ ಎಂದು ಬೋರ್ಡ್ ಹಾಕಿ ಬಿಡುತ್ತಿದ್ದರು. ಒಂದು ವೇಳೆ ದರ ಹೆಚ್ಚಾದರೆ ಅವರಿಗೆ ಲಾಭ ಸರಿ. ಆದರೆ ಕೆಲವೊಮ್ಮೆ ದರ ಕಡಿಮೆಯಾಗಿಬಿಡುತ್ತಿತ್ತು. ಆಗ ಅವರಿಗೆ ನಷ್ಟ. ಬೆಲೆ ಹೆಚ್ಚಾದರೆ ಸರ್ಕಾರವನ್ನು ಹೊಗಳದ ಅವರು ಬೆಲೆ ತಗ್ಗಿದಾಗ ಸರ್ಕಾರಕ್ಕೆ ಹಿಡಿ ಶಾಪ ಹಾಕಿ, ತಮಗೆ ಆದ ನಷ್ಟಕ್ಕೆ ಯಾರು ಹೊಣೆ ಎಂದು ಕೂಗಾಡುತ್ತಿದ್ದರು. ಇದು ಕೇವಲ ಇಂಧನಕ್ಕೆ ಸಂಬಂಧಿಸಿದ್ದು ಎಂದಲ್ಲ, ದಿನಸಿ, ತರಕಾರಿಗಳ ಬಗ್ಗೆಯೂ ಹೀಗೇ ಆಗುತ್ತಿತ್ತು, ಈಗಲೂ ಆಗುತ್ತಿದೆ. ಇಲ್ಲಿ ಲಾಭ ಹೆಚ್ಚಾಗಿ ಸಿಗಬೇಕೆಂಬ ಮನೋಭಾವ ಅಷ್ಟೇ. ಆದರೆ ಒಬ್ಬರಿಗೆ ಲಾಭ ಮತ್ತೊಬ್ಬರಿಗೆ ನಷ್ಟ ಎಂಬುದು ಎಲ್ಲ ಕಾಲದಲ್ಲೂ ಇರುವಂತಹುದೇ.

ನನ್ನ ಅರ್ಹತೆ ಎಷ್ಟು ಹಾಗೂ ನಾನು ಮಾಡುತ್ತಿರುವ ಕೆಲಸ ನನ್ನ ಅರ್ಹತೆಗೆ ಸರಿಯಾಗಿದೆಯೇ? ನನಗಿಂತ ಅರ್ಹತೆ ಇದ್ದವರು ನನಗಿಂತ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆಯೇ? ಅವರಿಗಿಂತ ನಾನು ಕ್ಷೇಮವಲ್ಲವೇ? ಆದ್ದರಿಂದ ನನಗೆ ದೊರಕಿದ ಕೆಲಸಕ್ಕೆ ನ್ಯಾಯ ಸಿಗುವಂತೆ ಕೆಲಸ ಮಾಡುತ್ತೇನೆ ಎಂದು ಎಷ್ಟು ಜನರು ಭಾವಿಸುತ್ತಾರೆ? ನನಗೆ ಈಗ ದೊರಕಿರುವುದಕ್ಕಿಂತ ಹೆಚ್ಚಿನ ವೇತನ ಸಿಗಬೇಕು ಎಂಬ ವಿಷಯ ನಮ್ಮ ಮನಸ್ಸಿಗೆ ಬಂದರೆ ನಾನು ಮಾಡುತ್ತಿರುವ ಕೆಲಸಕ್ಕೆ ಹೇಗೆ ನ್ಯಾಯ ಕೊಡಲಾಗುತ್ತದೆ?

ಜೀವನದಲ್ಲಿ ಸಂತೃಪ್ತಿ ಮುಖ್ಯ. ನಮ್ಮ ಆಸೆಗೆ ಖಂಡಿತಾ ಮಿತಿ ಇಲ್ಲ. ಇರುವುದನ್ನು ಅನುಭವಿಸುವುದನ್ನು ಅದೃಷ್ಟ ಎಂದೇ ಕರೆಯಬಹುದು. ಬರಬೇಕೆಂದಿದ್ದರೆ ಬಂದೇ ಬರುತ್ತದೆ, ಅದಕ್ಕಾಗಿ ನಾನೇಕೆ ತಲೆ ಕೆಡಿಸಿಕೊಳ್ಳಲಿ ಎಂದು ಭಾವಿಸುವವರೂ ನಮ್ಮಲ್ಲಿದ್ದಾರೆ, ಇಲ್ಲವೆಂದಲ್ಲ. ನಾನು ಮಾಡಬೇಕಾದ್ದನ್ನು ಮಾಡುತ್ತೇನೆ, ಅದಕ್ಕೆ ಫಲ ಇಷ್ಟೇ ಎಂದು ನಾನು ಭಾವಿಸುವುದಿಲ್ಲ ಎಂಬ ಭಾವ ಬಂದರೆ ಜೀವನದಲ್ಲಿ ನೆಮ್ಮದಿ ಕಾಣಬಹುದು. ಆದ್ದರಿಂದ ನಾವು ಇಷ್ಟೇ ಬೇಕು ಎಂಬ ಭಾವನೆ ಬಿಟ್ಟು ಇದ್ದುದರಲ್ಲಿ ನೆಮ್ಮದಿ ಕಾಣಬೇಕು. ನಮಗೆ ಎಷ್ಟು ಸಿಗಬಹುದೋ ಅಷ್ಟಕ್ಕೆ ಮಾತ್ರ ಪ್ರಯತ್ನ ಪಡುವುದು ಸರಿ. ಸಿಗದಿದ್ದರ ಬಗ್ಗೆ ತಲೆ ಕೆಡಿಸಿಕೊಂಡರೆ ಜೀವನ ಹಾಳಾಗುವುದು ನಮ್ಮದೇ ಎಂಬುದರ ಅರಿವಿರಬೇಕು. ನನಗೆ ಸಿಕ್ಕಿದ್ದು ನನ್ನ ಯೋಗ್ಯತೆಗೆ ಅನುಗುಣವಾಗಿಯೇ ಇದೆ ಎಂಬ ಭಾವನೆ ನಮ್ಮನ್ನು ನಿರಾಶೆಯಿಂದ ಮೇಲೆತ್ತುತ್ತದೆ.

ದಸರಾ ಫಲಪುಷ್ಪ ಪ್ರದರ್ಶನ-2023

ಅಲಂಕಾರಿಕ ತೋಟಗಳ ಸ್ಪರ್ಧೆಯಲ್ಲಿ ಮೈಸೂರು ವಿವಿ, ಜೆಕೆ ಟೈರ್‌ಗೆ ಪ್ರಥಮ ಬಹುಮಾನ



ಮೈಸೂರು ವಿಶ್ವವಿದ್ಯಾನಿಲಯ



ಜೆ.ಕೆ.ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್

ಮೈಸೂರು, ಅ.26(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ದಸರಾ ಫಲಪುಷ್ಪ ಪ್ರದರ್ಶನ'ದ ಅಲಂಕಾರಿಕ ತೋಟಗಳ ಸ್ಪರ್ಧೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಜೆ.ಕೆ.ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಪ್ರಥಮ ಬಹುಮಾನ ಪಡೆದುಕೊಂಡಿದೆ.

ನಗರದ ಕುಪ್ಪಣ ಪಾರ್ಕ್‌ನಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾ ತೋಟಗಾರಿಕೆ ಸಂಘದ ವತಿಯಿಂದ ಆಯೋಜಿಸಿದ್ದ ದಸರಾ ಫಲಪುಷ್ಪ ಪ್ರದರ್ಶನ ಸಮಾರೋಪ ಹಾಗೂ ವಿವಿಧ ಅಲಂಕಾರಿಕ ತೋಟಗಳ ಸ್ಪರ್ಧೆ(ಕೈಗಾರಿಕೆ, ಸಂಸ್ಥೆ ತೋಟಗಳ ವಿಭಾಗ–1) ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ 'ನಿರ್ವಾಹಕ ಉದ್ಯಾನ, ಮೆಕಿಕನ್ ಲಾನ್, ಅಲಂಕಾರಿಕ ಪಾಟ್‌ಗಳು ಹಾಗೂ ಗುಲಾಬಿ ಉದ್ಯಾನದ ಮೂರು ವಿಭಾಗಗಳಲ್ಲಿ ಜೆ.ಕೆ. ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಪ್ರಥಮ ಬಹುಮಾನ ಪಡೆದರೆ, ದೊಡ್ಡ ಅಲಂಕಾರಿಕ ಉದ್ಯಾನ ವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಥಮ ಸ್ಥಾನ ಪಡೆದುಕೊಂಡಿತು.

ಹಾಗೆಯೇ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ (ಪಿ) ಲಿಮಿಟೆಡ್, ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಇನ್ಫೋಸಿಸ್ ಲಿಮಿಟೆಡ್, ಎಲ್ ಅಂಡ್ ಟಿ ಸರ್ವಿಸ್ ಲಿಮಿಟೆಡ್, ಸಾಯಿ ಎಕ್ಸ್‌ಪೋರ್ಟ್ ಪ್ರೈವೆಟ್ ಲಿಮಿಟೆಡ್ ಪ್ರಥಮ ಬಹುಮಾನ ಪಡೆದವು.

ಹಾಗೆಯೇ ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜಿ ಪ್ರೈವೆಟ್ ಲಿಮಿಟೆಡ್, ಬಜಾಜ್ ಆಟೋಟೆಕ್ ಪ್ರೈವೆಟ್ ಲಿಮಿಟೆಡ್, ಆಟೋಮೊಟಿವ್ ಆಕ್ಸೆಲ್ ಲಿಮಿಟೆಡ್, ಮೆರಿಟೋರ್ ಹೆಚ್‌ವಿಎಸ್ (ಇಂಡಿಯಾ) ಲಿಮಿಟೆಡ್, ವುರ್ತ್ ಎಲೆಕ್ಟ್ರೋನಿಕ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಕ್ಲುಬರ್ ಲೂಬ್ರಿಕೇಶನ್ ಇಂಡಿಯಾ, ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್, ಗಣೇಶ್ ಕನ್ಸಲ್ಟೆನ್ಸಿ ಅಂಡ್ ಅನಾಲಿಟಿಕಲ್ ಸರ್ವಿಸಸ್, ಬ್ರೇಕ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಹಿಟಾಚಿ ಎನರ್ಜಿ ಇಂಡಿಯಾ ಲಿಮಿಟೆಡ್, ಹೆಚ್ ಅಂಡ್ ವಿ ಅಡ್ವಾನ್ಸ್ ಮೆಟಿರಿಯಲ್ಸ್(ಇಂಡಿಯಾ) ಪ್ರೈವೆಟ್ ಲಿಮಿಟೆಡ್, ಐಟಿಸಿ ಲಿಮಿಟೆಡ್, ಕಾರ್ಲ್ಸ್‌ಬರ್ಗ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಸ್ಕ್ಯಾನ್‌ರೇ ಟೆಕ್ನಾಲಜಿಸ್ ಲಿಮಿಟೆಡ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋ ಲಿಮಿಟೆಡ್ ಪ್ರಥಮ ಹಾಗೂ ಅತ್ಯುತ್ತಮ ಬಹುಮಾನ ಪಡೆದವು.

ಆಡಳಿತ ಕಚೇರಿ ತೋಟಗಳ ವಿಭಾಗದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಅರ್ಬನ್ ಡೆವಲಪ್ಮೆಂಟ್, ಆಡಳಿತ ತರಬೇತಿ ಸಂಸ್ಥೆ, ಜಿಲ್ಲಾ ಪಂಚಾಯತ್ ಉದ್ಯಾನವನ, ಮೈಸೂರು ಅರಮನೆ ಮಂಡಳಿ, ಪೊಲೀಸ್ ಅಧೀಕ್ಷಕರ ನಿವಾಸ, ಕೆಎಸ್‌ಆರ್‌ಪಿ ಕಮಾಂಡೆಂಟ್, ಸಿಪಿಡಬ್ಲ್ಯೂಡಿ ಪ್ರಥಮ ಬಹುಮಾನ ಪಡೆದರೆ, ಕರ್ನಾಟಕ ಗ್ರಾಮೀಣ ಬ್ಯಾಂಕ್ ದ್ವಿತೀಯ ಬಹುಮಾನ ಪಡೆಯಿತು.

ಶೈಕ್ಷಣಿಕ ಸಂಸ್ಥೆ ತೋಟಗಳು ವಿಭಾಗದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜು, ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎಕ್ಸೆಲ್ ಪಬ್ಲಿಕ್ ಸ್ಕೂಲ್, ಎಸ್‌ಜೆಸಿಇ ಇಂಜಿನಿಯರಿಂಗ್ ಕಾಲೇಜು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ, ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್‌ಐಇ), ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಪೊಲೀಸ್ ಪಬ್ಲಿಕ್ ಸ್ಕೂಲ್, ಎಂಎಂಕೆ ಅಂಡ್ ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಹೆರಿಟೇಜ್ ಸಿಟಿ ಕಾಲೇಜ್, ಎಸ್‌ಡಿಎಂಐಎಂಡಿ ಹಾಗೂ ರಾಮಕೃಷ್ಣ ವಿದ್ಯಾಕೇಂದ್ರ ಪ್ರಥಮ ಮತ್ತು ಅತ್ಯುತ್ತಮ ಬಹುಮಾನ ಪಡೆದುಕೊಂಡವು.

ಆಸ್ಪತ್ರೆ, ಅಪಾರ್ಟ್‌ಮೆಂಟ್, ಮಾಲ್, ಹೋಟೆಲ್, ಸರ್ವಿಸ್ ಸ್ಟೇಷನ್ ತೋಟಗಳು ವಿಭಾಗದಲ್ಲಿ ಸೆಂಟ್ ಜೋಸೆಫ್ ಆಸ್ಪತ್ರೆ, ಜೆಎಸ್‌ಎಸ್ ಫಾರ್ಮಸಿ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಬಂಟ್ವಾಳ ಸುಲೋಚನಾ ಮಾಧವ ಶೆಣೈ ಟ್ರಸ್ಟ್, ಸಂಕಲ್ಪ ಸೆಂಟರ್ ಪಾರ್ಕ್ ಅಪಾರ್ಟ್‌ಮೆಂಟ್, ಎಸ್‌ಆರ್‌ಎಸ್ ಅಪಾರ್ಟ್‌ಮೆಂಟ್, ಬ್ರಿಗೇಡ್ ಸಿಂಫನಿ ಓನರ್ಸ್ ಅಸೋಸಿಯೇಷನ್, ಪ್ರಥಮ್ ತುಲಿಪ್ ಅಪಾರ್ಟ್‌ಮೆಂಟ್, ಸಂಕಲ್ಪ ಟೆಂಪಲ್ ಟ್ರೀಸ್, ಮಾಲ್ ಆಫ್ ಮೈಸೂರ್, ಲಲಿತ ಮಹಲ್ ಪ್ಯಾಲೆಸ್, ಸೈಲೆಂಟ್ ಶೋರ್ಸ್ ಅಂಡ್ ರೆಸಾರ್ಟ್ ಸ್ಪಾ, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್, ಬಾಲಾಜಿ ಸರ್ವಿಸ್ ಸ್ಟೇಷನ್, ಕೊಡಗಹಳ್ಳಿ ಸರ್ವಿಸ್ ಸ್ಟೇಷನ್ ಹಾಗೂ ವೆಂಕಟೇಶ್ವರ ಸರ್ವಿಸ್ ಸ್ಟೇಷನ್ ಫಲಪುಷ್ಪ ತೋಟಗಳನ್ನು ಅಲಂಕರಿಸಿ ಬಹುಮಾನ ಪಡೆದವು. ಅದರಂತೆ ಖಾಸಗಿ ಮನೆ ತೋಟಗಳು, ಪುಷ್ಪ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದವರು ಬಹುಮಾನ ಗೆದ್ದು ಸಂಭ್ರಮಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಾರಿಗೆ ಸಂಸ್ಥೆಯಲ್ಲಿ 6500 ಚಾಲನಾ, 300 ತಾಂತ್ರಿಕ ಸಿಬ್ಬಂದಿ ನೇಮಕ



ಬೆಂಗಳೂರು, ಅ.26–(ಕೆಎಂಶಿ) ಮೊದಲ ಹಂತದಲ್ಲಿ 6500 ಚಾಲನಾ ಸಿಬ್ಬಂದಿಗೆ ಹಾಗೂ 300 ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಸರ್ಕಾರದಿಂದ ಅನುಮತಿ ದೊರಕಿದೆ.

ಸಾರಿಗೆ ಸಂಸ್ಥೆಗಳಲ್ಲಿ ಕಳೆದ 2016 ರಲ್ಲಿ ನೇಮಕಾತಿ ನಂತರ ಯಾವುದೇ ನೇಮಕಾತಿ ಆಗಿರಲಿಲ್ಲ. ಈ ಸಂಬಂಧ 4 ಸಾರಿಗೆ ಸಂಸ್ಥೆಗಳಲ್ಲಿ 2016ರಿಂದ ಇಲ್ಲಿ ವರೆಗೆ ಸಿಬ್ಬಂದಿ ನಿವೃತ್ತಿ ಹಾಗೂ ಇತರೆ ಕಾರಣಗಳಿಂದ 13,669 ಖಾಲಿ ಹುದ್ದೆಗಳಿದ್ದವು. ಈ ಬಗ್ಗೆ 13,000 ಚಾಲನಾ ಮತ್ತು ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಸಾರಿಗೆ ಸಂಸ್ಥೆಗಳಿಗೆ ಅನುಮತಿ ನೀಡುವಂತೆ ಸರ್ಕಾರವನ್ನು ಕೋರಲಾಗಿತ್ತು ಅದರಂತೆ ಮೊದಲ ಹಂತದಲ್ಲಿ 6500 ಚಾಲನಾ ಸಿಬ್ಬಂದಿ ಹಾಗೂ 300 ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಅನುಮತಿ ದೊರಕಿದೆ.

ಸಂಸ್ಥೆವಾರು ನೇಮಕಾತಿ ವಿವರ: ಕೆಎಸ್‌ಆರ್‌ಟಿಸಿಯಲ್ಲಿ ಡ್ರೈವರ್ ಕಮ್ ಕಂಡಕ್ಟರ್ 2000, ತಾಂತ್ರಿಕ ಸಿಬ್ಬಂದಿ 300, ಎನ್‌ಡಬ್ಲ್ಯುಕೆಆರ್‌ಟಿಸಿಯಲ್ಲಿ ಡ್ರೈವರ್ ಕಮ್ ಕಂಡಕ್ಟರ್ 2000, ಬಿಎಂಟಿಸಿಯಲ್ಲಿ ಕಂಡಕ್ಟರ್ 2500, ಕೆಕೆಆರ್‌ಟಿಸಿಯಲ್ಲಿ ಈಗಾಗಲೇ 1619 ಚಾಲನಾ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಚಾಲನಾ ಪರೀಕ್ಷೆ ನಡೆಯುತ್ತಿದ್ದು, ಜನವರಿ 2024ರ ಕೊನೆಯಲ್ಲಿ ಅಂತಿಮ ಆಯ್ಕೆ ಪಟ್ಟಿ ಬಿಡುಗಡೆಗೊಳಿಸಲಾಗುವುದು. ಕೆಕೆಆರ್‌ಟಿಸಿಯಲ್ಲಿ 300 ಕಂಡಕ್ಟರ್‌ಗಳ ನೇಮಕಾತಿಗೆ ಅನುಮತಿ ದೊರಕಿದ್ದು, ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ. ಒಟ್ಟಾರೆ 8719 ಚಾಲನಾ ಮತ್ತು ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಚಾಲನೆ ದೊರಕಿದೆ.



ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ದಸರಾ ಪ್ರಯುಕ್ತ ವಿಜಯದಶಮಿಯ ದಿನದಂದು ಪ್ರೊ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ಮಹಾ ಸುದರ್ಶನ ಯಾಗ ವಿಜೃಂಭಣೆಯಿಂದ ನೆರವೇರಿಸಲಾಯಿತು. ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಅ.29, ಗಂಧದಗುಡಿ ಚಿತ್ರಕಲಾ ಸ್ಪರ್ಧೆ



ಮೈಸೂರು,ಅ.26–ಪುನೀತ್ ರಾಜಕುಮಾರ್ ಎರಡನೇ ವರ್ಷದ ನೆನಪಿನಂಗವಾಗಿ ಗಂಧದಗುಡಿ ಚಿತ್ರಕಲಾ ಸ್ಪರ್ಧೆಯನ್ನು ಅ.29ರ ಭಾನುವಾರ ಬೆಳಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆವರೆಗೆ ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಹಮ್ಮಿಕೊಂಡಿದ್ದು, ಅದರ ಪೋಸ್ಟರ್, ಭಿತ್ತಿಪತ್ರ, ಪ್ರಚಾರ ಸಾಮಗ್ರಿಗಳನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ರಾಜೇಶ್ ಜಿ.ಗೌಡ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿ, ಕನ್ನಡ ಚಿತ್ರರಂಗದ ವರನಟ ಡಾ.ರಾಜಕುಮಾರ್ ಅವರ ಪ್ರತಿಯೊಂದು ಚಿತ್ರವೂ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದ್ದವು. ಸಾಂಸರಿಕ ಪ್ರಧಾನವಾದ ಚಿತ್ರಗಳಾಗಿದ್ದವು. ಅವರಂತೆಯೇ ಅವರ ಸುಪುತ್ರ ಪವರ್ ಸ್ಟಾರ್ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ನಟನೆಯ ಚಿತ್ರಗಳು ಸಹ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದವು. ಮದ್ಯವ್ಯಸನ ಮುಕ್ತ ಸಮಾಜ, ಪರಿಸರ ಸಂರಕ್ಷಣೆ ಕಾಳಜಿ, ಸರಳತೆಯ ನಟ ಪುನೀತ್ ಚಿಕ್ಕವಯಸ್ಸಿನಲಿಯೇ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡವರು. ವಿದ್ಯಾರ್ಥಿಯ ಪಾತ್ರದಿಂದ ಜಿಲ್ಲಾಧಿ ಕಾರಿ, ಸೈನಿಕ, ಆರಕ್ಷಕ ಅಧಿಕಾರಿ ಪಾತ್ರ, ಗಂಧದಗುಡಿ ಚಿತ್ರದಲ್ಲಿ ಅರಣ್ಯಸಂರಕ್ಷಣೆ ಪರಿಸರ ಕಾಳಜಿಯನ್ನು ಯುವಪೀಳಿಗೆಗೆ ಮೂಡಿಸುವಲ್ಲಿ ಮಹಾನ್ ಪಾತ್ರ ವಹಿಸಿದ್ದರು. ಇದೇ ಭಾನುವಾರ ಗಂಧದಗುಡಿ ಚಿತ್ರಕಲಾ ಸ್ಪರ್ಧೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ಶಾಲಾಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು, ಭಾನುವಾರ ರಜೆಯಿದ್ದು ಪೋಷಕರು ತಮ್ಮ ಮಕ್ಕಳೊಂದಿಗೆ ದಸರಾ ವಸ್ತುಪ್ರದರ್ಶನದಲ್ಲಿ ನಡೆಯುತ್ತಿರುವ ಗಂಧದಗುಡಿ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು.

ಕೆಪಿಸಿಸಿ ಸದಸ್ಯ ನಜರಬಾದ್ ನಟರಾಜ್ ಮಾತನಾಡಿ, ಪುನೀತ್ ರಾಜಕುಮಾರ್ ರವರ ನೆನಪಿನಲ್ಲಿ ಆಯೋಜಿಸಿರುವ ಗಂಧದಗುಡಿ ಚಿತ್ರಕಲಾ ಸ್ಪರ್ಧೆಗೆ ಜಿಲ್ಲೆಯ ಎಲ್ಲಾ ಶಿಕ್ಷಣ ಮಂಡಳಿಯವರು ತಮ್ಮ ಮಕ್ಕಳನ್ನು ಕಳುಹಿಸಬಹುದು. ಪ್ರವೇಶ ಉಚಿತವಾಗಿದ್ದು, ವಿವಿಧ ವಯೋಮಿತಿಯ ಆಸಕ್ತ ಸ್ಪರ್ಧಾಳುಗಳು ಭಾಗವಹಿಸಬಹುದಾಗಿದೆ. ವಿವರಗಳಿಗೆ ಮೊ. 9880752727/ 7829067769 ಸಂಪರ್ಕಿಸಬಹುದು ಎಂದರು.



ಮೈಸೂರು ವಿವಿ 103ನೇ ಘಟಿಕೋತ್ಸವದಲ್ಲಿ ಎಂಎಸ್ಸಿ (ಭೂಗರ್ಭಶಾಸ್ತ್ರ) ವಿಭಾಗದಲ್ಲಿ ಎಂ.ಎಸ್. ಪ್ರಜ್ವಲ್ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರಿಂದ ಚಿನ್ನದ ಪದಕ ಪಡೆದರು. ಪ್ರಜ್ವಲ್, ಮೈಸೂರಿನ ಆಲನಹಳ್ಳಿ ನಿವಾಸಿ ನಿವೃತ್ತ ಶಿಕ್ಷಕರಾದ ಮಳವಳ್ಳಿ ಶಿವಣ್ಣ ಮತ್ತು ಉಮಾ ದಂಪತಿ ಪುತ್ರ.

ಚಾಮುಂಡಿಬೆಟ್ಟದ ರಸ್ತೆಯಲ್ಲಿ ಕಾರು ಅಪಘಾತ



ಮೈಸೂರು, ಅ.26 (ಬಿಎಲ್‌ಯು)– ಗುರುವಾರ ನಡೆದ ಚಾಮುಂಡೇಶ್ವರಿ ರಥೋತ್ಸವದಲ್ಲಿ ಪಾಲ್ಗೊಂಡು ವಾಪಾಸಾಗುವ ವೇಳೆ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಕಾರೊಂದು ಅಪಘಾತಕ್ಕೀಡಾಗಿದೆ.

ರಥೋತ್ಸವ ಮುಗಿಸಿ ಹಿಂತಿರುಗುವ ವೇಳೆ ವೇಗವಾಗಿ ಬರುತ್ತಿದ್ದ ಮಾರುತಿ ಬಲೇನೊ ಕಾರು ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ಜಖಂಗೊಂಡಿತು. ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಯಿತು. ಅದೃಷ್ಟವಶಾತ್ ಪ್ರಾಣಾಪಾಯವಾಗಲಿಲ್ಲ. ಅಪಘಾತದಿಂದ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಸುಮಾರು 20 ನಿಮಿಷ ಟ್ರಾಫಿಕ್ ಜಾಮ್ ಉಂಟಾಗಿತ್ತು. ರಥೋತ್ಸವಕ್ಕೆ ಸಾವಿರಾರು ಜನರು ಬಂದಿದ್ದರಿಂದ ರಸ್ತೆ ಉದ್ದಕ್ಕೂ ವಾಹನಗಳು ನಿಂತಿದ್ದವು. ತರುವಾಯ ಸ್ಥಳಕ್ಕೆ ಬಂದ ಪೊಲೀಸರು ಕಾರನ್ನು ಪಕ್ಕಕ್ಕೆ ಸರಿಸಿ ಸುಗಮ ಸಂಚಾರಕ್ಕೆ ದಾರಿ ಮಾಡಿಕೊಟ್ಟರು. ಗಾಯಗೊಂಡವರನ್ನು ಮತ್ತೊಂದು ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸಲಾಯಿತು.

ಕಾಂಗ್ರೆಸ್, ಬಿಜೆಪಿ ಒಂದೇ ಘಟಸರ್ಪದಲ್ಲಿ ಜನಿಸಿದ ಎರಡು ತಲೆ ಹಾವುಗಳು...!

● ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಆಕ್ರೋಶ ● ಈ ಎರಡು ಪಕ್ಷಗಳು ನುಡಿದಂತೆ ಎಂದೂ ನಡೆದಿಲ್ಲ ● ಬಡವರ ಎಲ್ಲಾ ಸಮಸ್ಯೆಗೆ ಎಸ್‌ಡಿಪಿಐ ಒಂದೇ ಪರಿಹಾರ

ಮೈಸೂರು, ಅ.26(ಎಂಕೆ)– ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ಘಟಸರ್ಪದ ಹೊಟ್ಟೆಯಿಂದ ಹುಟ್ಟಿದ ಎರಡು ತಲೆಯ ಹಾವುಗಳು. ಯಾವ ಕಡೆಯಿಂದ ಹತ್ತಿರ ಹೋದರು ಅಪಾಯವೇ. ದೇಶದ ಸಂವಿಧಾನ ಉಳಿವು, ದಲಿತರು, ಹಿಂದುಳಿದವರು, ಮುಸಲ್ಮಾನರ ನ್ಯಾಯಯುತ ಬದುಕಿಗೆ ಇರುವುದು ಎಸ್‌ಡಿಪಿಐ ಒಂದೇ ಪರಿಹಾರ. ಆದ್ದರಿಂದ ಪರ್ಯಾಯ ಶಕ್ತಿಯಾಗಿ ಎಸ್‌ಡಿಪಿಐಗೆ ಬೆಂಬಲ ನೀಡಿ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್ ಕರೆ ನೀಡಿದರು.



ಮೈಸೂರಿನ ದಸ್ತಗಿರ್ ಫಂಕ್ಷನ್ ಹಾಲ್‌ನಲ್ಲಿ ಗುರುವಾರ ಎಸ್‌ಡಿಪಿಐ ನಗರ ಹಾಗೂ ಜಿಲ್ಲಾ ಸಮಿತಿ ವತಿಯಿಂದ ಆಯೋಜಿಸಿದ್ದ ಪಕ್ಷದ ಸಮಾವೇಶದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್ ಮಾತನಾಡಿದರು. ಸ್ಥಳೀಯ ಮುಖಂಡರು ಇದ್ದಾರೆ.

ಮೈಸೂರಿನ ರಾಜೀವ್‌ನಗರದಲ್ಲಿರುವ ದಸ್ತಗಿರ್ ಫಂಕ್ಷನ್ ಹಾಲ್‌ನಲ್ಲಿ ಗುರುವಾರ ಎಸ್‌ಡಿಪಿಐ(ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ನಗರ ಹಾಗೂ ಜಿಲ್ಲಾ ಸಮಿತಿ ವತಿಯಿಂದ ಆಯೋಜಿಸಿದ್ದ ಪಕ್ಷದ ಸಮಾವೇಶದಲ್ಲಿ ಮಾತನಾಡಿದ ಅವರು, ಮುಂದಿನ ಒಂದು ವರ್ಷದ ಅವಧಿಯಲ್ಲಿ ಲೋಕಸಭಾ ಚುನಾವಣೆ ಇದೆ. ಜಾಗೃತರಾಗದಿದ್ದರೆ ಮತ್ತಷ್ಟು ಹೀನಾಯ ಪರಿಸ್ಥಿತಿಗೆ ದೇಶವನ್ನು ದೂಡುತ್ತಾರೆ. ಆದ್ದರಿಂದ ಎಲ್ಲಾ ಕ್ಷೇತ್ರಗಳಲ್ಲಿ ಸಾಧ್ಯವಾಗದಿದ್ದರೂ ಅನ್ಯಾಯವನ್ನು ಖಂಡಿಸುವ ಪರ್ಯಾಯ ಶಕ್ತಿಯಾಗಿ, ಎಸ್‌ಡಿಪಿಐ ಶಾಸಕರು, ಸಂಸದರು ಚುನಾಯಿತರಾಗಬೇಕಾಗಿದೆ ಎಂದರು.

ಕಳೆದ 9 ವರ್ಷಗಳಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿದಿಂದಾಗಿ ದೇಶ ಆರ್ಥಿಕವಾಗಿ ದಿವಾಳಿಯಾಗಿದೆ. ಡಾಲರ್ ಎದುರು ರೂಪಾಯಿ ಮೌಲ್ಯವನ್ನು ಸರಿಸಮಾನವಾಗಿ ನಿಲ್ಲಿಸುತ್ತೇವೆ ಎಂದಿದ್ದರು. ಆದರೆ ಆಗಿಲ್ಲ. ಲೆಕ್ಕವಿಲ್ಲದಷ್ಟು ಉದ್ಯಮಗಳು ಮಾರಾಟವಾಗಿವೆ. ಜನಜೀವನ ಮಟ್ಟ ಪಾತಾಳಕ್ಕೆ ತಲುಪಿದೆ. ರೈತರ ಆತ್ಮಹತ್ಯೆಗಳ ಸರಣಿ ತಪ್ಪಿಸಲು ಸಾಧ್ಯವಾಗಿಲ್ಲ. ಕಾಂಗ್ರೆಸ್ 70 ವರ್ಷಗಳಿಂದ ಮಾಡಿದ್ದನ್ನು, ಬಿಜೆಪಿ ಕೇವಲ ಒಂಬತ್ತೂವರೆ ವರ್ಷದಲ್ಲೇ ಮಾಡಿದೆ. ಯಾರಿಗೆ ಯಾರೂ ಇಲ್ಲವೋ ಅವರಿಗೆ ನಾವಿದ್ದೇವೆ ಎಂದು ಎಸ್‌ಡಿಪಿಐ ಕೆಲಸ ಮಾಡಲಿದೆ ಎಂದು ಹೇಳಿದರು.

ಜಾತ್ಯಾತೀತ ಸಿದ್ದರಾಮಯ್ಯ ಎನ್ನುವುದರಲ್ಲಿ ಅರ್ಥವಿಲ್ಲ: ಆರ್‌ಎಸ್‌ಎಸ್ ಕೇವಲ ಸಂಘವಾಗಿ ಉಳಿದಿಲ್ಲ. ಒಂದು ವಿಷದ ಬೇರಾಗಿ ಇಡೀ ಸಮಾಜವನ್ನು ಆವರಿಸಿದೆ. ಹಲವು ಧಾರ್ಮಿಕ ಕ್ಷೇತ್ರಗಳು, ಸಂಘ–ಸಂಸ್ಥೆಗಳು, ಭಜನಾ ಮಂಡಳಿಗಳ ಹೆಸರಿನಲ್ಲಿ ರಾಜ್ಯದ ನೂರಾರು–ಸಾವಿರಾರು ಎಕರೆ ಭೂಮಿಯನ್ನು ಕಬ್ಜ ಮಾಡುತ್ತಿದೆ. ಇಸ್ಕಾನ್ ಸಂಸ್ಥೆಗೆ ಸಿದ್ದರಾಮಯ್ಯ ಅವರು ಶಿರಾದಲ್ಲಿ 278 ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ. ಬರೀ ಭಜನೆ ಮಾಡುವ ಸಂಸ್ಥೆಗೆ 278 ಎಕರೆ ಕೊಟ್ಟಿರುವ ಅವರು, ದಿಡ್ಡಳ್ಳಿ ಆದಿವಾಸಿಗಳ ಜೀವನಕ್ಕೆ 4 ಎಕರೆ ಜಮೀನು ಕೊಡಲಿಲ್ಲ. ಇಂತಹ ಸಿದ್ದರಾಮಯ್ಯ ಅವರನ್ನು ಜಾತ್ಯಾತೀತವಾದಿ ಎನ್ನುವುದರಲ್ಲಿ ಅರ್ಥವಿಲ್ಲ. ಈ ಸಮಾಜವನ್ನು ಅಪಾಯದಿಂದ ಕಾಪಾಡಬೇಕಾದರೆ ಎಸ್‌ಡಿಪಿಐ ಒಂದೇ ಪರಿಹಾರ ಎಂದರು.

ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ರಾಜ್ಯ ಸಮಿತಿ ಸದಸ್ಯರಾದ ಅಮ್ಜದ್ ಖಾನ್, ಮೌಲಾನಾ ನೂರುದ್ದೀನ್, ಜಿಲ್ಲಾಧ್ಯಕ್ಷ ರಫತ್ ಖಾನ್, ಉಪಾಧ್ಯಕ್ಷ ಎಸ್.ಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಮೊಹಮ್ಮದ್ ಸಫಿ ಉಲ್ಲಾ, ಅಕ್ರಮ್ ಮೌಲಾನ, ಕಾರ್ಯದರ್ಶಿಗಳಾದ ಜಾವೀದ್, ಫರ್ದೀನ್ ಅಹಮದ್, ಖಜಾಂಚಿ ಎನ್.ಎಂ.ಫಿರ್ದೋಸ್ ಮತ್ತಿತರರಿದ್ದರು.

ನಯವಂಚಕ ಸರ್ಕಾರ

"ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ನಯವಂಚಕ ಸರ್ಕಾರ ಅಧಿಕಾರದಲ್ಲಿದೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಮುಸಲ್ಮಾನರಿಗೆ ಇದ್ದ ಶೇ.4ರಷ್ಟು ಮೀಸಲಾತಿಯನ್ನು ರದ್ದು ಮಾಡಲಾಯಿತು. ಕೋರ್ಟ್‌ನಲ್ಲಿ ಅದಕ್ಕೆ ತಡೆ ನೀಡಿದ್ದು, ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದಲ್ಲಿ ಇಲ್ಲಿಯವರೆಗೆ 10–13 ಕ್ಯಾಬಿನೆಟ್ ಮೀಟಿಂಗ್‌ಗಳಾಗಿದ್ದರೂ ಮೀಸಲಾತಿ ರದ್ದು ಮಾಡಿರುವ ಬಗ್ಗೆ ಮಾತನಾಡಿಲ್ಲ. ಜಾತಿ ಜನಗಣತಿ ಬಿಡುಗಡೆ ಮಾಡುತ್ತಿಲ್ಲ. ಇಂತಹ ನಯವಂಚಕ ಸರ್ಕಾರವನ್ನು ಅಧಿಕಾರಕ್ಕೆ ತಂದು ಭಿಕ್ಷೆ ಬೇಡುವಂತಾಗಿದೆ.

–ಭಾಸ್ಕರ್ ಪ್ರಸಾದ್



ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನು ಟೀಂ ಮೈಸೂರು ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಟೀಂ ಮೈಸೂರಿನ ಗೋಕುಲ್ ಗೋವರ್ಧನ್, ಯಶವಂತ್, ಕಿರಣ್ ಜಯರಾಂಗೌಡ, ಹಿರಿಯಣ್ಣ, ಶಿವಪ್ರಸಾದ್, ನವೀನ್, ಸುನೀಲ್, ಮಂಜುನಾಥ್ (ಫಾರ್ಮಾ), ನಿಗಿನ್ ಉಪಸ್ಥಿತರಿದ್ದಾರೆ.

ಜೆಎಸ್‌ಎಸ್‌ನಲ್ಲಿ ಸೆರೆಬ್ರಲ್ ಪಾಲ್ಸಿ ಕುರಿತು ವಿಚಾರ ಸಂಕಿರಣ



ಮೈಸೂರು, ಅ.26– ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿಯ ಬೆಳ್ಳಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನ್ಯೂರೋ ಮತ್ತು ಪೀಡಿಯಾಟ್ರಿಕ್ ಫಿಸಿಯೋಥೆರಪಿ ವಿಭಾಗವು ಆಕ್ಟಿವಿಟೀಸ್–ಬೇಸ್ಡ್ ಅಪ್ರೋಚ್ ಇನ್ ದಿ ಮ್ಯಾನೇಜ್‌ಮೆಂಟ್ ಆ ಸೆರೆಬ್ರಲ್ ಆಕ್ಟಿ ವಿಟೀಸ್–ಬೇಸ್ಡ್ ಅಪ್ರೋಚ್ ಇನ್ ದಿ ಮ್ಯಾನೇಜ್‌ಮೆಂಟ್ ಆ ಸೆರೆಬ್ರಲ್ ಪಾಲ್ಸಿ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಮುಖ್ಯ ಫಿಸಿಯೋಥೆರಪಿಸ್ಟ್ ಡಾ.ಸೆಲ್ವ ಗಣಪತಿ, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಾಂಶುಪಾಲರಾದ ಡಾ.ಸುಮಾ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಜೆಎಸ್‌ಎಸ್. ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್ ಮಹೇಶ್ ವಹಿಸಿದ್ದರು.

ವಿಚಾರ ಸಂಕಿರಣದಲ್ಲಿ ಡಾ. ಸೆಲ್ವ ಗಣಪತಿಯವರು ಆಕ್ಟಿವಿಟೀಸ್–ಬೇಸ್ಡ್ ಅಪ್ರೋಚ್ ಇನ್ ದಿ ಮ್ಯಾನೇಜ್ಮೆಂಟ್ ಆಫ್ ಸೆರೆಬ್ರಲ್ ಪಾಲ್ಸಿ ವಿಷಯದ ಕುರಿತು ಮಾತನಾಡಿದರು. ಉಪನ್ಯಾಸಕ ಡಾ.ಪ್ರಕಾಶ್ ವಿ, ಪ್ರಾಧ್ಯಾಪಕ ಅಶೋಕ್, ರೀಟಾ ಪಾಟೀಲ್ ಇನ್ಸಿಟ್ಯೂಟ್ ಆಫ್ ಫಿಸಿಯೋಥೆರಪಿ, ಗುಜರಾತ್ ಅವರು "ಕಮ್ಯೂನಿಟಿ ಮೊಬಿಲಿಟಿ ಅಮಾಂಗ್ ಪೇಷೆಂಟ್ ವಿತ್ ಸ್ಟ್ರೋಕ್ ಕುರಿತು ಮಾತನಾಡಿದರು.

ಪ್ರಾಧ್ಯಾಪಕರು, ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಪ್ರಾಧ್ಯಾಪಕರಾದ ಶ್ರುತಿ ಪಾಟೀಲ್ ಅವರು, ಅಡ್ವಾನ್ಸ್ಡ್ ಟೆಕ್ನಾಲಜೀಸ್ ಇನ್ ನ್ಯುರೋ ರೆಹಬಿಲಿಟೇಷನ್–ಎನ್ ಇಂಟ್ರೊಡಕ್ಷನ್ ಟು ಫ್ಯುಟೊ ಕುರಿತು ಮಾತನಾಡಿದರು, ಎಂಜಿಎಂ ಇನ್ಸಿಟ್ಯೂಟ್ ಆಫ್ ಫಿಸಿಯೋಥೆರಪಿ, ಔರಂಗಾಬಾದ್ ಉಪನ್ಯಾಸಕರಾದ ಡಾ. ಶ್ರೀಲತಾ ಗಿರೀಶ್ ಅವರು ಮೂವ್ಮೆಂಟ್ ಡಿಸ್‌ಆರ್ಡರ್ಸ್ ಇನ್ ಚಿಲ್ಡ್ರನ್ ಕುರಿತು ಮಾತನಾಡಿದರು. ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಉಪನ್ಯಾಸಕರಾದ ಶ್ರೀಮತಿ ಕೆ. ಸರಿತಾ, ಅಸೆಸ್ಮೆಂಟ್ ಬ್ಯಾಟರಿ ಫಾರ್ ಚಿಲ್ಡ್ರನ್ ವಿಥ್ ಡೆವಲಪ್‌ಮೆಂಟಲ್ ಕೋರ್ಡಿನೇಶನ್ ಡಿಸ್‌ಆರ್ಡರ್ ಕುರಿತು ಮತ್ತು ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋ ಥೆರಪಿ ಉಪನ್ಯಾಸಕ ಕವಾಡಿ ನರೇಶ್ ಹ್ಯಾಮರ್ಸ್ಮಿತ್ ಇನ್ಫ್ಯಾಂಟ್ ನ್ಯೂರಾಲಜಿಕಲ್ ಎಕ್ಸಾಮಿನೇಷನ್ ಕುರಿತು ಮಾತನಾಡಿದರು.

ಅ.29ರಂದು ದಸರಾ ಕವಿ–ಕಾವ್ಯ ಸಂಭ್ರಮ


● ರಾಜ್ಯ ಮಟ್ಟದ ಕಾವ್ಯೋತ್ಸವ ; ಪುಸ್ತಕ ಲೋಕಾರ್ಪಣೆ
● ಡಾ.ಸಿಪಿಕೆ ಕಾವ್ಯ ಪ್ರಶಸ್ತಿ ಪ್ರದಾನ; ಗಣ್ಯರಿಗೆ ಅಭಿನಂದನೆ

ಮೈಸೂರು: ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಅ. 29 ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ನಗರದ ಕೆ.ಜಿ.ಕೊಪ್ಪಲಿನ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ 'ದಸರಾ ಕವಿ–ಕಾವ್ಯ ಸಂಭ್ರಮ'ದ ಅಂಗವಾಗಿ ದಿನವಿಡೀ ರಾಜ್ಯಮಟ್ಟದ ಕಾವ್ಯೋತ್ಸವ, 'ಸಂಜೆ ವಿಹಾರ' ಪುಸ್ತಕ ಲೋಕಾರ್ಪಣೆ, ಗಣ್ಯರಿಗೆ ಅಭಿನಂದನೆ ಹಾಗೂ ಡಾ. ಸಿಪಿಕೆ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ತಿಳಿಸಿದ್ದಾರೆ.

ಉದ್ಘಾಟನೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ತಳವಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭವನ್ನು ಪ್ರಸಿದ್ಧ ಕವಯತ್ರಿ ಮತ್ತು ಗಾಯಕಿ ಎಚ್.ಆರ್.ಲೀಲಾವತಿ ಉದ್ಘಾಟಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಕನ್ನಡಪ್ರಭ ದಿನ ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್ 'ಸಂಜೆ ವಿಹಾರ' ಪುಸ್ತಕ ಲೋಕಾರ್ಪಣೆ ಮಾಡುವರು.

ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಐಪಿಎಸ್ ಅಧಿಕಾರಿ ಡಾ.ಎ.ಎನ್.ಪ್ರಕಾಶ್‌ಗೌಡ, ಗೋಪಾಲ





ಗೌಡ ಶಾಂತವೇರಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಶುಶ್ರುತ್ ಗೌಡ, ದಕ್ಷಿಣ ಕನ್ನಡ ಜಿಪಂ ಉಪಕಾರ್ಯದರ್ಶಿ ಎ.ಇ.ರಘು, ಕೃತಿಕಾರ ಮೊಹಮ್ಮದ್ ಅಜರುದ್ದೀನ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಿ.ಎಸ್.ಸತೀಶ್, ಅಂಕಣಕಾರ ಮಿರ್ಲೆ ಚಂದ್ರಶೇಖರ್, ಕಾರ್ ಮಾರ್ಟ್ ಮಾಲೀಕ ಮಹಾಂತೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾವ್ಯೋತ್ಸವ: ಬೆಳಗ್ಗೆ 11–30ಕ್ಕೆ ಮೊದಲನೆಯ ಕವಿಗೋಷ್ಠಿ ನಡೆಯಲಿದ್ದು, ವಿವಿಧ ಜಿಲ್ಲೆಗಳ ಸುಮಾರು 70 ಮಂದಿ ಕವಿಗಳು ಎರಡೂ ಕವಿಗೋಷ್ಠಿಗಳಲ್ಲಿ ಭಾಗಿಯಾಗಿ ತಮ್ಮ ಕವನ ವಾಚಿಸುವರು.

ಸಮಾರೋಪ, ಪ್ರಶಸ್ತಿ ಪ್ರದಾನ : ಸಂಜೆ 4.30ಕ್ಕೆ ನಡೆಯಲಿರುವ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಎಂಎಲ್‌ಸಿ ಡಾ.ತಿಮ್ಮಯ್ಯ ವಹಿಸುವರು. ಪ್ರಸಿದ್ಧ ಕವಯತ್ರಿ ಶಶಿಕಲಾ ವಸ್ತ್ರದ 'ಡಾ.ಸಿಪಿಕೆ ಕಾವ್ಯ ಪ್ರಶಸ್ತಿ' ಪ್ರದಾನ ಮಾಡುವರು. ಹೆಚ್ಚುವರಿ ಜಿಲಾಧಿಕಾರಿ ಪಿ.ಶಿವರಾಜು ಸಮಾರೋಪ ನುಡಿಗಳನ್ನಾಡುವರು. ಇದೇ ಸಂದರ್ಭದಲ್ಲಿ ಸಾಹಿತಿ ಡಾ.ಸಿಪಿಕೆ ಅವರು ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಹಾಗೂ ಕನ್ನಡ ಹೋರಾಟಗಾರ ಎಂ. ಮೋಹನ್ ಕುಮಾರಗೌಡರನ್ನು ಅಭಿನಂದಿಸುವರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಯಮಿ ಪಿ.ಬಿ. ಅನಿಲ್, ಟಿ.ಕೆ.ಕೆಂಚೇಗೌಡ, ಬಿಜೆಪಿ ಯುವ ಮುಖಂಡ ಮೋಹಿತ್‌ಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕವಿಗಳಾದ ಕವಿತಾ ಹೆಗಡೆ ಅಭಯಂ, ವಿಜಯಲಕ್ಷ್ಮಿ ನುಗ್ಗೇಹಳ್ಳಿ, ಹೇಮಲತ ವಸ್ತ್ರದ, ಸಂಗೀತ ರವಿರಾಜ್, ಡಾ.ಎನ್.ಕೆ.ದಿಲೀಪ್, ಶಿ.ಜು.ಪಾಶ, ಕೊಟ್ರೇಶ್ ಎಸ್.ಉಪ್ಪಾರ್, ಚಂದ್ರಶೇಖರ ಮಾಡಲಗೇರಿ, ನಾಗರಾಜ್ ತಲಕಾಡು, ದಿನೇಶ್ ಹೆರಗನಹಳ್ಳಿ ಅವರು 'ಡಾ.ಸಿಪಿಕೆ ಕಾವ್ಯ ಪ್ರಶಸ್ತಿ' ಸ್ವೀಕರಿಸಲಿದ್ದಾರೆ.



ಜಯಲಕ್ಷ್ಮೀಪುರಂನ ಲಕ್ಷ್ಮಿದೇವಮ್ಮ ಸರ್ಕಾರಿ ಆಸ್ಪತ್ರೆಯ ನೂತನ ನಿರ್ದೇಶಕರಾಗಿ ಆಯ್ಕೆಯಾದ ಪಾಪಣ್ಣ ಮತ್ತು ಕೃಷ್ಣ ಅವರನ್ನು ಮಹಾಜನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಸುಜಾತ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಮಹಾಜನ ಪ್ರೌಢಶಾಲೆಯ ಧನಂಜಯ, ರಾಜೇಶ್ ಹಾಗೂ ಶಿಕ್ಷಕ ವೃಂದದವರಿದ್ದರು.

ಓವೆಲ್ ಮೈದಾನದಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಂದ ಧ್ವಜಾರೋಹಣ

ಮೈಸೂರು, ಅ.26– ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ನವೆಂಬರ್ 1ರಂದು ನಗರದ ಓವೆಲ್ ಮೈದಾನದಲ್ಲಿ ಅದ್ದೂರಿಯಾಗಿ ಜರುಗಲಿದ್ದು, ಅಧಿಕಾರಿಗಳು, ಕನ್ನಡ ಚಳುವಳಿಗಾರರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಕೈ ಜೋಡಿಸುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವ ಆಚರಣೆಯಲ್ಲಿ ಶಾಲಾ–ಕಾಲೇಜುಗಳ ಮಕ್ಕಳ ಭಾಗವಹಿಸುವಿಕೆಗೆ ಹೆಚ್ಚು ಪ್ರೋತ್ಸಾಹ ನೀಡಿ. ಮುಂದಿನ ದಿನಗಳಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮ ಮುಂದಿನ ಪೀಳಿಗೆಗೆ ಇರುವುದರಿಂದ, ಕನ್ನಡ ರಾಜ್ಯೋತ್ಸವ ಹಾಗೂ ಸಂಬಂಧಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಹೆಚ್ಚು ಅವಕಾಶ ಕಲ್ಪಿಸಿ ಎಂದು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ನ.1ರಂದು ಬೆಳಗ್ಗೆ 8.30ಕ್ಕೆ ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪೂಜೆ ಸಲ್ಲಿಸಿ, ನಂತರ ನಗರದ ಓವೆಲ್ ಗ್ರೌಂಡ್ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮುವನ್ನು ಉದ್ಘಾಟಿಸುವರು. ಇದೇ ಸಂದರ್ಭದಲ್ಲಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳು ಮೆರವಣಿಗೆ ಹೊರಟು ಕೆ.ಆರ್ ಸರ್ಕಲ್ ವೃತ್ತದಿಂದ ದೇವರಾಜ ಅರಸು ರಸ್ತೆ ಮಾರ್ಗವಾಗಿ ಹಳೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಸಾಗಿ ಓವೆಲ್ ಮೈದಾನ ತಲುಪುವುದು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ನಾಡಿನ ಹಿರಿಮೆ ಸಾರುವ ಹಾಡು, ಗೀತೆಗಳು, ಸ್ತಬ್ದ ಚಿತ್ರಗಳು, ಕಲಾತಂಡಗಳು ನಾಡಿನ ಸಾಂಸ್ಕೃತಿಕ ವೈಭವವನ್ನು ಅನಾವರಣಗೊಳಿಸಬೇಕು. ಶಿಸ್ತುಬದ್ಧ ಪರೇಡ್ ನಡೆಯಲಿ. ಜಿಲ್ಲಾಮಟ್ಟದಲ್ಲಿ ಸಾಧನೆ ಮಾಡಿದ ಗೌರವಾನ್ವಿತರಿಗೆ ಸನ್ಮಾನ ಕಾರ್ಯಕ್ರಮ ಹಾಗೂ ಕಳೆದ ಶೈಕ್ಷಣಿಕ ಸಾಲಿನಲ್ಲಿ ಶೇ. ನೂರರಷ್ಟು ಫಲಿತಾಂಶ ಪಡೆದ ಆಯ್ದ ಗ್ರಾಮೀಣ ಸರ್ಕಾರಿ ಶಾಲೆಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸಂಜೆ 6 ಗಂಟೆಗೆ ನಗರದ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಕನ್ನಡ ರಾಜ್ಯೋತ್ಸವ ಆಚರಣೆಗೆ ಎಲ್ಲಾ ಸರ್ಕಾರಿ ನೌಕರರು ಕಡ್ಡಾಯವಾಗಿ ಹಾಜರಾಗಬೇಕು ಎಂದರು.

ಕನ್ನಡಪರ ಹೋರಾಟಗಾರ ಅರವಿಂದ್ ಶರ್ಮ ಮಾತನಾಡಿ, ನಗರದ ಪ್ರೇಕ್ಷಣೀಯ ಸ್ಥಳಗಳಲ್ಲಿ ಫಲಕಗಳು ಆಂಗ್ಲ ಭಾಷೆಯಲ್ಲಿದ್ದು, ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ಈಗಾಗಲೇ ಕನ್ನಡದಲ್ಲಿರುವ ಫಲಕಗಳು ನಶಿಸುತ್ತಿದ್ದಲ್ಲಿ ಅವುಗಳನ್ನು ಪುನಶ್ಚೇತನಗೊಳಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಮೊದಲಿಗೆ ಜನಸಂದಣಿ ಇರುವ ಮೈಸೂರಿನ 10 ಜಾಗಗಳಲ್ಲಿ ಕನ್ನಡದ ಸೂಚನಾ ನಾಮಫಲಕಗಳನ್ನು ಕಡ್ಡಾಯವಾಗಿ ಹಾಕಿಸುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಅವರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಮುಡಾ ಆಯುಕ್ತ ದಿನೇಶ್ ಕುಮಾರ್, ತಹಸೀಲ್ದಾರ್ ಗಿರೀಶ್, ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ. ಗೋವಿಂದರಾಜು, ಕನ್ನಡಪರ ಹೋರಾಟಗಾರರಾದ ವೇಣುಗೋಪಾಲ್, ಮೋಹನ್‌ಕುಮಾರ್‌ಗೌಡ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಗ್ರಾಮ ಮಟ್ಟದಲ್ಲೇ ಪೌತಿ ಖಾತೆ ಸಮಸ್ಯೆಗೆ ಪರಿಹಾರ

ತಹಸೀಲ್ದಾರ್ ಡಾ.ಶಿವಕುಮಾರ್ ಬಿರಾದಾರ್



ಮಂಡ್ಯ, ಅ.26– ರೈತರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಗ್ರಾಮ ಮಟ್ಟದಲ್ಲೇ ಪೌತಿ ಖಾತೆ ಆಂದೋಲನ ರೂಪಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಮಂಡ್ಯ ತಹಸೀಲ್ದಾರ್ ಡಾ.ಶಿವಕುಮಾರ್ ಬಿರಾದಾರ್ ತಿಳಿಸಿದರು.

ತಾಲೂಕಿನ ತಗ್ಗಹಳ್ಳಿ ಗ್ರಾಮದ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಕಂದಾಯ ಇಲಾಖೆ, ತಾಲೂಕು ಆಡಳಿತದಿಂದ ನಡೆದ ಪೌತಿ ಖಾತೆ ಆಂದೋಲನ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 15 ಸಾವಿರಕ್ಕೂ ಹೆಚ್ಚು ಆರ್‌ಟಿಸಿಗಳು ಮೃತ ಖಾತೆದಾರರ ಹೆಸರಿನಲ್ಲೇ ಮುಂದುವರೆದಿವೆ. ಅದೇ ರೀತಿ ಮಂಡ್ಯ ತಾಲೂಕಿನಲ್ಲೂ ಇವೆ ಹೀಗಾಗಿ ಕಂದಾಯ ಇಲಾಖೆಯವರು ಗ್ರಾಮಗಳಿಗೆ ಆಗಮಿಸಿ ಪೌತಿ ಖಾತೆ ಮಾಡಿಕೊಡಲಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ರೈತಾಪಿ ವರ್ಗ ಹಾಗೂ ಫಲಾನುಭವಿಗಳು ಪೌತಿ ಖಾತೆ ಪಡೆಯಲು ಮರಣ ದೃಢೀಕರಣ ಪತ್ರ, ವಂಶವೃಕ್ಷ, ಆರ್‌ಟಿಸಿ, ಆಧಾರ್ ಕಾರ್ಡ್ ಜೊತೆ ಅರ್ಜಿಗಳನ್ನು ತಂದು ಕೊಟ್ಟಲ್ಲಿ ತಕರಾರು ಇಲ್ಲ ಎಂದರೆ 15 ದಿನದೊಳಗೆ ಫಲಾನುಭವಿಗಳಿಗೆ ಪೌತಿ ಖಾತೆ ಕೊಡಲಾಗುವುದು. ಕಂದಾಯ ಇಲಾಖೆ ಸಮಸ್ಯೆಗಳು ಇದ್ದರೆ ಕೂಡಲೇ ಅರ್ಜಿಗಳನ್ನು ಕೊಡಿ ಸಮಸ್ಯೆ ಬಗೆಹರಿಸಲಾಗುವುದು ಎಂದರು.

ಪೌತಿ ಖಾತಾ ಆಂದೋಲನದಲ್ಲಿ 45 ಮಂದಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಲಾಯಿತು. ಸಾಮಾಜಿಕ ಭದ್ರತಾ ಯೋಜನೆಯಿಂದ 2 ಅರ್ಜಿಗಳನ್ನು ಸ್ವೀಕರಿಸಲಾಯಿತು. ಇದೇ ವೇಳೆ 27 ಮಂದಿ ಫಲಾನುಭವಿಗಳಿಗೆ ಮಾಸಾಶನ ಆದೇಶದ ಪ್ರತಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಉಪ ತಹಸೀಲ್ದಾರ್ ಡಿ.ತಮ್ಮಣ್ಣಗೌಡ, ಗ್ರಾಪಂ ಅಧ್ಯಕ್ಷೆ ಅರ್ಪಿತಾ, ಸದಸ್ಯರಾದ ಟಿ.ಎಂ.ಸುರೇಶ್, ಟಿ.ಸಿ.ರಘು, ನಿಂಗಣ್ಣ, ತಾಪಂ ಮಾಜಿ ಸದಸ್ಯ ನಾಗಣ್ಣ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ನ.3, ದಿಶಾ ಸಭೆ

ಮಂಡ್ಯ, ಅ.26– ಸಂಸದೆ ಸುಮಲತಾ ಅಂಬರೀಶ್ ಅವರ ಅಧ್ಯಕ್ಷತೆಯಲ್ಲಿ ನ.3ರಂದು ಮಧ್ಯಾಹ್ನ 2 ಗಂಟೆಗೆ ಜಿಪಂ ಕಾವೇರಿ ಸಭಾಂಗಣದಲ್ಲಿ ದಿಶಾ ಸಭೆ ನಡೆಯಲಿದೆ ಎಂದು ಜಿಪಂ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಕೊರತೆಗೆ ಅನುಗುಣವಾಗಿ ನೀರು ಹಂಚಿಕೆಯೇ ಕಾವೇರಿ ಸಂಕಷ್ಟ ಸೂತ್ರ

ಕಾವೇರಿ ಕುಟುಂಬದ ಮುಖ್ಯಸ್ಥ ಕೆ.ಸಿ.ಬಸವರಾಜ್ ಅಭಿಪ್ರಾಯ



ಮಂಡ್ಯ, ಅ.26– ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಅಭಾವದಿಂದ ಉಂಟಾಗುವ ನೀರಿನ ಕೊರತೆ ಲೆಕ್ಕ ಹಾಕಿ ಅದಕ್ಕೆ ಅನುಗುಣವಾಗಿ ಮೂರು ರಾಜ್ಯಗಳಿಗೆ ನೀರು ಹಂಚಿಕೆ ಮಾಡುವ ಸಂಕಷ್ಟ ಸೂತ್ರ ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿದೆ ಎಂದು ಕಾವೇರಿ ಕುಟುಂಬದ ಮುಖ್ಯಸ್ಥ ಕೆ.ಸಿ.ಬಸವರಾಜ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನ್ಯಾಯಾಧೀಕರಣ ಅಂತಿಮ ತೀರ್ಪಿನ 5ನೇ ಸಂಪುಟ, 7ನೇ ಅಧ್ಯಾಯದ 212ನೇ ಪುಟದಲ್ಲಿ ಕಾಲಂ 28ರಲ್ಲಿ ಸಂಕಷ್ಟ ಸೂತ್ರದ ಬಗ್ಗೆ ತಿಳಿಸಿದ್ದು, ಇದೇ ಸಂಪುಟದ 7ನೇ ಅಧ್ಯಾಯದ ಕಾಲಂ 11ರಲ್ಲಿ ಸಾಮಾನ್ಯವಾಗಿ ಕಾವೇರಿ ಜಲಾನಯನ ಪ್ರದೇಶದ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪುದುಚೇರಿ ಭಾಗಗಳಲ್ಲಿ ಬೀಳುವ ಮಳೆ ಆಧರಿಸಿ 740 ಟಿಎಂಸಿ ನೀರು ಸಿಗುತ್ತದೆ ಎಂದು ಪರಿಗಣಿಸಿದೆ ಎಂದರು.

ರಾಜ್ಯಗಳಿಗೆ ಅಕಸ್ಮಾತ್ ಮಳೆ ಕೊರತೆಯಿಂದ 740 ಟಿಎಂಸಿ ನೀರು ದೊರಕದಿದ್ದರೆ ಅದನ್ನು ಸಂಕಷ್ಟ ಸ್ಥಿತಿ ಎಂದು ಪರಿಗಣಿಸಿ, ನೀರಿನ ಕೊರತೆ ಪ್ರಮಾಣ ಲೆಕ್ಕ ಹಾಕಿ, ಸಂಬಂಧಿತ ರಾಜ್ಯಗಳು ಕೊರತೆ ಪ್ರಮಾಣಾನುಪಾತದಲ್ಲಿ ತಮ್ಮ ಪಾಲನ್ನು ಪಡೆಯುವುದು ಎಂದು ಸೂತ್ರದಲ್ಲಿ ಹೇಳಿದೆ ಎಂದರು.

ರಾಜ್ಯಗಳ ನೀರಿನ ಪಾಲನ್ನು ಕಾವೇರಿ ನೀರು ನಿಯಂತ್ರಣ ಸಮಿತಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕರ್ತವ್ಯ ಮತ್ತು ಜವಾಬ್ದಾರಿ ಭಾಗವಾಗಿ ಒಟ್ಟು ಕೊರತೆ ಪ್ರಮಾಣ ಲೆಕ್ಕ ಹಾಕಿ, ಅದಕ್ಕನುಗುಣವಾಗಿ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳಿಗೆ ಖಚಿತ ಮಾಡಿ ಹಂಚುವುದು ಎಂದು ಕಾವೇರಿ ನ್ಯಾಯಾಧೀಕರಣ ಅಂತಿಮ ತೀರ್ಪಿನಲ್ಲಿ ಸೂಚಿಸಿರುವ ಸಂಕಷ್ಟ ಸೂತ್ರವಾಗಿದೆ ಎಂದರು.

ಕಾವೇರಿ ನ್ಯಾಯಾಧೀಕರಣ ಅಸ್ತಿತ್ವಕ್ಕೆ ಬಂದ ವೇಳೆ ಮಳೆ ಕೊರತೆ ಎದುರಾಗಿ ಯಾವ ಸಂಕಷ್ಟ ಇಲ್ಲದಿದ್ದರಿಂದ ಸಂಕಷ್ಟವನ್ನು ವಿಶೇಷ ಸಮಸ್ಯೆ ಎಂದು ಪರಿಗಣಿಸಿರಲಿಲ್ಲ. ಆದರೂ ಸಹ ಮುಂಜಾಗ್ರತೆ ವಹಿಸಿದ್ದ ನ್ಯಾಯಾಧೀಕರಣ ಉತ್ತಮ ಮಳೆಯಾದ ವರ್ಷದಲ್ಲಿ ಹೆಚ್ಚುವರಿ ನೀರನ್ನು ಜಲಾಶಯಗಳಲ್ಲಿ 3 ಟಿಎಂಸಿವರೆಗೆ ಉಳಿಸಿಕೊಂಡು, ಮುಂದಿನ ವರ್ಷದ ಸಂಕಷ್ಟದ ಸಮಯದಲ್ಲಿ ಬಳಸಲು ಉಪಯೋಗಿಸಬಹುದು ಎಂದು ನಿರ್ದಿಷ್ಟ ಅಧಿಕಾರ ಮತ್ತು ಪ್ರಾಧಿಕಾರಗಳ ಆಡಳಿತಕ್ಕೆ ಸಲಹೆ ರೂಪದಲ್ಲಿ ಕೊಟ್ಟಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ಕೆ.ಬೋರಯ್ಯ, ರೈತ ಸಂಘದ ಚಂದ್ರಶೇಖರ್, ಮುದ್ದೇಗೌಡ ಇದ್ದರು.

ಕಾವೇರಿಗಾಗಿ ಮುಂದುವರೆದ ರೈತರ ಧರಣಿ

ಮಂಡ್ಯ: ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಮುಂದುವರೆದಿದ್ದು, ಕೀಲಾರ ಗ್ರಾಮಸ್ಥರು ಗುರುವಾರ ಕಾವೇರಿ ಹೋರಾಟ ಬೆಂಬಲಿಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮುಖಂಡರ ಜೊತೆಗೂಡಿ ರಸ್ತೆ ತಡೆ ನಡೆಸಿದ ಗ್ರಾಮಸ್ಥರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಟ್ರ್ಯಾಕ್ಟರ್‌ಗಳ ಸಮೇತ ಮೆರವಣಿಗೆ ಹೊರಟು ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಧರಣಿ ಸ್ಥಳಕ್ಕೆ ತೆರಳಿ ನಿರಂತರ ಧರಣಿಯಲ್ಲಿ ಭಾಗಿಯಾದರು. ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರ ತಾರತಮ್ಯ ಮಾಡುತ್ತಿದೆ. ಜಲಾಶಯಗಳಲ್ಲಿನ ನೀರಿನ ಲಭ್ಯತೆ ಬಗ್ಗೆ ಪರಿಶೀಲಿಸದೆ ನೀರು ಬಿಡಲು ಆದೇಶಿಸಿರುವುದು ಕರ್ನಾಟಕಕ್ಕೆ ಅನ್ಯಾಯ ಮಾಡಿದಂತಾಗಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಕೃಷ್ಣ, ಕೆ.ಟಿ.ಚಂದ್ರು, ಸೋಮಶೇಖರ್, ಕೆ.ಎಸ್.ರಮೇಶ್, ಕೆ.ಚಂದ್ರಶೇಖರ್, ಕಾವೇರಿ ಕುಟುಂಬದ ಪ್ರೊ.ಕೆ.ಸಿ.ಬಸವರಾಜ್, ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ರೈತ ಸಂಘದ ಚಂದ್ರಶೇಖರ್, ಮುದ್ದೇಗೌಡ, ಕನ್ನಡಸೇನೆ ಮಂಜುನಾಥ್, ದಸಂಸ ಕೃಷ್ಣ, ಕೋಮಲ ಭಾಗವಹಿಸಿದ್ದರು.

ಪಾರಂಪರಿಕ ವೈದ್ಯ ಪದ್ಧತಿಯನ್ನು ಮುಖ್ಯವಾಹಿನಿಗೆ ತರಬೇಕು

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್



ನಾಗಮಂಗಲ, ಅ.26– ನಕಲಿ ವೈದ್ಯರನ್ನು ದೂರವಿಟ್ಟಾಗ ಮಾತ್ರ ನಾಟಿ ವೈದ್ಯ ಪದ್ಧತಿ ಮುಖ್ಯವಾಹಿನಿಗೆ ಬರಲು ಸಾಧ್ಯ. ಹೀಗಾಗಿ ಆಧುನಿಕ ವೈದ್ಯಕೀಯದ ಜೊತೆಗೆ ಪಾರಂಪರಿಕ ವೈದ್ಯ ಪದ್ಧತಿಯನ್ನು ನಾವು ಮುಖ್ಯವಾಹಿನಿಗೆ ತರಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ತಾಲೂಕಿನ ಆದಿಚುಂಚನಗಿರಿ ಸಂಸ್ಥಾನದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಪಾರಂಪರಿಕ ವೈದ್ಯರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಬೆಳೆಯುತ್ತಿರುವ ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಬಹುತೇಕರು ನಾಟಿ ವೈದ್ಯ ಪದ್ಧತಿ ನಂಬುವುದಿಲ್ಲ. ಆದರೆ ಅಲೋಪತಿ ಬರುವ ಮುನ್ನ ನಮ್ಮ ರಾಜ ಮಹಾರಾಜರಿಗೆ ಚಿಕಿತ್ಸೆ ನೀಡಿ, ಕಾಯಿಲೆಗಳನ್ನು ಗುಣ ಪಡಿಸುತ್ತಿದ್ದದ್ದು ನಮ್ಮ ಗಿಡ ಮೂಲಿಕೆಗಳ ಔಷಧಿಯ ನಾಟಿ ಪದ್ಧತಿ. ಹೀಗಾಗಿ ಗಿಡ ಮೂಲಿಕೆಗಳ ಚಿಕಿತ್ಸೆ, ಪಾರಂಪರಿಕ ವೈದ್ಯ ಪದ್ಧತಿಯನ್ನು ಮುಖ್ಯವಾಹಿನಿಗೆ ತರಬೇಕು ಎಂದರು.

ನಕಲಿ ವೈದ್ಯರ ಹಾವಳಿಯಿಂದಾಗಿ ನಾಟಿ ವೈದ್ಯ ಪದ್ಧತಿ ಮುಖ್ಯವಾಹಿನಿಗೆ ಬಾರದೇ ಮರೆಮಾಚಲಾಗಿದೆ. ಗ್ರಾಮೀಣ ಬಡ ಜನರಿಗೆ ಕಡಿಮೆ ಖರ್ಚಿನಲ್ಲಿ ಆರೋಗ್ಯ ಒದಗಿಸುವಲ್ಲಿ ಪಾರಂಪರಿಕ ವೈದ್ಯರ ಕೊಡುಗೆ ಅಪಾರ. ಇಂದಿಗೂ ಅನೇಕರು ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚದ ಚಿಕಿತ್ಸೆ ಹೇಳಿದಾಗ, ನಾಟಿ ಔಷಧಿ ಮೇಲೆ ನಂಬಿಕೆಯಿಟ್ಟು ಚಿಕಿತ್ಸೆ ಪಡೆಯುತ್ತಾರೆ. ಗಿಡಮೂಲಿಕೆ ಔಷಧಿ ಉಪಚಾರಗಳಿಂದ ಅತಿ ಕಡಿಮೆ ಖರ್ಚಿನಲ್ಲಿ ಬಡವರಿಗೆ ಆರೋಗ್ಯ ಸೇವೆ ಸಿಗಲಿದೆ. ಈ ನಿಟ್ಟಿನಲ್ಲಿ ನಮ್ಮ ಪಾರಂಪರಿಕ ವೈದ್ಯ ಪದ್ಧತಿ ಮುಖ್ಯವಾಹಿನಿಗೆ ಬರಬೇಕು ಎಂದರು.

ನೈಜ ನಾಟಿ ವೈದ್ಯರನ್ನು ಗುರುತಿಸುವುದು ಒಂದು ಸವಾಲು. ಹೀಗಾಗಿ ಒಂದು ಫ್ರೇಮ್ ವರ್ಕ್ ಮುಖ್ಯ, ನಿಯಮಾವಳಿಗಳೊಂದಿಗೆ ನಾಟಿ ವೈದ್ಯರನ್ನು ಗುರುತಿಸುವ ವ್ಯವಸ್ಥೆ ಜಾರಿಗೆ ಬರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಮುಕ್ತ ಮನಸ್ಸು ಹೊಂದಿದೆ ಎಂದ ಸಚಿವರು, ನಾಟಿ ವೈದ್ಯರ ಔಷಧಿ ವಿಧಾನಗಳು, ಗಿಡ ಮೂಲಿಕೆಗಳ ಬಗ್ಗೆ ವಿಸ್ತೃತವಾಗಿ ವರದಿಯೊಂದಿಗೆ ಮನವಿ ಸಲ್ಲಿಸುವಂತೆ ಪಾರಂಪರಿಕ ವೈದ್ಯರ ಪರಿಷತ್‌ಗೆ ಸೂಚನೆ ನೀಡಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಆರೋಗ್ಯ ಕ್ಷೇತ್ರದಲ್ಲಿ ಹಳೇ ಬೇರು ಹೊಸ ಚಿಗುರು ಎರಡೂ ಮುಖ್ಯ. ಹೀಗಾಗಿ ನಾಟಿ ವೈದ್ಯ ಪದ್ಧತಿಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಋಷಿ ಮುನಿಗಳಿಂದ ಪರಂಪರಾಗತವಾಗಿ ಬಂದಿರುವ ಭಾರತೀಯ ವೈದ್ಯ ಪದ್ಧತಿಯನ್ನು ನಾವು ಉಳಿಸಿಕೊಂಡು ಹೋಗಬೇಕು. ಹಲವು ಗಿಡಮೂಲಿಕೆಗಳು ಅವಸಾನದ ಅಂಚಿನಲ್ಲಿವೆ. ಗಿಡ ಮೂಲಿಕೆ ರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದರು.

ಈ ನಿಟ್ಟಿನಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನಿಜಕ್ಕೂ ಆಸಕ್ತಿ ತೋರಿಸಿ ಸಮ್ಮೇಳನಕ್ಕೆ ಬಂದಿದ್ದಾರೆ. ನಾಟಿ ವೈದ್ಯರ ಸಮ್ಮೇಳನದಲ್ಲಿ ಮೊದಲ ಬಾರಿಗೆ ಸರ್ಕಾರದ ಆರೋಗ್ಯ ಸಚಿವರು ಪಾಲ್ಗೊಂಡಿರುವುದು ನಿಜಕ್ಕೂ ಸಂತಸದ ಸಂಗತಿ. ಏನಾದರೊಂದು ಪರಿಹಾರ ಕಂಡುಕೊಳ್ಳಬೇಕು ಎಂಬ ದೃಷ್ಟಿಕೋನವನ್ನು ದಿನೇಶ್ ಗುಂಡೂರಾವ್ ಹೊಂದಿದ್ದಾರೆ. ಈ ಹಿಂದೆ ಆಯುಷ್ ಕಾಲೇಜುಗಳಲ್ಲಿ ಪ್ರವೇಶಾತಿ ವ್ಯವಸ್ಥೆಯಲ್ಲಿ ಸಾಕಷ್ಟು ಸಮಸ್ಯೆ ಇತ್ತು. ಸಮಸ್ಯೆಯನ್ನು ಸಚಿವರ ಗಮನಕ್ಕೆ ತಂದ 10 ದಿನಗಳಲ್ಲಿ ಪರಿಹಾರ ನೀಡಿದರು. ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು ಎಂಬುದನ್ನು ನಿಶ್ಚಯಿಸಿಕೊಂಡು ಗುಂಡೂರಾವ್ ಮುಂದೆ ಸಾಗುತ್ತಿದ್ದಾರೆ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಯುವಕ ನೀರು ಪಾಲು

ಹಲಗೂರು, ಅ.26– ಕಾವೇರಿ ನದಿಯಲ್ಲಿ ಈಜಲು ಹೋದ ಯುವಕನೋರ್ವ ನೀರಿನ ಸೆಳೆತಕ್ಕೆ ಸಿಲುಕಿ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುತ್ತತ್ತಿಯಲ್ಲಿ ನಡೆದಿದೆ. ಬೆಂಗಳೂರಿನ ಕನಕದಾಸ ಲೇಔಟ್‌ನ ಲಿಂಗರಾಜಪುರ ಬಡಾವಣೆ ನಿವಾಸಿ ಶಂಕರ್ ಅವರ ಪುತ್ರ ಅಭಿಷೇಕ್(21) ಸಾವನ್ನಪ್ಪಿದ ಯುವಕ. ಇಂಜಿನಿಯರಿಂಗ್ ಪದವೀಧರನಾಗಿದ್ದ ಈತ ಸ್ನೇಹಿತರೊಂದಿಗೆ ಬೆಂಗಳೂರಿನಿಂದ ಮುತ್ತತ್ತಿಗೆ ಆಗಮಿಸಿದ್ದ ಎನ್ನಲಾಗಿದ್ದು, ಬುಧವಾರ ಮಧ್ಯಾಹ್ನ 12.30ರಲ್ಲಿ ಕಾವೇರಿ ನದಿಯಲ್ಲಿ ಈಜಲು ಹೋಗಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾನೆ. ನುರಿತ ಈಜುಗಾರರ ಸಹಾಯದಿಂದ ಗುರುವಾರ ಮಧ್ಯಾಹ್ನ ಮೃತದೇಹವನ್ನು ನದಿಯಿಂದ ಹೊರತೆಗೆದು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಚಿತ ತಪಾಸಣೆ, ಚಿಕಿತ್ಸಾ ಶಿಬಿರಕ್ಕೆ ಚಾಲನೆ

ಶ್ರೀರಂಗಪಟ್ಟಣ, ಅ.26– ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಡಾ.ಎಸ್.ಆರ್.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ಬೆಂಗಳೂರು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ "ವಾಕ್ ಮತ್ತು ಶ್ರವಣ ಮೊಬೈಲ್ ಕ್ಲಿನಿಕ್" ಮೂಲಕ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ನಡೆಯಿತು.

ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮನುಷ್ಯನಿಗೆ ಆರೋಗ್ಯ ಅತ್ಯವಶ್ಯಕ. ಹೀಗಾಗಿ ಸಾರ್ವಜನಿಕರು ಆಗಾಗ್ಗೆ ತಪಾಸಣೆಗೆ ಒಳಗಾಗಬೇಕು ಎಂದು ಸಲಹೆ ನೀಡಿದ ಅವರು, ಶ್ರವಣದೋಷವುಳ್ಳವರಿಗೆ ಉಚಿತವಾಗಿ ಯಂತ್ರಗಳನ್ನು ವಿತರಿಸಲಾಗುತ್ತಿದ್ದು, ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆಯಬೇಕು ಎಂದರು. ಇದೇ ವೇಳೆ 180ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು.

ಈ ಸಂದರ್ಭ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಸೋಮಶೇಖರ್, ತಾಲೂಕು ಆರೋಗ್ಯಾಧಿಕಾರಿ ಡಾ.ಎನ್.ಕೆ.ವೆಂಕಟೇಶ್, ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ಪಿ.ಮಾರುತಿ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ವೈದ್ಯರು, ಸಿಬ್ಬಂದಿ, ಎನ್‌ಪಿಪಿಸಿಡಿ ತಂಡದ ಲೋಕೇಶ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಆರ್‌ಬಿಎಸ್‌ಕೆ ತಂಡದ ವೈದ್ಯರು ಹಾಗೂ ಸಿಬ್ಬಂದಿ, ಆರೋಗ್ಯ ನಿರೀಕ್ಷಣಾಧಿಕಾರಿ ಚಂದನ್ ಇತರರಿದ್ದರು.



ಆನಂದಮೂರ್ತಿ ನಿಧನ

ಭಾರತೀನಗರ, ಅ.26– ಇಲ್ಲಿನ ಕಾಡುಕೊತ್ತನಹಳ್ಳಿ ಗ್ರಾಮದ ನಿವಾಸಿ ನಿವೃತ್ತ ಉಪ ತಹಸೀಲ್ದಾರ್ ಕೆ.ಆನಂದಮೂರ್ತಿ(70) ಗುರುವಾರ ನಿಧನರಾದರು. ಮೃತರು ಕೆಇಬಿ ನೌಕರ ಸುರೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಳೇಗೌಡ



ಕಿಕ್ಕೇರಿ, ಅ.26– ಪಟ್ಟಣದ ಚನ್ನನಕೊಪ್ಪಲು ಬಡಾವಣೆ ನಿವಾಸಿ ಎಂ.ಕೆ.ಕಾಳೇಗೌಡ(70) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಮಾದಿಹಳ್ಳಿಯಲ್ಲಿ ಶುಕ್ರವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರಲ್ಲಿ ಹುಲಿ ಉಗುರು ಡಾಲರ್ ಧರಿಸಿದ್ದ ಇಬ್ಬರು ಅರ್ಚಕರ ಬಂಧನ





ಚಿಕ್ಕಮಗಳೂರು, ಅ.26– ಹುಲಿ ಉಗುರು ಬೇಟೆಯನ್ನು ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಇತರ ಭಾಗಗಳಲ್ಲಿ ಅರಣ್ಯಾಧಿಕಾರಿಗಳು ಮುಂದು ವರಿಸಿದ್ದಾರೆ. ನಿನ್ನೆ ಧಾರ್ಮಿಕ ಗುರು ವಿನಯ್ ಗುರೂಜಿಯನ್ನು ಚಿಕ್ಕಮಗ ಳೂರಿನಲ್ಲಿ ವಿಚಾರಣೆ ನಡೆಸಿದ ಅಧಿಕಾರಿಗಳು ಇಂದು ಬೆಳಗ್ಗೆ ಹುಲಿ ಉಗುರಿನ ಡಾಲರ್ ಹಾಕಿಕೊಂಡಿದ್ದ ಇಬ್ಬರು ಅರ್ಚಕರನ್ನು ಬಂಧಿಸಿದ್ದಾರೆ. ಚಿಕ್ಕಮಗಳೂರಿನ ಖಾಂಡ್ಯ ಮಾರ್ಕಾಂಡೇಶ್ವರ ದೇವಾಲಯದ ಇಬ್ಬರು ಅರ್ಚಕರನ್ನು ಬಾಳೆಹೊನ್ನೂರು ಅರಣ್ಯ ವಲಯದ ಅಧಿಕಾರಿಗಳು ಬಂಧಿಸಿದ್ದಾರೆ. ಬಂಧಿತ ಅರ್ಚಕರನ್ನು ಕೃಷ್ಣಾನಂದ ಹೊಳ್ಳ, ನಾಗೇಂದ್ರ ಜೋಯಿಸ ಎಂದು ಗುರುತಿಸಲಾಗಿದೆ. ಬಂಧಿತರಿಂದ ಒಟ್ಟು ಮೂರು ಹುಲಿ ಉಗುರನ್ನು ವಶಕ್ಕೆ ಪಡೆಯಲಾಗಿದೆ.

ಅರಣ್ಯ ಇಲಾಖೆಯ ಸಿಬ್ಬಂದಿ ಇಬ್ಬರು ಅರ್ಚಕರನ್ನು ವಿಚಾರಣೆ ನಡೆಸುತ್ತಿದ್ದಾರೆ. ಇಬ್ಬರು ಅರ್ಚಕರ ವಿರುದ್ಧ ಬಾಳೆಹೊನ್ನೂರು ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ವಿದ್ಯುತ್ ಕ್ಷಾಮ ಭೀತಿ

ಹಗಲು–ರಾತ್ರಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ಬೆಳೆ ಮಾದರಿ ಮತ್ತು ವಿದ್ಯುತ್ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಕಬ್ಬು ಮತ್ತು ಭತ್ತ ಬೆಳೆಯುವ ಭಾಗಗಳಲ್ಲಿ 7 ಗಂಟೆಗಳ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ವಿದ್ಯುತ್ ಸರಬರಾಜಿನ ಮೇಲ್ವಿಚಾರಣೆಗೆ ಮುಖ್ಯ ಎಂಜಿನಿಯರ್ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಲಾಗಿದೆ. ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು ರಾಜ್ಯದ ಲೋಡ್ ಡಿಸ್ಪ್ಯಾಚ್ ಸೆಂಟರ್ (ಎಸ್‌ಎಲ್‌ಡಿಸಿ) ಪರಿಸ್ಥಿತಿ ಮೇಲೂ ನಿಗಾ ಇರಿಸಿದ್ದಾರೆ ಎಂದು ಇಂಧನ ಸಚಿವರು ಹೇಳಿದರು. ಈ ವರ್ಷ ಮುಂಗಾರು ಕೈ ಕೊಟ್ಟಿರುವುದರಿಂದ ಗೃಹ ಬಳಕೆ ಮತ್ತು ನೀರಾವರಿ ಪಂಪ್ ಸೆಟ್‌ಗಳಲ್ಲಿ ವಿದ್ಯುತ್ ಬಳಕೆ ಅಂದಾಜು ಶೇ. 45ರಷ್ಟು ಹೆಚ್ಚಳವಾಗಿದೆ. ವಿದ್ಯುತ್ ಬಳಕೆಯ ಹೆಚ್ಚಳದಲ್ಲಿ ನೀರಾವರಿ ಪಂಪ್ ಸೆಟ್‌ಗಳದ್ದು ಸಿಂಹಪಾಲು. ಉಷ್ಣ ವಿದ್ಯುತ್ ಸ್ಥಾವರಗಳಿಂದ ವಿದ್ಯುತ್ ಉತ್ಪಾದನೆಯ ಕೊರತೆ (ಮಳೆ ಕೊರತೆ), ಸೌರ ವಿದ್ಯುತ್ ಮತ್ತು ಪವನ ಶಕ್ತಿ (ಪ್ರತಿಕೂಲ ಹವಾಮಾನ ಪರಿಸ್ಥಿತಿ) ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು 300 ಮಿಲಿಯನ್ ಯೂನಿಟ್‌ನಷ್ಟು ಕುಸಿತ ಕಂಡಿದೆ. ಪ್ರತಿದಿನ, 270–280 ಮಿ.ಯೂ. ವಿದ್ಯುತ್ ಬೇಡಿಕೆಯಿದ್ದರೂ, ನಮ್ಮ ಉತ್ಪಾದನಾ ಸಾಮರ್ಥ್ಯ 230–240 ಮಿ.ಯೂ.ನಷ್ಟಿದೆ. ಹಾಗಾಗಿ ದಿನಕ್ಕೆ 30–40 ಮಿ.ಯೂ. ವಿದ್ಯುತ್ ಕೊರತೆ ಎದುರಿಸುತ್ತಿದ್ದೇವೆ. ಆದರೂ ನಮ್ಮ ಸರ್ಕಾರ ವಿದ್ಯುತ್ ಪೂರೈಕೆಗೆ ಸಾಧ್ಯವಿರುವ ಎಲ್ಲ ಕ್ರಮ ಕೈಗೊಂಡು ಗೃಹ ಬಳಕೆದಾರರು, ರೈತರು ಮತ್ತು ಕೈಗಾರಿಕೋದ್ಯಮಿಗಳ ಹಿತಾಸಕ್ತಿ ಕಾಯುತ್ತಿದೆ ಎಂದರು. ಸಾಮಾನ್ಯವಾಗಿ ಮಳೆಗಾಲದಲ್ಲಿ ವಿದ್ಯುತ್ ಬೇಡಿಕೆ ಕಡಿಮೆ ಇರುವುದರಿಂದ ಈ ಅವಧಿಯಲ್ಲಿ ಕೆಪಿಸಿಎಲ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ ವಾರ್ಷಿಕ ನಿರ್ವಹಣೆ ಕಾರ್ಯ ನಡೆಯುತ್ತದೆ. ಹಾಗಾಗಿ ಉತ್ಪಾದನೆ ಕಡಮೆಯಾಗಿತ್ತು. ಶೀಘ್ರದಲ್ಲೇ ಉಷ್ಣ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆ ಆರಂಭವಾಗಲಿದೆ. ಕೇಂದ್ರ ಗ್ರಿಡ್‌ನಿಂದ ವಿದ್ಯುತ್ ಖರೀದಿಸುವ ಜತೆಗೆ ಪಂಜಾಬ್, ಉತ್ತರ ಪ್ರದೇಶದಿಂದಲೂ ಪರಸ್ಪರ ವಿದ್ಯುತ್ ಕೊಟ್ಟು–ತೆಗೆದುಕೊಳ್ಳುವ ವ್ಯವಸ್ಥೆ ಆಗಲಿದೆ ಎಂದು ಮಾಹಿತಿ ನೀಡಿದರು. ಕಲ್ಲಿದ್ದಲು ಸಿಗುವ ಸ್ಥಳಗಳಲ್ಲಿ ಮಳೆಯಾಗಿ ಅದರ ಗುಣಮಟ್ಟ ತಗ್ಗಿದೆ. ಇಂಥ ಕಲ್ಲಿದ್ದಲ್ಲನ್ನು ಬಳಸುವುದರಿಂದ ಶಾಖೋತ್ಪನ್ನ ಯಂತ್ರಗಳು ದುರಸ್ತಿಗೆ ಬರುತ್ತಿವೆ. ಹೀಗಾಗದಂತೆ ಎಚ್ಚರ ವಹಿಸಿ, ಕಲ್ಲಿದ್ದಲು ಆಮದು ಮಾಡಿಕೊಂಡು, ಮಿಶ್ರಣ ಮಾಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಸಿಕ್ಕಿದ್ದು ಆನೆಯ ದವಡೆ ಹಲ್ಲು!

2 ಕೆಜಿ ತೂಕವಿದ್ದು, 17 ಸೆ.ಮೀ ಉದ್ದ, 9 ಸೆ.ಮೀ ಅಗಲವಿದೆ. ಇದು ಮಧ್ಯವಯಸ್ಕ ಆನೆಯ ದವಡೆ ಹಲ್ಲು ಎಂದು ತಿಳಿದು ಬಂದಿದೆ. ವಿಚಾರಣೆ ವೇಳೆ ಬಂಧಿತ ವ್ಯಕ್ತಿ ಹಲವು ವರ್ಷದ ಹಿಂದೆ ಹೆಚ್.ಡಿ. ಕೋಟೆಯಲ್ಲಿ ವ್ಯಕ್ತಿಯೊಬ್ಬರಿಂದ ಈ ಹಲ್ಲು ಪಡೆದಿದ್ದಾಗಿ ಹೇಳಿಕೆ ನೀಡಿದ್ದಾರೆ. ಆನೆ ದವಡೆ ಹಲ್ಲು ಮನೆಯಲ್ಲಿಟ್ಟುಕೊಂಡರೆ ಒಳಿತಾಗುತ್ತದೆ ಎಂಬ ನಂಬಿಕೆ ಹಲವರಲ್ಲಿದೆ. ಅಲ್ಲದೆ, ಮೈಮೇಲಾಗುವ ಮಚ್ಚೆಗೆ ಔಷಧಿಯಾಗಿ ಬಳಸುತ್ತಾರೆ ಎಂದು ಹೇಳಲಾಗಿದೆ. ಇದೀಗ ಅಕ್ರಮವಾಗಿ ಮನೆಯಲ್ಲಿಟ್ಟುಕೊಂಡಿದ್ದ ಆನೆ ದವಡೆ ಹಲ್ಲನ್ನು ವಶಕ್ಕೆ ಪಡೆದು, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕರಣ ದಾಖಲಿಸಿಕೊಂಡು, ಆತನನ್ನು ಬಂಧಿಸಿದ್ದಾರೆ.

ಡಿಸಿಎಫ್ ಡಾ.ಕೆ.ಎನ್.ಬಸವರಾಜು ಮಾರ್ಗದರ್ಶನದಲ್ಲಿ ಎಸಿಎಫ್ ಎನ್.ಲಕ್ಷ್ಮೀಕಾಂತ್ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಆರ್‌ಎಫ್‌ಓ ಕೆ.ಸುರೇಂದ್ರ, ಧನ್ಯಶ್ರೀ, ಡಿಆರ್‌ಎಫ್ ಮೋಹನ್, ಚಂದ್ರಶೇಖರ್, ಮೋಹನ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಸಾಂಪ್ರದಾಯಿಕ ಪೂಜೆ ನೆರವೇರಿಸಿ, ಬೀಳ್ಕೊಟ್ಟ ಜಿಲ್ಲಾಡಳಿತ



ಒಂದನೇ ಪುಟದಿಂದ

ಅಪಾರ ಪ್ರಶಂಸೆಗೆ ಪಾತ್ರವಾಗಿದ್ದ ಗಜಪಡೆ, ಬುಧವಾರ ವಿಶ್ರಾಂತಿ ಪಡೆದು, ಗುರುವಾರ ತಮ್ಮ ತಮ್ಮ ಶಿಬಿರಗಳಿಗೆ ಮರಳಿದವು.

ಸಾಂಪ್ರದಾಯಿಕ ಪೂಜೆ: ಗಜಪಡೆಗೆ ಅರಮನೆ ಮಂಡಳಿ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಯಿತು. ಅರಮನೆ ಆವರಣದ ತ್ರಿನೇಶ್ವರ ದೇವಾಲಯದ ಪಕ್ಕ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಅವರಿಂದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಎಲ್ಲಾ 14 ಆನೆಗಳನ್ನು ಸಾಲಾಗಿ ನಿಲ್ಲಿಸಿ, ಪೂಜೆ ಸಲ್ಲಿಸಲಾಯಿತು. ಗಣಪತಿ ಪೂಜೆ ನೆರವೇರಿಸಿದ ನಂತರ ಎಲ್ಲಾ ಆನೆಗಳಿಗೂ ಅಧಿಕಾರಿಗಳಿಂದ ಮಂಗಳಾರತಿ ನಂತರ ಪಂಚಫಲ, ಬೆಲ್ಲ, ಕಬ್ಬು ನೀಡಿ ಬೀಳ್ಕೊಡಲಾಯಿತು.

ಮಾವುತರು, ಕಾವಾಡಿಗಳಿಗೆ ಸನ್ಮಾನ: ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಆನೆಗಳ ಮಾವುತರು, ಕಾವಾಡಿಗಳಿಗೆ ಅರಮನೆ ಮಂಡಳಿ ವತಿಯಿಂದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸ್ಮರಣ ಫಲಕ ನೀಡಿ, ಸನ್ಮಾನಿಸಿದರು. ಅಲ್ಲದೆ, ಸಂಪ್ರದಾಯದಂತೆ ಮಾವುತರು, ಕಾವಾಡಿಗಳು, ವಿಶೇಷ ಮಾವುತರು, ಆಹಾರ ತಯಾರಿಕಾ ಸಿಬ್ಬಂದಿ, ಪಾಲಕರು, ಸಹಾಯಕರು ಸೇರಿದಂತೆ 55 ಮಂದಿಗೆ ತಲಾ 15 ಸಾವಿರ ರೂ. ಗೌರವ ಧನ ನೀಡಿ ಗೌರವಿಸಲಾಯಿತು.

ಜನಜಂಗುಳಿ: ಮರಳಿ ಕಾಡಿನತ್ತ ಪ್ರಯಾಣ ಬೆಳೆಸಲು ಸಿದ್ಧವಾಗಿದ್ದ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಸಾಕಷ್ಟು ಮಂದಿ ಸೇರಿದ್ದರು. ಅವರಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರೂ ಇದ್ದರು. ಪೂಜೆ ವೇಳೆಗೆ ಆನೆ ಬಿಡಾರತ್ತ ಜಮಾಯಿಸಿದ ಪ್ರವಾಸಿಗರು, ಅವುಗಳ ಮುಂದೆ ನಿಂತು ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು. ಅಲ್ಲದೆ, ಲಾರಿಯೇರಿದ ಗಜಪಡೆಯತ್ತ ಕೈ ಬೀಸಿ, ಆತ್ಮೀಯವಾಗಿ ಬೀಳ್ಕೊಟ್ಟರು.

ಮಿಂದೆದ್ದ ಗಜಪಡೆ: ಸಾಂಪ್ರದಾಯಿಕ ಪೂಜೆ ನೆರವೇರಿದ ಬಳಿಕ ಎಲ್ಲಾ ಆನೆಗಳಿಗೂ ಅರಮನೆ ಆವರಣದಲ್ಲಿ ಸ್ನಾನ ಮಾಡಿಸಲಾಯಿತು. ಆನೆಗಳು ಮೈಮೇಲೆ ನೀರೆರಚಿಕೊಳ್ಳುವ ದೃಶ್ಯವನ್ನು ಪ್ರವಾಸಿಗರು ಕಣ್ತುಂಬಿಕೊಂಡರು.

ಅಧಿಕಾರಿಗಳಿಂದ ನೀತಿ ಪಾಠ: ಮಾವುತರು, ಕಾವಾಡಿ ಗಳಿಗೆ ಸನ್ಮಾನಿಸಿದ ಬಳಿಕ ಡಿಸಿ ಡಾ.ಕೆ.ವಿ.ರಾಜೇಂದ್ರ ಹಾಗೂ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಶುಭ ಕೋರಿದರು. ನಂತರ ಎಲ್ಲಾ ಆನೆಗಳ ಮಾವುತರು, ಕಾವಾಡಿಗಳಿಗೆ ಅರಣ್ಯಾಧಿಕಾರಿಗಳು ತಿಳಿ ಹೇಳಿದರು.

ಸಿಎಫ್ ಡಾ.ಮಾಲತಿ ಪ್ರಿಯಾ ಮಾತನಾಡಿ, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅರಮನೆಗೆ ಬಂದು 55 ದಿನ ನಮ್ಮೊಂದಿಗೆ ಇದ್ದು, ಇಂದು ವಾಪಸ್ಸಾಗುತ್ತಿದ್ದೀರಿ. ಕ್ಯಾಂಪ್‌ಗಳು ತವರು ಮನೆ ಇದ್ದಂತೆ. ನೆಂಟರ ಮನೆಗೆ ಬಂದಂತೆ ನಿಮಗೆ ಭಾಸವಾಗಿದೆ. ಇಲ್ಲಿ ಆನೆಗಳೊಂದಿಗೆ ಉತ್ತಮ ಒಡನಾಟ ಹಾಗೂ ಆರೈಕೆ ಮಾಡಿದಂತೆ ಕ್ಯಾಂಪ್‌ಗಳಲ್ಲೂ ಆನೆಗಳನ್ನು ನೋಡಿಕೊಳ್ಳಿ, ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಸಲಹೆ ನೀಡಿದರು. ಡಿಸಿಎಫ್ ಸೌರಭ್ ಕುಮಾರ್ ಮಾತನಾಡಿ, ನಿಮ್ಮೆಲ್ಲರ ಸಹಕಾರ, ಶ್ರಮದಿಂದ ದಸರಾ ಮಹೋತ್ಸವ ಯಶಸ್ವಿಯಾಗಿ ನೆರವೇರಿದೆ. ದಸರಾ ದೊಡ್ಡ ಜಾತ್ರೆಯಿದ್ದಂತೆ ಸಣ್ಣಪುಟ್ಟ ಸಮಸ್ಯೆಗಳು ಸಹಜ. ಅದನ್ನು ಮನಸ್ಸಲ್ಲಿ ಇಟ್ಟುಕೊಳ್ಳದೆ, ಮುಂದಿನ ದಸರೆಗೆ ನಗು ನಗುತಾ ಬರುವಂತೆ ಕಿವಿಮಾತು ಹೇಳಿದರು.

ಡಿಸಿಎಫ್ ಡಾ.ಬಸವರಾಜು ಮಾತನಾಡಿ, ದಸರಾ ಮುಗಿದಿದ್ದರೂ ಗಜಪಡೆ ಹಾಗೂ ಮಾವುತ, ಕಾವಾಡಿಗಳ ಮುಖದಲ್ಲಿ ಇನ್ನೂ ಉತ್ಸಾಹ ಎದ್ದು ಕಾಣುತ್ತಿದೆ. ಇಂದು ಅಥವಾ ನಾಳೆಯೇ ಮತ್ತೊಮ್ಮೆ ಜಂಬೂ ಸವಾರಿಗೂ ನೀವು ಸಿದ್ಧರಿದ್ದಂತಿದೆ. ದಸರಾ ಮಹೋತ್ಸವದಲ್ಲಿ ಯಾವುದೇ ಕಹಿ ನೆನಪನ್ನು ತೆಗೆದುಕೊಂಡು ಹೋಗದೇ, ಸಿಹಿ ನೆನಪು ಮಾತ್ರ ತೆಗೆದುಕೊಂಡು ಹೋಗುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶು ವೈದ್ಯರಾದ ಡಾ.ಮುಜೀಬ್ ರೆಹಮಾನ್, ಡಾ.ಮಿರ್ಜಾ ವಾಸಿಂ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಲಾರಿ ಹತ್ತಿದವು: ಪ್ರತಿ ಬಾರಿಯೂ ಶಿಬಿರಕ್ಕೆ ತೆರಳುವಾಗ ಯಾವುದಾದರೊಂದು ಆನೆ ಲಾರಿ ಹತ್ತಲು ಹಿಂದೇಟು ಹಾಕುತ್ತಿತ್ತು. ಆದರೆ, ಈ ಬಾರಿ ಹೊಸ ಆನೆ ಸೇರಿದಂತೆ ಎಲ್ಲಾ ಆನೆಗಳು ಪ್ರತಿರೋಧ ವ್ಯಕ್ತಪಡಿಸದೇ ನಿರಾಯಾಸವಾಗಿ ಲಾರಿ ಹತ್ತಿದವು. ಇದರಿಂದ ಅರಣ್ಯಾಧಿಕಾರಿಗಳು ಹಾಗೂ ಮಾವುತರು ಸಮಾಧಾನಪಟ್ಟರು. ಫಿರಂಗಿ ತಾಲೀಮು ವೇಳೆ ಹೆದರಿದ್ದ ಹೊಸ ಆನೆ ರೋಹಿತ್, ಎರಡು ವರ್ಷದ ಹಿಂದೆ ಲಾರಿ ಹತ್ತಲು ನಿರಾಕರಿಸಿದ್ದ ಸುಗ್ರೀವ ಈ ಬಾರಿಯೂ ಲಾರಿ ಹತ್ತದೆ ಹಠ ಮಾಡಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಎಲ್ಲರ ನಿರೀಕ್ಷೆಯನ್ನು ಹೊಸ ಆನೆಗಳು ಹುಸಿಗೊಳಿಸಿ, ಸರಸರನೆ ಲಾರಿ ಹತ್ತಿದವು.

ಬೆಂಗಾವಲು ಪಡೆಯೊಂದಿಗೆ ಪಯಣ: 14 ಆನೆಗಳನ್ನು ಲಾರಿ ಮೇಲೆ ಹತ್ತಿಸಿದ ಮೇಲೆ ಜಯ ಮಾರ್ತಾಂಡ ದ್ವಾರದ ಬಳಿ ಲಾರಿಗಳನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಎಲ್ಲಾ ಆನೆಗಳ ಮಾವುತರು, ಕಾವಾಡಿಗಳು ಸಿದ್ಧರಾದ ನಂತರ ಪೊಲೀಸ್ ಬೆಂಗಾವಲು ಪಡೆಯೊಂದಿಗೆ ಆನೆ ಶಿಬಿರದತ್ತ ಪ್ರಯಾಣಿಸಿದವು. ಅಂಬಾರಿ ಆನೆ ಅಭಿಮನ್ಯು, ಮಹೇಂದ್ರ, ಭೀಮ ಮತ್ತಿಗೂಡು ಕ್ಯಾಂಪ್, ಅರ್ಜುನ ಬಳ್ಳೆ ಕ್ಯಾಂಪ್, ವಿಜಯ, ಧನಂಜಯ, ಗೋಪಿ, ಪ್ರಶಾಂತ, ಸುಗ್ರೀವ, ಕಂಜನ್ ದುಬಾರೆ ಕ್ಯಾಂಪ್‌ಗೆ, ಬಂಡೀಪುರದ ರಾಂಪುರ ಕ್ಯಾಂಪ್‌ಗೆ ರೋಹಿತ್, ಹಿರಣ್ಯ, ವರಲಕ್ಷ್ಮೀ ಭೀಮನ ಕಟ್ಟೆ ಹಾಗೂ ಲಕ್ಷ್ಮಿ ಆನೆ ದೊಡ್ಡಹರವೆ ಕ್ಯಾಂಪ್‌ಗೆ ತೆರಳಿತು. ಜಯ ಮಾರ್ತಾಂಡ ದ್ವಾರದಿಂದ ಹಾರ್ಡಿಂಗ್ ವೃತ್ತ ಬಳಸಿ ಬಿ.ಎನ್.ರಸ್ತೆಯ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮೂಲಕ ಆನೆಗಳು ಪ್ರಯಾಣ ಬೆಳೆಸಿದವು. ಈ ವೇಳೆ ರಸ್ತೆ ಬದಿಯಲ್ಲಿ ನಿಂತಿದ್ದ ನೂರಾರು ಮಂದಿ ಹಾಗೂ ದಾರಿಹೋಕರು ಆನೆಗಳಿಗೆ ನಮಿಸಿದರು.



ಈ ದಸರಾದಲ್ಲಿ ಮೈಸೂರು ಅರಮನೆಗೆ 1.17 ಲಕ್ಷ ಪ್ರವಾಸಿಗರ ಭೇಟಿ



ಮೈಸೂರು, ಅ.26(ಎಸ್‌ಬಿಡಿ)– ದಸರಾ ಮಹೋತ್ಸವದ ವೇಳೆ ವಿಶ್ವಪ್ರಸಿದ್ಧ ಅಂಬಾವಿಲಾಸ ಅರಮನೆಗೆ ಸುಮಾರು 1.17 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಶರನ್ನವರಾತ್ರಿ ಉತ್ಸವ ಆರಂಭದ ಹಿನ್ನೆಲೆಯಲ್ಲಿ ಅ.15 ಹಾಗೂ ಆಯುಧ ಪೂಜೆ ಹಿನ್ನೆಲೆಯಲ್ಲಿ ಅ.23ರಂದು ಮಧ್ಯಾಹ್ನ 2ರಿಂದ ಅರಮನೆ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. ವಿಜಯದಶಮಿಯಂದು ಪೂರ್ಣದಿನ ನಿರ್ಬಂಧವಿತ್ತು. ಒಟ್ಟಾರೆ ದಸರೆಯ 9 ದಿನ ಹೆಚ್ಚು ಸಂಖ್ಯೆಯ ಪ್ರವಾಸಿಗರು ಅರಮನೆ ವೀಕ್ಷಿಸಿದ್ದಾರೆ.

ಅ.15ರಂದು 12,513, ಅ.16ರಂದು 9,958, ಅ.17ರಂದು 10,376, ಅ.18ರಂದು 10,622, ಅ.19ರಂದು 10,699, ಅ.20ರಂದು 12,345, ಅ.21ರಂದು 17,863, ಅ.22ರಂದು 21,560, ಅ.23ರಂದು 10,813 ಸೇರಿ ಒಟ್ಟು 1,16,749 ಮಂದಿ ಅರಮನೆಗೆ ಭೇಟಿ ನೀಡಿದ್ದಾರೆ.

ಅಲ್ಲದೆ ದಸರಾ ಹೊಸ್ತಿಲಲ್ಲೂ ಪ್ರವಾಸಿಗರು ಹೆಚ್ಚಿದ್ದರು. ಸಿಂಹಾಸನ ಜೋಡಣೆ ಹಿನ್ನೆಲೆಯಲ್ಲಿ ಅ.9ರಂದು ಮಧ್ಯಾಹ್ನ 2ರಿಂದ 5,229 ಮಂದಿ ಭೇಟಿ ನೀಡಿದ್ದರು. ಅ.10ರಂದು 6,714, ಅ.11ರಂದು 5,960, ಅ.12ರಂದು 7,675, ಅ.13ರಂದು 9,253, ಅ.14ರಂದು 15,485 ಜನ ಅರಮನೆ ಒಳಾಂಗಣದ ಸೊಬಗು ಸವಿದಿದ್ದಾರೆ. ಅಲ್ಲದೆ ದಸರಾ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸಿದ ಅರಮನೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸಿದ್ದಾರೆ ಎಂದು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ತಿಳಿಸಿದ್ದಾರೆ.



ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ನಡೆಸಲಾದ 'ಅಲಂಕಾರಿಕ ತೋಟಗಳು' ಸ್ಪರ್ಧೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ನಿವಾಸ ಪ್ರಥಮ ಬಹುಮಾನ ಪಡೆದಿದ್ದು, ವಿವಿಯ ಕುಲಸಚಿವೆ ವಿ.ಆರ್.ಶೈಲಜಾ, ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಮುಜಾವರ್, ಮತ್ತಿತರ ಅಧಿಕಾರಿಗಳು ಟ್ರೋಫಿ ಪ್ರಶಸ್ತಿ ಪತ್ರ ಪ್ರದರ್ಶಿಸಿ ಸಂಭ್ರಮಿಸಿದರು.

ನಾಳೆ 'ಪುಕ್ಕಟೆ ಸಲಹೆ' ಹಾಸ್ಯ ನಾಟಕ ಪ್ರದರ್ಶನ



ಮೈಸೂರು, ಅ.26(ಜಿಎ)– ಬೆಂಗಳೂರಿನ ವಿಶ್ವಪಥ ಕಲಾ ಸಂಗಮದಿಂದ ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಅ.28ರಂದು ಸಂಜೆ 5 ಮತ್ತು 7ಕ್ಕೆ ಹೆಚ್. ದುಂಡಿರಾಜ್ ಅವರ 'ಪುಕ್ಕಟೆ ಸಲಹೆ' ಹಾಸ್ಯ ನಾಟಕದ ಎರಡು ಪ್ರದರ್ಶನ ಆಯೋಜಿಸಲಾಗಿದೆ ಎಂದು ಕಲಾ ಸಂಗಮದ ಸದಸ್ಯ ಕೃಷ್ಣಮೋಹನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ಅಶೋಕ್ ನಿರ್ದೇಶನದ ಈ ನಾಟಕವೂ ಸಂಪೂರ್ಣ ಹಾಸ್ಯಮಯವಾಗಿದ್ದು, ಈಗಾಗಲೇ 63 ಪ್ರದರ್ಶನಗಳನ್ನು ಕಂಡಿದೆ. 1.30 ಗಂಟೆ ಅವಧಿಯ ನಾಟಕ ಪ್ರೇಕ್ಷಕರಿಗೆ ಉತ್ತಮ ಮನರಂಜನೆ ನೀಡಲಿದೆ ಎಂದರು. ನಾಟಕಕ್ಕೆ 100 ರೂ. ಪ್ರವೇಶ ಶುಲ್ಕವಿದ್ದು, ಟಿಕೆಟ್ ಹಾಗೂ ಮಾಹಿತಿಗೆ ಮೊ.ಸಂ.99168 63637 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಕಲಾ ಸಂಗಮದ ಸದಸ್ಯ ಅಮೃತ್ ಕುಮಾರ್ ಉಪಸ್ಥಿತರಿದ್ದರು.

8 ಮಂದಿ ಭಾರತೀಯರಿಗೆ ಮರಣದಂಡನೆ ಶಿಕ್ಷೆ ವಿಧಿಸಿದ ಕತಾರ್ ಕೋರ್ಟ್

ಆಘಾತ ವ್ಯಕ್ತಪಡಿಸಿದ ವಿದೇಶಾಂಗ ಸಚಿವಾಲಯ

ನವದೆಹಲಿ, ಅ.26– ಕತಾರ್‌ನಲ್ಲಿ ಎಂಟು ಮಂದಿ ಭಾರತೀಯರಿಗೆ ಮರಣದಂಡನೆ ಶಿಕ್ಷೆ ಪ್ರಕಟಿಸಲಾಗಿದೆ. ಈ ಕುರಿತು ವಿದೇಶಾಂಗ ಸಚಿವಾಲಯವು ಆಘಾತ ವ್ಯಕ್ತಪಡಿಸಿದ್ದು, ಎಲ್ಲ ರೀತಿಯ ಕಾನೂನು ನೆರವು ಕಲ್ಪಿಸುವುದಾಗಿ ಹೇಳಿದೆ.

ಅಲ್ ದಹ್ರಾ ಕಂಪನಿಯ ಈ 8 ಮಂದಿ ಭಾರತೀಯ ಉದ್ಯೋಗಿಗಳು ಭಾಗಿಯಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ ಕತಾರ್‌ನ ನ್ಯಾಯಾಲಯ ಇಂದು ತೀರ್ಪು ಪ್ರಕಟಿಸಿದೆ ಎಂಬ ಪ್ರಾಥಮಿಕ ಮಾಹಿತಿ ನಮಗೆ ಲಭ್ಯವಾಗಿದೆ. ಮರಣದಂಡನೆ ತೀರ್ಪು ನಮಗೆ ಆಘಾತ ಉಂಟುಮಾಡಿದೆ. ತೀರ್ಪಿನ ವಿವರಕ್ಕೆ ಕಾಯುತ್ತಿದ್ದೇವೆ. ಕುಟುಂಬ ಸದಸ್ಯರು ಮತ್ತು ಕಾನೂನು ತಂಡದೊಂದಿಗೆ ಸಂಪರ್ಕದಲ್ಲಿದ್ದೇವೆ. ಎಲ್ಲ ಕಾನೂನು ಆಯ್ಕೆಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ವಿದೇಶಾಂಗ ಸಚಿವಾಲಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.


ಮುಂದುವರೆದು, ಈ ಪ್ರಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ನಿಕಟವಾಗಿ ಪರಿಶೀಲಿಸುತ್ತಿದ್ದೇವೆ. ಎಲ್ಲ ಕಾನ್ಸುಲರ್ ಮತ್ತು ಕಾನೂನು ನೆರವು ಒದಗಿಸುವುದನ್ನು ಮುಂದುವರಿಸುತ್ತೇವೆ. ಕತಾರ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತೇವೆ. ಪ್ರಕರಣವು ಗೌಪ್ಯ ಸ್ವರೂಪದ ಕಾರಣ, ಈ ಹಂತದಲ್ಲಿ ಯಾವುದೇ ಹೆಚ್ಚಿನ ಪ್ರತಿಕ್ರಿಯೆ ನೀಡುವುದು ಸೂಕ್ತವಲ್ಲ ಎಂದೂ ಸಚಿವಾಲಯ ಮಾಹಿತಿ ನೀಡಿದೆ.

ಅಮೆರಿಕಾದಲ್ಲಿ ಬಂದೂಕುಧಾರಿಗಳ ಅಟ್ಟಹಾಸ

ಸಾಮೂಹಿಕ ಗುಂಡಿನ ದಾಳಿಯಲ್ಲಿ 22 ಮಂದಿ ದುರ್ಮರಣ

ಮೈನೆ (ಅಮೆರಿಕ), ಅ.26– ವಿಶ್ವದ ದೊಡ್ಡಣ್ಣ ಅಮೆರಿಕಾದಲ್ಲಿ ಮತ್ತೆ ಬಂದೂಕುಧಾರಿಗಳು ಅಟ್ಟಹಾಸ ಮೆರೆದಿದ್ದಾರೆ. ಲೆವಿಸ್ಟನ್ ಪ್ರಾಂತ್ಯದ ಮೈನೆಯಲ್ಲಿ ಬುಧವಾರ ರಾತ್ರಿ ಬಂದೂಕುಧಾರಿಯೊಬ್ಬ ಸಾಮೂಹಿಕ ಗುಂಡಿನ ದಾಳಿ ನಡೆಸಿದ್ದು, ದಾಳಿಯಲ್ಲಿ 22 ಮಂದಿ ಸಾವನ್ನಪ್ಪಿದ್ದಾರೆಂದು ತಿಳಿದು ಬಂದಿದೆ. ದಾಳಿಯಲ್ಲಿ ಹಲವರ ಸ್ಥಿತಿ ಚಿಂತಾಜನಕವಾಗಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ವರದಿಗಳು ತಿಳಿಸಿವೆ.

ಈ ನಡುವೆ ಆಂಡ್ರೋಸ್ಕೋಗಿನ್ ಕೌಂಟಿ ಶೆರಿಫ್ ಕಚೇರಿಯು ದಾಳಿಯ ಶಂಕಿತನ ಎರಡು ಛಾಯಾಚಿತ್ರಗಳನ್ನು ಪೋಸ್ಟ್ ಮಾಡಿದೆ. ಲೆವಿಸ್ಟನ್ ನಗರದಲ್ಲಿ ಶೂಟರ್ ಸಕ್ರಿಯವಾಗಿದ್ದು, ಯಾರೂ ಮನೆಯಿಂದ ಹೊರಗಡೆ ಬರಬೇಡಿ. ಬಾಗಿಲು ಹಾಕಿಕೊಂಡು ಒಳಗಡೆ ಇರಿ. ಕಾನೂನು ಜಾರಿ ಅಧಿಕಾರಿಗಳನ್ನು ಬೆಂಬಲಿಸಿ. ನೀವು ಯಾವುದೇ ಅನುಮಾನಾಸ್ಪದ ಚಟುವಟಿಕೆ ಅಥವಾ ವ್ಯಕ್ತಿಗಳನ್ನು ನೋಡಿದರೆ ದಯವಿಟ್ಟು 911 ಗೆ ಕರೆ ಮಾಡಿ ಎಂದು ಪೋಸ್ಟ್ ಮಾಡಿದ್ದಾರೆ.



ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ನಡೆಸಲಾದ 'ಪ್ರದರ್ಶನ ಆವರಣದಲ್ಲಿ ಕುಂಡಗಳ ಜೋಡಣೆ ಹಾಗೂ ಅಲಂಕಾರಿಕ ತೋಟಗಳು' ಸ್ಪರ್ಧೆ(ಅ.15ರಿಂದ ಅ.24)ಯಲ್ಲಿ ಮೈಸೂರು ಅರಮನೆ ಮಂಡಳಿಗೆ ಮೊದಲ ಅತ್ಯುತ್ತಮ ಬಹುಮಾನ ದಕ್ಕಿದೆ. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ(ಮಧ್ಯದವರು) ಹಾಗೂ ಸಿಬ್ಬಂದಿ ಚಿತ್ರದಲ್ಲಿದ್ದಾರೆ.



ವಿಶ್ವಕಪ್ ಮಹಾಸಮರ 2023

ಶ್ರೀಲಂಕಾ ವಿರುದ್ಧವೂ ಸೋತ ಇಂಗ್ಲೆಂಡ್

ಹ್ಯಾಟ್ರಿಕ್ ಸೋಲಿನೊಂದಿಗೆ ಟೂರ್ನಿಯಿಂದ ಬಹುತೇಕ ಹೊರಬಿದ್ದ ಆಂಗ್ಲರು



ಬೆಂಗಳೂರು, ಅ.26– ಹಾಲಿ ಚಾಂಪಿಯನ್ ಇಂಗ್ಲೆಂಡ್ ಕಳಪೆ ಆಟ ಮುಂದುವರೆದಿದ್ದು, ಗುರುವಾರ ನಡೆದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧವೂ 8 ವಿಕೆಟ್‌ಗಳಿಂದ ಸೋಲು ಅನುಭವಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ. ಇನ್ನೊಂದೆಡೆ, ಸತತ ಮೂರನೇ ಸೋಲಿನೊಂದಿಗೆ ಇಂಗ್ಲೆಂಡ್ ವಿಶ್ವಕಪ್‌ನಿಂದ ಬಹುತೇಕ ಹೊರಬಿದ್ದಂತಾಗಿದೆ.

ಇಲ್ಲಿನ ಚಿನ್ನಸ್ವಾಮಿ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 33.2 ಓವರ್‌ಗಳಲ್ಲೇ 156 ರನ್‌ಗಳಿಗೆ ಸರ್ವಪತನ ಕಂಡಿತು. ತಂಡದ ಪರ ಜಾನಿ ಬೈರ್ಸ್ಟೋವ್ 30, ಡೇವಿಡ್ ಮಲಾನ್ 28, ಬೆನ್ ಸ್ಟೋಕ್ಸ್ 43, ಮೊಯಿನ್ ಅಲಿ 15, ಡೇವಿಡ್ ವಿಲ್ಲಿ 14 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಲಂಕಾ ಪರ ಲಹಿರು ಕುಮಾರ 3, ಕಸುನ್ ರಜಿತಾ, ಏಂಜೆಲೊ ಮ್ಯಾಥ್ಯೂಸ್ ತಲಾ 2, ಮಹೇಶ್ ತೀಕ್ಷಣ 1 ವಿಕೆಟ್ ಪಡೆದು ಮಿಂಚಿದರು.

157 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 25.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕುಸಲ್ ಪೆರೇರಾ 4ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಕುಸಾಲ್ ಮೆಂಡೀಸ್ 11 ರನ್ ಗಳಿಸಿ ನಿರ್ಗಮಿಸಿದರು. ನಂತರ ಜೊತೆಯಾದ ಪಾಥುಮ್ ನಿಸ್ಸಾಂಕ ಹಾಗೂ ಸದೀರ ಸಮರವಿಕ್ರಮ ಮುರಿಯದ 3ನೇ ವಿಕೆಟ್‌ಗೆ 122 ಎಸೆತಗಳಲ್ಲಿ 137 ರನ್‌ಗಳ ಜೊತೆಯಾಟ ನೀಡುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಪಾಥುಮ್ ನಿಸ್ಸಾಂಕ 83 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 77ರನ್ ಗಳಿಸಿದರೇ, ಸಮರ ವಿಕ್ರಮ 54 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಒಳಗೊಂಡ ಅಜೇಯ 65 ರನ್ ಗಳಿಸಿದರು. ಇಂಗ್ಲೆಂಡ್ ಪರ ಡೇವಿಡ್ ವಿಲ್ಲಿ 2 ವಿಕೆಟ್ ಪಡೆದರು. ಲಹಿರು ಕುಮಾರ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಇಂಡಿಯಾ	5	5	0	0	10
ದಕ್ಷಿಣ ಆಫ್ರಿಕಾ	5	4	1	0	8
ನ್ಯೂಜಿಲ್ಯಾಂಡ್	5	4	1	0	8
ಆಸ್ಟ್ರೇಲಿಯಾ	5	3	2	0	6
ಶ್ರೀಲಂಕಾ	5	2	3	0	4
ಪಾಕಿಸ್ತಾನ್	5	2	3	0	4
ಅಫ್ಘಾನಿಸ್ತಾನ್	5	2	3	0	4
ಬಾಂಗ್ಲಾದೇಶ	5	1	4	0	2
ಇಂಗ್ಲೆಂಡ್	5	1	4	0	2
ನೆದರ್‌ಲ್ಯಾಂಡ್ಸ್	5	1	4	0	2

ಇಂದಿನಿಂದ ಮೈಸೂರು ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಹಳ್ಳಿ ಮಾಕಮ್ಮ, ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವ



ಮೈಸೂರು, ಅ.26(ಎಸ್‌ಬಿಡಿ)– ಮೈಸೂರಿನ ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವ ಶುಕ್ರವಾರದಿಂದ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನೆರವೇರಲಿದೆ.

ಕುರುಬಾರಹಳ್ಳಿ ಸಿದ್ದಾರ್ಥನಗರದ ಸಿಐಟಿಬಿ ಚೌಲ್ಟ್ರಿಗೆ ಹೊಂದಿಕೊಂಡಂತಿರುವ ದೇವಾಲಯದಲ್ಲಿ ಶುಕ್ರವಾರ ರಾತ್ರಿ 7ಕ್ಕೆ ಘಟೆ ಪೂಜೆ, ಅ.28ರಂದು ಸಂಜೆ 4ಕ್ಕೆ ಮಜ್ಜಣ ಪೂಜೆ ಹಾಗೂ ಅ.29ರಂದು ಬೆಳಗ್ಗೆ 9ಕ್ಕೆ ವಾಹನೋತ್ಸವ ಪೂಜೆ ಜರುಗಲಿದೆ.

ಮೈಸೂರು ನಗರವಷ್ಟೇ ಅಲ್ಲದೆ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ತಿ.ನರಸೀಪುರ, ಗರ್ಗೇಶ್ವರಿ, ಮಂಟಿಕೊಪ್ಪಲು, ರಾವಂದೂರು, ಯಾಂದಳ್ಳಿ, ನಾಡನಹಳ್ಳಿ, ಮಲ್ಲರಾಜಯ್ಯನಹುಂಡಿ, ತಮ್ಮಡಳ್ಳಿ ಸೇರಿದಂತೆ 40 ಗ್ರಾಮಗಳ ಭಕ್ತರು ಈ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ, ದೇವಿಯನ್ನು ಆರಾಧಿಸುವುದು ವಿಶೇಷವಾಗಿದೆ.

ಜಾತ್ರಾ ಮಹೋತ್ಸವದ ಮೊದಲ ದಿನ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಎರಡನೇ ದಿನ ಶಾಸಕರಾದ ಚಾಮರಾಜ ಕ್ಷೇತ್ರದ ಕೆ.ಹರೀಶ್ ಗೌಡ, ಹನೂರು ಕ್ಷೇತ್ರದ ಮಂಜುನಾಥ್, ಕೃಷ್ಣರಾಜ ಕ್ಷೇತ್ರದ ಟಿ.ಎಸ್.ಶ್ರೀವತ್ಸ, ಕೆ.ಆರ್.ನಗರದ ಡಿ.ರವಿಶಂಕರ್, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಪಂ ಮಾಜಿ ಸದಸ್ಯ ಬಿ.ಎಂ.ರಾಮು, ಮಾಜಿ ಕಾರ್ಪೊರೇಟರ್ ಎನ್.ಧ್ರುವರಾಜ್, ಕಡೆಯ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕರಾದ ವಾಸು, ಡಾ.ಯತೀಂದ್ರ ಸಿದ್ದರಾಮಯ್ಯ, ಎಂ.ಕೆ.ಸೋಮಶೇಖರ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಕುರುಬಾರಹಳ್ಳಿ ಗ್ರಾಮಸ್ಥರು ಸೇರಿದಂತೆ ಎಲ್ಲಾ ಭಕ್ತರ ಸಹಭಾಗಿತ್ವದೊಂದಿಗೆ ವಾಡಿಕೆಯಂತೆ ವೈಭವದ ಜಾತ್ರಾ ಮಹೋತ್ಸವ ನಡೆಸಲಾಗುವುದು ಎಂದು ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅಪ್ಪುಗೌಡ, ಉಪಾಧ್ಯಕ್ಷರಾದ ಪರಮೇಶ್ ಹಾಗೂ ವೈ.ಎಂ.ಗೌಡ, ಪ್ರಧಾನ ಕಾರ್ಯದರ್ಶಿ ಕೆಜವರಾಜು, ಖಜಾಂಚಿ ಕ್ಯಾಂಟಿನ್ ನಾಗರಾಜು, ಸಂಘಟನಾ ಕಾರ್ಯದರ್ಶಿ ಕುರುಬಾರಹಳ್ಳಿ ಜೆಪ್ರಕಾಶ್, ಟ್ರಸ್ಟಿಗಳಾದ ನಾಗಣ್ಣ ಎಸ್.ಶಿವಣ್ಣ ಬೀರಪ್ಪ ಬಿ.ಶಿವಶಂಕರ್, ಕ್ಯಾಂಟಿನ್ ರವಿಕುಮಾರ್, ಟಿ.ಮಂಜುನಾಥ್, ಬಸವರಾಜು, ಎಂ.ದೇವರಾಜು, ಎಂ.ಶಿವಣ್ಣ, ಎಂ.ಚಂದ್ರು, ಶಿವಶಂಕರ್, ಎಸ್.ರಮೇಶ್, ಎಂ.ಜೆ.ರವಿಕುಮಾರ್, ಎ.ಧನಂಜಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಅ.26– ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ ವಲಯ ಕಚೇರಿ ವತಿಯಿಂದ ಮೈಸೂರು ವಲಯ ವ್ಯಾಪ್ತಿಯ ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ ಚಾಮರಾಜನಗರ ಜಿಲ್ಲೆ ಮತ್ತು ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ತಾಂಡಗಳಲ್ಲಿನ ನಿರುದ್ಯೋಗಿ ಬಂಜಾರ ಮಹಿಳೆಯರಿಗೆ ಸಾಂಪ್ರದಾಯಿಕ ಕಸೂತಿ ಮತ್ತು ಪೂರಕ ಹೊಲಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ತರಬೇತಿಯ ಅವಧಿಯು ಮೂರು ತಿಂಗಳಾಗಿರುತ್ತದೆ ತಂಡದ ತರಬೇತಿಯನ್ನು ಆಯಕಟ್ಟಿನ ತಾಂಡ ಅಥವಾ ತಾಲೂಕು ಮಟ್ಟದಲ್ಲಿ ನಡೆಸಲಾಗುವುದು.

ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನ 6 ಸಾವಿರದಂತೆ ಮೂರು ತಿಂಗಳಿಗೆ 18 ಸಾವಿರ ರೂ.ಗಳನ್ನು ತರಬೇತಿ ಪೂರ್ಣಗೊಂಡ ನಂತರ ನೇರವಾಗಿ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ನಿಗಮದಿಂದ ಪಾವತಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9900422003, 7996559086, 9113045460 ಅನ್ನು ಸಂಪರ್ಕಿಸಬಹುದು. ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ ಅಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೆಹಲಿ ನಾಯಕರೊಂದಿಗೆ ಸೇರಿ ರೈತರ ಭೂಮಿ ಕಬಳಿಸಲು ಡಿಕೆಶಿ ಷಡ್ಯಂತ್ರ

● ಮಾಜಿ ಸಿಎಂ ಕುಮಾರಸ್ವಾಮಿ ಗಂಭೀರ ಆರೋಪ ● ಈ ಬಗ್ಗೆ ಚರ್ಚೆ ನಡೆಸಲು ವಿಧಾನ ಮಂಡಲ ಅಧಿವೇಶನ ಕರೆಯಲು ಆಗ್ರಹ ● ಭೂಮಿ ಬೆಲೆ ಹೆಚ್ಚಿಸಿಕೊಳ್ಳಲು ಹೊಸದಾಗಿ 'ಬೆಂಗಳೂರು ದಕ್ಷಿಣ ಜಿಲ್ಲೆ' ರಚನೆಗೆ ಹುನ್ನಾರ ● ರಾಮನಗರ ಜಿಲ್ಲೆ ಹೆಸರು ಬದಲಾವಣೆಗೆ ಯತ್ನಿಸಿದರೆ ಅಮರಣಾಂತ ಉಪವಾಸದ ಎಚ್ಚರಿಕೆ



ಬೆಂಗಳೂರು, ಅ.26–(ಕೆಎಂಶಿ) ದೆಹಲಿ ಕಾಂಗ್ರೆಸ್ ನಾಯಕರ ಜತೆಗೂಡಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರ ಭೂಮಿ ಲಪಟಾಯಿಸಲು ಹೂಡಿರುವ ಷಡ್ಯಂತ್ರದ ಬಗ್ಗೆ ಚರ್ಚೆ ನಡೆಸಲು ವಿಧಾನ ಮಂಡಲದ ಅಧಿವೇಶನ ಕರೆಯಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರವನ್ನು ಇಂದಿಲ್ಲಿ ಆಗ್ರಹಿಸಿದ್ದಾರೆ.

ಇವರ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯಲ್ಲಿ ಕೆಲವು ದಾಖಲೆಗಳನ್ನು ಪ್ರದರ್ಶಿಸಿ ಇದು ಸ್ಯಾಂಪಲ್ ಅಷ್ಟೆ, ಅಧಿವೇಶನದಲ್ಲಿ ಭೂ ಅಕ್ರಮಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಮುಂದಿಟ್ಟು ಚರ್ಚೆ ಮಾಡುತ್ತೇನೆ ಎಂದು ಶಿವಕುಮಾರ್‌ಗೆ ಪಂಥಾಹ್ವಾನ ನೀಡಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಯೋಜನೆಯಲ್ಲಿ ಡಿ.ಕೆ.ಸಹೋದರರು ಶಾಮೀಲಾಗಿರುವ ಪ್ರಕರಣದ ತುಣುಕುಗಳನ್ನು ಪ್ರದರ್ಶಿಸಿ ಇದರ ಬ್ರಹ್ಮಾಂಡವನ್ನು ಬಿಚ್ಚಿಡಲು ಸಿದ್ಧ ಎಂದರು.

ಮುಖ್ಯಮಂತ್ರಿಯ ಹಾದಿ ಸುಗಮಗೊಳಿಸಿಕೊಳ್ಳಲು ಶಿವಕುಮಾರ್ ನಮ್ಮ ರೈತರ ಭೂಮಿಯನ್ನು ದೆಹಲಿ ನಾಯಕರಿಗೆ ಧಾರೆ ಎರೆದುಕೊಡುವುದರ ಜತೆಗೆ ಅದರ ಮೌಲ್ಯ ಹೆಚ್ಚಿಸಲು ಬೆಂಗಳೂರು ದಕ್ಷಿಣ ಜಿಲ್ಲೆ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಗುರುತರ ಆರೋಪ ಮಾಡಿದರು.

ತಾವರೆಕೆರೆಯಲ್ಲಿ 900 ಎಕರೆಯಷ್ಟು ಡಿಎಲ್‌ಎಫ್‌ನವರದು ಎನ್ನಲಾದ ಭೂಮಿ ಇದೆ. ಇದರಲ್ಲಿ 350 ಎಕರೆ ಯಾರದು ಎಂದು ಪ್ರಶ್ನಿಸಿದರು. ಆ ಭೂಮಿಗೆ ಅಪ್ಪ, ಅಮ್ಮ ಯಾರು ಇಲ್ಲ. ಅಂತಹ ಪಾಪದ ಭೂಮಿಗಳ ಬೆಲೆ ಹೆಚ್ಚಿಸಿಕೊಂಡು ದುಡ್ಡು ಮಾಡುವುದಕ್ಕೆ ಹೊಸ ಜಿಲ್ಲೆ ಮಾಡುತ್ತಿದ್ದಾರೆ.

ಕೆಐಎಡಿಬಿ ಅಧಿಕಾರಿಗಳು ಇಂದಿರಾನಗರದಲ್ಲಿರುವ ಡಿಎಲ್‌ಎಫ್ ಕಚೇರಿಯಲ್ಲಿ ಸಭೆ ಮಾಡುತ್ತಿದ್ದಾರೆ. ಅದರಲ್ಲೂ ಕೆಐಎಡಿಬಿಯ ಭೂ ವ್ಯವಹಾರವು ಈ ಕಚೇರಿಯಲ್ಲೇ ನಡೆಯುತ್ತಿದೆ. ಇಲ್ಲಿ ಯಾರು ಯಾರು ಕುಳಿತು ಸಭೆ ಮಾಡುತ್ತಾರೆ. ಯಾವ ನಿರ್ಣಯ ಕೈಗೊಳ್ಳುತ್ತಾರೆ ಎಂಬ ಮಾಹಿತಿ ಇದ್ದು, ಸೂಕ್ತ ವೇದಿಕೆಯಲ್ಲಿ ಬಹಿರಂಗಪಡಿಸಿ ದಾಖಲೆ ಬಿಡುಗಡೆ ಮಾಡುತ್ತೇನೆ ಎಂದು ಅವರು ಹೇಳಿದರು.

ಡಿಎಲ್‌ಎಫ್‌ನಲ್ಲಿ ಇರುವ ಬೇನಾಮಿ ಆಸ್ತಿಗಳ ಬಗ್ಗೆ ತನಿಖೆ ಆಗಲಿ. ಹೆಚ್ಚು ಟಿಆರ್‌ಪಿ ಇರುವ ಚಾನೆಲ್‌ನಲ್ಲಿ ಬಹಿರಂಗ ಚರ್ಚೆಗೆ ಬನ್ನಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನನಗೆ ಬಹಿರಂಗ ಸವಾಲು ಹಾಕಿದ್ದಾರೆ. ಸದನದಲ್ಲಿಯೇ ದಾಖಲೆ ಸಮೇತ ಚರ್ಚೆ ಮಾಡಲು ನಾನು ತಯಾರಿದ್ದೇನೆ ಎಂದು ಘೋಷಿಸಿದರು.

ಕನಕಪುರ ಸೇರಿ ರಾಮನಗರ ಜಿಲ್ಲೆಯ ಭೂಮಿಯನ್ನು ಲೂಟಿ ಮಾಡಲು 'ಬೆಂಗಳೂರು ದಕ್ಷಿಣ ಜಿಲ್ಲೆ' ಎನ್ನುತ್ತಿದ್ದಾರೆ. ಯಾರಿಗೆ ದಕ್ಷಿಣೆಯಾಗಿ ಕೊಡಲು ಬೆಂಗಳೂರು ದಕ್ಷಿಣ ಜಿಲ್ಲೆ? ಎಂದು ಅವರು ಪ್ರಶ್ನೆ ಮಾಡಿದ್ದಾರೆ. ನೈಸ್ ಜಮೀನನ್ನು ಅಕ್ರಮವಾಗಿ ಡಿ.ಕೆ.ಸುರೇಶ್ ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಹೊಸಕೆರೆ ಹಳ್ಳಿ ಬಳಿ 8 ಎಕರೆ ನೈಸ್‌ಗೆ ಅಂತ ನೋಟಿಫಿಕೇಶನ್ ಆಗಿತ್ತು. ಈ ಜಮೀನು ಡಿ.ಕೆ. ಸುರೇಶ್ ಖರೀದಿ ಮಾಡಿದ್ದಾರೆ. ಭಾಗ್ಯ ಲಕ್ಷ್ಮಿ, ಅಮಾಸೆಗೌಡ ಎಂಬುವವರ ಹೆಸರಲ್ಲಿ ಈ ಭೂಮಿ ಇತ್ತು ಇದನ್ನು ನೈಸ್ ಯೋಜನೆಗೆ ನೋಟಿಫೈ ಮಾಡಲಾಗಿತ್ತು. ಇದನ್ನು ಡಿ.ಕೆ.ಸುರೇಶ್ ಯಾವ ಆಧಾರದಲ್ಲಿ ಖರೀದಿ ಮಾಡುತ್ತಾರೆ ಎನ್ನುವುದು ನನ್ನ ಪ್ರಶ್ನೆ. ಅಧಿಕಾರಿಗಳು ಈ ಪ್ರಕರಣದಲ್ಲಿ ಶಾಮೀಲಾಗಿ ಡಿ.ಕೆ.ಸುರೇಶ್‌ಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಈ 8 ಎಕರೆ ಜಾಗವನ್ನು ಶೋಭಾ ಡೆವಲಪರ್‌ಗೆ ಕೊಡಲಾಗಿದೆ. ಅಲ್ಲಿ ಈಗಾಗಲೇ ಅಪಾರ್ಟ್‌ಮೆಂಟ್ ಬಂದಿದೆ. ಇದರಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಾತ್ರವೂ ಇದೆ ಎಂದು ಅವರು ನೇರ ಆರೋಪ ಮಾಡಿದರು.

ಬೆಂಗಳೂರು ಪಿತ್ರಾರ್ಜಿತ ಆಸ್ತಿಯಾ: ಇಡೀ ಕರ್ನಾಟಕದವರು ಬೆಂಗಳೂರಿನಲ್ಲಿ ಇದ್ದಾರೆ. ಬೆಂಗಳೂರು ನಗರವು ಕರ್ನಾಟಕದ ಒಂದು ಭಾಗ. ನಮ್ಮ ಬ್ರ್ಯಾಂಡ್ ಬೆಂಗಳೂರು ಎನ್ನುವವರಿಗೆ ಈ ನಗರವೇನು ಪಿತ್ರಾರ್ಜಿತ ಆಸ್ತಿಯೇ? ನಮ್ಮನ್ನು ವಲಸಿಗರು ಎನ್ನುವ ಇವರಿಗೆ ಅದು ಅರ್ಥ ಆಗಬೇಕು. ಡಿಕೆಶಿ ಬೆಂಗಳೂರಿನವರು ಅಲ್ಲ, ಅವರ ಮೂಲ ಬೆಂಗಳೂರು ಅಲ್ಲವೇ ಅಲ್ಲ ಎಂದು ಕಿಡಿಕಾರಿದರು.

ನಾನು ಬಿಡದಿಯಲ್ಲಿ ಖರೀದಿ ಮಾಡಿರುವ 44 ಎಕರೆ ಜಾಗ ರಾಜಕೀಯಕ್ಕೆ ಬರುವ ಮುನ್ನ ತೆಗೆದುಕೊಂಡಿದ್ದು. ಸಿನಿಮಾದಿಂದ ಬಂದ ಹಣದಲ್ಲಿ 4 ಸಾವಿರದಿಂದ 12 ಸಾವಿರ ಹಣ ಕೊಟ್ಟು ಖರೀದಿ ಮಾಡಿದ್ದ ಭೂಮಿ ಅದು. ಮಾಲ್ ಆರಂಭ ಮಾಡಿ ಬಿಸಿನೆಸ್ ಫ್ಯಾಶನ್ ಅಂತ ನಾನು ಹಣ ಸಂಪಾದನೆ ಮಾಡಿಲ್ಲ ಎಂದರು.

ಡಿ.ಕೆ.ಶಿವಕುಮಾರ್ ಅವರೇ 1,400 ಕೋಟಿ ರೂಪಾಯಿ ಹೇಗೆ ಸಂಪಾದನೆ ಮಾಡಿದ್ದೀರಿ ಎಂದು ಹೇಳಿ. ನನಗೆ ನೀವು ಹೇಳುವುದು ಬೇಡ, ಕನಕಪುರದ ಜನತೆಗಾದರೂ ಸತ್ಯ ಹೇಳಿ ಎಂದರು.

ಮೈಸೂರು ಅರಮನೆ ಬೇಲಿಯಲ್ಲಿ 'ಕರೆಂಟೇ' ಇಲ್ಲ

● ಈ ಬೇಲಿ ಹಾರಿ ಬಂದು ಜಂಬೂಸವಾರಿ ವೀಕ್ಷಿಸಿದ ಸಾಹಸಿಗರು!

● ಭಯೋತ್ಪಾದಕರ ಹಾವಳಿ ಎಚ್ಚರಿಕಾ ಕ್ರಮವಾಗಿ ಈ ಬೇಲಿ ಅಳವಡಿಸಲಾಗಿತ್ತು



ಮೈಸೂರು, ಅ.26(ಜಿಎ)–ಒಂದು ವೇಳೆ ಭಯೋತ್ಪಾದಕರು ಮೈಸೂರು ನಗರದಲ್ಲಿ ದುಷ್ಕೃತ್ಯವೆಸಗಲು ಮುಂದಾದರೆ ಅವರ ದಾಳಿಗೆ ತುತ್ತಾಗುವ ಪ್ರಸಿದ್ಧ ಸ್ಥಳಗಳಲ್ಲಿ ಮೈಸೂರು ಅರಮನೆ ಪ್ರಮುಖವಾದದ್ದು. ಹೀಗಾಗಿ ಅರಮನೆಗೆ ವ್ಯವಸ್ಥಿತವಾದ ಭದ್ರತೆಯನ್ನು ಒದಗಿಸಲೇಬೇಕಾಗುತ್ತದೆ. ವಿಪರ್ಯಾಸವೆಂದರೆ ಅರಮನೆಗೆ ವ್ಯವಸ್ಥೆ ಮಾಡಿರುವ ಭದ್ರತೆ ಜಮೀನಿನಲ್ಲಿ ನಿಲ್ಲಿಸುವ ಬೆದರು ಬೊಂಬೆಯಂತೆ ಇದೆಯೇ ಹೊರತು, ಅದರಿಂದ ಯಾವುದೇ ರೀತಿಯ ಪ್ರಯೋಜನವಿಲ್ಲ ಎಂಬುದು ಸ್ಪಷ್ಟವಾಗಿದೆ.

ಭಯೋತ್ಪಾದಕರು ನಿರಾಳವಾಗಿ ಅರಮನೆಯ ಕಾಂಪೌಂಡ್ ಹಾರಿ ಒಳಗೆ ಪ್ರವೇಶಿಸಬಹುದಾಗಿದೆ. ವಿಚಿತ್ರವೆಂದರೆ ಈ ಅರಮನೆ ಕಾಂಪೌಂಡ್‌ನ 2.5 ಕಿ.ಮೀ. ಉದ್ದಕ್ಕೆ ವಿದ್ಯುತ್ ಬೇಲಿ ಅಳವಡಿಸಲಾಗಿದೆ. ಹೀಗಿರುವಾಗ ಭಯೋತ್ಪಾದಕರು ಹೇಗೆ ಕಾಂಪೌಂಡ್ ಹಾರಿ ಒಳಪ್ರವೇಶಿಸಲು ಸಾಧ್ಯ ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಕರೆಂಟ್ ಬೇಲಿಯೇನೋ ಇದೆ. ಅದರಲ್ಲಿ ಕರೆಂಟ್ ಪಾಸಾಗುತ್ತಿಲ್ಲ.

2008ರ ನವೆಂಬರ್ 8ರಂದು ಭಯೋತ್ಪಾದಕರು ಮುಂಬೈ ಮೇಲೆ ದಾಳಿ ನಡೆಸಿದಾಗ ದೇಶಾದ್ಯಂತ ಪ್ರಮುಖ ಪ್ರವಾಸಿ ತಾಣಗಳನ್ನು ಭಯೋತ್ಪಾದಕರ ದಾಳಿಯಿಂದ ರಕ್ಷಿಸಲು ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲಾಗಿತ್ತು. ಅತ್ಯಾಧುನಿಕ ತಂತ್ರಜ್ಞಾನವನ್ನೂ ಕೂಡ ಬಳಸಿಕೊಳ್ಳಲಾಗಿತ್ತು. ಆಗ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಡಾ. ಪರಶಿವಮೂರ್ತಿಯವರು ಅರಮನೆಯ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿ ಶಿಫಾರಸು ಮಾಡಿದ ಹಿನ್ನೆಲೆಯಲ್ಲಿ ಅರಮನೆ ಮಂಡಳಿ ಉಪ ನಿರ್ದೇಶಕರಾಗಿದ್ದ ಅವರಾದಿ, ಅರಮನೆ ಸುತ್ತ ಕಾಂಪೌಂಡ್‌ಗೆ ಸೋಲಾರ್ ವಿದ್ಯುತ್ ಬೇಲಿ ಅಳವಡಿಸುವ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಮಧ್ಯೆ 2005ರ ನವೆಂಬರ್‌ನಲ್ಲಿ ಮೈಸೂರಿನಲ್ಲೇ ಇಬ್ಬರು ಉಗ್ರವಾದಿಗಳು ಸೆರೆ ಸಿಕ್ಕ ಬಳಿಕ ಅರಮನೆ ಭದ್ರತೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ. ಈ ಅರಮನೆಯು ಪಾರಂಪರಿಕ ಕಟ್ಟಡವಾಗಿರುವುದರಿಂದ ಸೋಲಾರ್ ವಿದ್ಯುತ್ ಬೇಲಿ ಅಳವಡಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಭಾರತ ಸರ್ಕಾರದ ಸ್ವಾಮ್ಯದ ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆ ವತಿಯಿಂದ 1.25 ಕೋಟಿ ರೂ. ವೆಚ್ಚದಲ್ಲಿ ಅರಮನೆ ಸುತ್ತ 2.5 ಕಿ.ಮೀ. ಉದ್ದದ ವಿದ್ಯುತ್ ಬೇಲಿ ಅಳವಡಿಸಲಾಗಿತ್ತು ಅದನ್ನು ತಲಾ 250 ಮೀಟರ್‌ನಂತೆ 8 ವಿಭಾಗಗಳಾಗಿ ವಿಂಗಡಿಸಿ 220 ವೋಲ್ಟೇಜ್‌ನ ವಿದ್ಯುತ್ ಹರಿಯುವಂತೆ ಮಾಡಲಾಗಿತ್ತು. ಯಾರಾದರೂ ಈ ವಿದ್ಯುತ್ ತಂತಿ ಮುಟ್ಟಿದರೆ ಶಾಕ್ ಹೊಡೆಯುವುದು ಮಾತ್ರವಲ್ಲದೆ, ಕಂಟ್ರೋಲ್ ರೂಂಗೆ ಅಲರಾಂ ಮೂಲಕ ಎಚ್ಚರಿಕಾ ಸಂದೇಶ ರವಾನೆಯಾಗುವಂತೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ವಿದ್ಯುತ್ ಬೇಲಿ ನಿರುಪಯುಕ್ತವಾಗಿದೆ. ಅದರಲ್ಲಿ ವಿದ್ಯುತ್ ಸಂಚಾರವೇ ಇರುವುದಿಲ್ಲ. ಇದಕ್ಕೆ ನಿದರ್ಶನ, ವಿಜಯದಶಮಿಯಂದು ಜಂಬೂಸವಾರಿ ವೀಕ್ಷಿಸಲು ಅನೇಕರು ಈ ವಿದ್ಯುತ್ ಬೇಲಿ ಹಾರಿ ಬಂದು ಮೆರವಣಿಗೆ ವೀಕ್ಷಿಸಿದ್ದು.

> ವಿದ್ಯುತ್ ಬೇಲಿ ಕೆಲವು ವೇಳೆ ಕಾರ್ಯ ನಿರ್ವಹಿಸಿದರೆ ಮತ್ತೆ ಕೆಲವೊಮ್ಮೆ ಕಾರ್ಯ ನಿರ್ವಹಿಸುವುದಿಲ್ಲ. ಅರಮನೆ ಹಸುಗಳನ್ನು ಮೇಯಲು ಬಿಡುವ ಸಂದರ್ಭದಲ್ಲಿ ವಿದ್ಯುತ್ ಬೇಲಿಯ ಸ್ವಿಚ್ ಆಫ್ ಮಾಡಲಾಗಿರುತ್ತದೆ.
> – ಟಿ.ಎಸ್.ಸುಬ್ರಮಣ್ಯ, ಅರಮನೆ ಮಂಡಳಿ ಉಪ ನಿರ್ದೇಶಕ

ಅರಮನೆಯ ಭದ್ರತೆಗಾಗಿ ಕೇವಲ ವಿದ್ಯುತ್ ಬೇಲಿ ಮಾತ್ರ ಅಳವಡಿಸಿರಲಿಲ್ಲ. ಅರಮನೆಯ ವಿವಿಧೆಡೆ 118 ಕ್ಯಾಮರಾಗಳಿವೆ. ಅದರಲ್ಲಿ 16 ಕ್ಲೋಸ್ ಸರ್ಕ್ಯೂಟ್ ಕ್ಯಾಮರಾಗಳು. ಲೋಹ ಪರಿಶೋಧಕಗಳನ್ನು ಕೂಡ ಅಳವಡಿಸಲಾಗಿದೆ. ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್, ನಾರ್ಕೋಟಿಕ್ ಅಂಡ್ ಎಕ್ಸ್‌ಪ್ಲೋಸೀವ್ ಡಿಟೆಕ್ಟರ್ ಅಳವಡಿಸಿದ್ದು, ಇದರ 100 ಮೀ. ಸುತ್ತಳತೆ ಒಳಗೆ ಯಾವುದೇ ಸ್ಫೋಟಕ ವಸ್ತು ಕಂಡುಬಂದರೂ ಈ ಸಾಧನ ಅದನ್ನು ಗ್ರಹಿಸುತ್ತದೆ. ಇಷ್ಟೂ ಭದ್ರತೆಯನ್ನು ಅರಮನೆಗೆ ಕಲ್ಪಿಸಿರುವುದು ಭಯೋತ್ಪಾದಕರ ದಾಳಿಯಿಂದ ರಕ್ಷಣೆ ಪಡೆಯುವ ಉದ್ದೇಶದಿಂದ. ವಿದ್ಯುತ್ ಬೇಲಿ ನಿರುಪಯುಕ್ತವಾಗಿರುವುದಂತೂ ಖಚಿತವಾಗಿದೆ. ಇನ್ನು ಭದ್ರತೆಗಾಗಿ ಅಳವಡಿಸಿರುವ ಇತರ ಅತ್ಯಾಧುನಿಕ ಉಪಕರಣಗಳ ಸ್ಥಿತಿ ಏನು ಎಂಬುದು ಗೊತ್ತಾಗಿಲ್ಲ ಒಟ್ಟಾರೆ ಅರಮನೆಗೆ ಬೆದರು ಬೊಂಬೆಯಂತೆ ನಿಷ್ಪ್ರಯೋಜಕವಾದ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮೈಸೂರಿನ ಬಗ್ಗೆ ಕಾಳಜಿವುಳ್ಳ ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ.

> ಹಾಲಿ ಇರುವ ವಿದ್ಯುತ್ ಬೇಲಿ ಹಳೆಯ ವಿಧಾನವಾಗಿದ್ದು, ಅದನ್ನು ಉನ್ನತೀಕರಿಸಬೇಕಾಗಿದೆ. ಈ ವಿಚಾರವನ್ನು ಅರಮನೆ ಮಂಡಳಿ ಸಭೆಯಲ್ಲಿ ಚರ್ಚಿಸಲಾಗಿದೆ. ಎಲೆಕ್ಟ್ರಿಕ್ ವಸ್ತುಗಳಾಗಿರುವುದರಿಂದ ಅದೂ ಕೆಟ್ಟಿದೆ. ಈಗಿರುವ ಬೇಲಿಯನ್ನು ಉಳಿಸಿಕೊಂಡು, ಅದನ್ನು ಹೊಸ ತಂತ್ರಜ್ಞಾನದೊಂದಿಗೆ ಉನ್ನತೀಕರಿಸುತ್ತೇನೆ.
> – ಹೆಚ್.ಸತೀಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಮನೆ ಮಂಡಳಿ, ವಿದ್ಯುಚ್ಛಕ್ತಿ ಉಪ ವಿಭಾಗ

ಮೈಸೂರು ಮಿತ್ರ

ತೋಡಿಗೆ ಬಿದ್ದ ಕಾರು: ಅಪಾಯದಿಂದ ಪಾರು



ಮಡಿಕೇರಿ, ಅ.26– ಚಾಲಕನ ನಿಯಂತ್ರಣ ತಪ್ಪಿದ ಮಾರುತಿ ಕಾರೊಂದು ರಸ್ತೆ ಬದಿಯ ತೋಡಿಗೆ ಉರುಳಿ ಬಿದ್ದು, ಕಾರಿನಲ್ಲಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಘಟನೆ ನಾಪೋಕ್ಲು–ಮಡಿಕೇರಿ ಮುಖ್ಯರಸ್ತೆಯ ಪಾಲೂರು ಗ್ರಾಮದಲ್ಲಿ ಗುರುವಾರ ಮುಂಜಾನೆ ನಡೆದಿದೆ.

ಮಡಿಕೇರಿ ಕಡೆಯಿಂದ ನಾಪೋಕ್ಲು ಮಾರ್ಗವಾಗಿ ಎಮ್ಮೆಮಾಡುವಿಗೆ ತೆರಳುತ್ತಿದ್ದ ಮೈಸೂರು ಮೂಲದ ನಾಲ್ಕು ಮಂದಿ ಪ್ರಯಾಣಿಸುತ್ತಿದ್ದ ಮಾರುತಿ ಆಲ್ಟೊ ಕಾರು ನಾಪೋಕ್ಲು–ಮಡಿಕೇರಿ ಮುಖ್ಯ ರಸ್ತೆಯ ಪಾಲೂರು ಗ್ರಾಮದ ವಿಷ್ಣುಮೂರ್ತಿ ದೇವಾಲಯದ ಮುಂಭಾಗದ ರಸ್ತೆಯ ಇಳಿಜಾರಿನಲ್ಲಿ ಗುರುವಾರ ಮುಂಜಾನೆ 3 ಗಂಟೆ ಸಮಯದಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿರುವ ಸುಮಾರು 20 ಅಡಿ ಆಳದ ಗದ್ದೆಯ ತೋಡಿಗೆ ಉರುಳಿ ಬಿದ್ದಿದೆ. ಅಪಘಾತದಿಂದ ಕಾರು ಸಂಪೂರ್ಣ ಜಖಂಗೊಂಡಿದ್ದು, ಕಾರಿನಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತವಾದ ಕಾರನ್ನು ಕೊಟ್ಟಮುಡಿ ಗ್ರಾಮದ ಯುವಕರು ಟ್ರ್ಯಾಕ್ಟರ್ ಬಳಸಿ ಮೇಲೆತ್ತಲು ಸಹಕರಿಸಿದರು.

ಗುಂಡು ಹೊಡೆದುಕೊಂಡು ವ್ಯಕ್ತಿ ಆತ್ಮಹತ್ಯೆ

ಮಡಿಕೇರಿ, ಅ.26– ವ್ಯಕ್ತಿಯೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಿರುನಾಣಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಕಳಕಂಡ ಶಶಿ ಬೋಪಯ್ಯ (52) ಎಂಬುವರೇ ಆತ್ಮಹತ್ಯೆಗೆ ಶರಣಾದವರು. ಅ.24ರ ರಾತ್ರಿ ಕಳಕಂಡ ಶಶಿ ಬೋಪಯ್ಯ ಅವರು ಮನೆ ಬಿಟ್ಟು ಹೋಗಿದ್ದು ಅ.25ರಂದು ಶಶಿ ಬೋಪಯ್ಯ ಅವರಿಗಾಗಿ ಕುಟುಂಬಸ್ಥರು ಹುಡುಕಾಟ ನಡೆಸಿದ್ದರು. ಈ ಸಂದರ್ಭ ರಾತ್ರಿ ವೇಳೆ ಶಶಿ ಬೋಪಯ್ಯ ಅವರಿಗೆ ಸೇರಿದ ಹಳೇ ಮನೆಯಲ್ಲಿ ಅವರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಘಟನೆ ಕುರಿತು ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೀನು ಕೃಷಿ ಉತ್ತೇಜನಕ್ಕೆ ಹಲವು ಯೋಜನೆ

ಹಾರಂಗಿ ಮಹಶೀರ್ ಮೀನು ಮರಿಗಳ ಉತ್ಪಾದನಾ, ಪಾಲನಾ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಸಚಿವ ಮಂಕಾಳ ಎಸ್. ವೈದ್ಯ ಪ್ರಕಟ



ಕುಶಾಲನಗರ, ಅ.26– ರಾಜ್ಯದಲ್ಲಿ ಮೀನು ಕೃಷಿ ಉತ್ತೇಜನಕ್ಕೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದು ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಮಂಕಾಳ ಎಸ್.ವೈದ್ಯ ತಿಳಿಸಿದ್ದಾರೆ.

ತಾಲೂಕಿನ ಹಾರಂಗಿ ಮಹಶೀರ್ ಮೀನು ಮರಿಗಳ ಉತ್ಪಾದನಾ ಹಾಗೂ ಪಾಲನಾ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ರಾಜ್ಯದಲ್ಲಿ ಮೀನು ಕೃಷಿಗೆ ಹೆಚ್ಚಿನ ಬೇಡಿಕೆ ಇದ್ದು, ಮೀನು ಕೃಷಿ ಅಭಿವೃದ್ಧಿಪಡಿಸಿ ದೇಶ–ವಿದೇಶಕ್ಕೆ ಮೀನನ್ನು ಪೂರೈಕೆ ಮಾಡಲು ಚಿಂತನೆ ನಡೆಸಲಾಗಿದೆ ಎಂದರು. ಮೀನು ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೀನು ಕೃಷಿಕರಿಗೆ 5 ಲಕ್ಷದವರೆಗೆ ಸಾಲ ಸೌಲಭ್ಯ, ಮೀನುಗಾರ ಮಹಿಳೆಯರಿಗೆ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷದವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದ ಅವರು, ಮೀನು ಕೃಷಿಕರು, ಮೀನು ಮಾರಾಟಗಾರರು ಸೇರಿದಂತೆ ಎಲ್ಲರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಮೀನು ಕೃಷಿ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮೀನು ಮರಿ ಉತ್ಪಾದನೆ ಹೆಚ್ಚಿಸುವುದು, ಅಳಿವಿನಂಚಿನಲ್ಲಿರುವ ಮಹಶೀರ್ ಮೀನಿನ ಸಂರಕ್ಷಣೆಗಾಗಿ ಪಂಚವಾರ್ಷಿಕ ಯೋಜನೆಯಡಿ ಮಹಶೀರ್ ಮೀನು ಮರಿ ಉತ್ಪಾದನೆ, ಪಾಲನೆ ಮತ್ತು ನದಿ ಬಿತ್ತನೆ ಮೂಲಕ ಸಂರಕ್ಷಿಸಲು ಮುಂದಾಗಿದೆ ಎಂದು ಮಂಕಾಳ ಎಸ್. ವೈದ್ಯ ಹೇಳಿದರು.

ಹಾರಂಗಿ ಮಹಶೀರ್ ಮೀನು ಮರಿಗಳ ಉತ್ಪಾದನಾ ಮತ್ತು ಪಾಲನಾ ಕೇಂದ್ರದಲ್ಲಿ ಜಲಕೃಷಿಗೆ ಯೋಗ್ಯವಾದ ಕಾಟ್ಲಾ, ರೋಹ್, ಮೃಗಾಲ, ಸಾಮಾನ್ಯ ಗೆಂಡೆ ಮೀನುಗಳ ಸಂವರ್ಧನೆಯೊಂದಿಗೆ ಕೊಡಗಿನ ಮೀನು ಕೃಷಿಗೆ ಮೀನು ಮರಿಗಳನ್ನು ಪೂರೈಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ತಿಳಿಸಿದರು. ಹಾರಂಗಿಯ ಮಹಶೀರ್ ಮೀನು ಮರಿಗಳ ಉತ್ಪಾದನಾ ಮತ್ತು ಪಾಲನಾ ಕೇಂದ್ರದಲ್ಲಿ 'ಮತ್ಸ್ಯಾಲಯ' ಸ್ಥಾಪಿಸುವ ಬಗ್ಗೆ ಶಾಸಕರು ಕೋರಿದ್ದು, ಈ ಸಂಬಂಧ ಅಗತ್ಯ ಕ್ರಮವಹಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಮೀನು ಸಾಕಾಣಿಕೆದಾರರಿಗೆ ಉಚಿತವಾಗಿ ಮೀನು ಮರಿಗಳನ್ನು ನೀಡಲಾಗುತ್ತದೆ. ಮೀನುಗಾರರಿಗೆ,ಮೀನು ಮಾರಾಟಗಾರರಿಗೆ ಮತ್ಸ್ಯವಾಹಿನಿ ಯೋಜನೆಯಡಿ 300 ದ್ವಿಚಕ್ರ ವಾಹನಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಶಾಸಕ ಡಾ.ಮಂಥರ್‌ಗೌಡ ಅವರು, ಮಹಶೀರ್ ಮೀನು ಮರಿಗಳ ಉತ್ಪಾದನಾ ಮತ್ತು ಪಾಲನಾ ಕೇಂದ್ರದಲ್ಲಿ 'ಮತ್ಸ್ಯಾಲಯ' ಸ್ಥಾಪಿಸಬೇಕಿದೆ. ಈ ಕೇಂದ್ರದಲ್ಲಿ ಕೊಳಗಳ ಅಭಿವೃದ್ಧಿಗೆ ಮುಂದಾಗಬೇಕಿದೆ ಎಂದು ಸಚಿವರಲ್ಲಿ ಮನವಿ ಮಾಡಿದರು.

ಹಾರಂಗಿ ಜಲಾಶಯ ವೀಕ್ಷಣೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಆ ನಿಟ್ಟಿನಲ್ಲಿ ಮತ್ಸ್ಯಾಲಯ ಸ್ಥಾಪಿಸುವುದರಿಂದ ಸಾರ್ವಜನಿಕರಿಗೆ ಮೀನು ಉತ್ಪಾದನೆ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯಲಿದೆ ಎಂದು ಶಾಸಕರು ತಿಳಿಸಿದರು. ಮೀನುಗಾರಿಕೆ ಇಲಾಖೆಯ ಹಾರಂಗಿ ವಿಭಾಗದ ಸಹಾಯಕ ನಿರ್ದೇಶಕ ಎಸ್.ಎಂ.ಸಚಿನ್ ಮಾಹಿತಿ ನೀಡಿ ಮಹಶೀರ್ ಒಂದು ಸಿಪ್ರಿನಿಡ್ (ಕಾರ್ಪ್ ಕುಟುಂಬಕ್ಕೆ) ಸೇರಿದ ಮೀನಾಗಿದೆ. ಅದರ ಪಾರ್ಶ್ವದ ರೇಖೆಯ ಉದ್ದಕ್ಕೂ ದೊಡ್ಡಗಾತ್ರದ ಉರುಪೆಗಳಿಂದ ಕೂಡಿದ್ದು, ಎರಡು ಜೋಡಿ ಬಾರ್ಬೇಲ್(ಮೀಸೆ)ಗಳಿಂದ ಗುರುತಿಸಬಹುದು. ಮಹಶೀರ್ ಜಾತಿ ಮೀನುಗಳು ವಲಸೆ ಮೀನುಗಳಾಗಿದ್ದು, ಮಳೆಗಾಲದಲ್ಲಿ ಮೇಲ್ಮುಖವಾಗಿ ಚಲಿಸುತ್ತವೆ. ಇವು ಸ್ವಚ್ಛ, ವೇಗವಾಗಿ ಹರಿಯುವ ಹಾಗೂ ಆಮ್ಲಜನಕಯುಕ್ತ ನೀರನ್ನು ಬಯಸುತ್ತವೆ ಎಂದರು.

ಈ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಆರ್.ಗಣೇಶ್, ಉಪ ನಿರ್ದೇಶಕರಾದ ಸಿ.ಎಸ್.ಸಚಿನ್, ಸಹಾಯಕ ನಿರ್ದೇಶಕ ಮಿಲನ ಭರತ್, ಸ್ನೇಹ, ಮೇಲ್ವಿಚಾರಕರಾದ ಬಿ.ಮಂಜು ಇತರರು ಇದ್ದರು. ಇದೇ ಸಂದರ್ಭ ಹಾರಂಗಿ ನದಿಗೆ ಎರಡು ಸಾವಿರ ಮಹಶೀರ್ ಮೀನು ಮರಿಗಳನ್ನು ಸಚಿವ ಮಂಕಾಳ ಎಸ್.ವೈದ್ಯ ಬಿಟ್ಟರು.

'ನನ್ನ ಮಣ್ಣು, ನನ್ನ ದೇಶ' ಮಾದರಿ ಮಣ್ಣಿನ ಬಿಂದಿಗೆ ಹಸ್ತಾಂತರ



ಮಡಿಕೇರಿ ಅ.26– ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 'ನನ್ನ ಮಣ್ಣು ನನ್ನ ದೇಶ' ಅಭಿಯಾನದ ಪ್ರಯುಕ್ತ ಕೊಡಗು ಜಿಲ್ಲೆಯ 5 ತಾಲೂಕುಗಳಿಂದ ಸಂಗ್ರಹಿಸಲಾದ ಮಾದರಿ ಮಣ್ಣಿನ ಬಿಂದಿಗೆಗಳನ್ನು ನವದೆಹಲಿಗೆ ತಲುಪಿಸುವ ಸಂಬಂಧ ಗುರುವಾರ ಜಿಲ್ಲಾಧಿಕಾರಿ ವೆಂಕಟ ರಾಜಾ ಅವರ ಸಮ್ಮುಖದಲ್ಲಿ ರಾಯಭಾರಿಗಳಿಗೆ ಹಸ್ತಾಂತರಿಸಲಾಯಿತು.

ಜಿಲ್ಲಾಡಳಿತ, ನೆಹರು ಯುವ ಕೇಂದ್ರ, ಜಿಪಂ, ಜಿಲ್ಲಾ ಅಂಚೆ ಕಚೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತಾಪಂ, ಜಿಲ್ಲಾ ಯುವ ಒಕ್ಕೂಟ, ತಾಲೂಕು ಯುವ ಒಕ್ಕೂಟ ಇವರ ವತಿಯಿಂದ ಆಯೋಜಿಸಲಾಗಿದ್ದ ಮೇರಾ ದೇಶ್ ಮೇರಾ ಮಟ್ಟಿ ಅಮೃತ್ ಕಳಸ ಯಾತ್ರೆಗೆ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜ ಅವರು ಚಾಲನೆ ನೀಡಿದರು.

ಜಿಲ್ಲಾಧಿಕಾರಿ ವೆಂಕಟರಾಜ ಮಾತನಾಡಿ, ಅಮೃತ ಕಳಸ ಯಾತ್ರೆಗೆ ಅಭಿನಂದನೆ ತಿಳಿಸಿದರು. ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವ ಪ್ರತಿಯೊಬ್ಬರಿಗೂ ಭದ್ರತೆ ನೀಡಬೇಕು. ಹಾಗೆಯೇ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು ಎಂದು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದರು. ರಾಯಭಾರಿಗಳಾಗಿ ದೆಹಲಿಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಸುರಕ್ಷತೆ ಕಾಪಾಡಿಕೊಳ್ಳಲು ಸಲಹೆ ಮಾಡಿದರು.

ಅಮೃತ ಕಳಸ ಯಾತ್ರೆಯು ವಿಭಿನ್ನತೆಯಲ್ಲಿ ಏಕತೆಯನ್ನು ಸಾರುವ ಸಂದೇಶದೊಂದಿಗೆ ಜಿಲ್ಲೆಯ ಐದು ತಾಲೂಕಿನ ಮಣ್ಣನ್ನು ಸಂಗ್ರಹಿಸಲಾಗಿತ್ತು. 5 ತಾಲೂಕಿನಿಂದ ವಿಶೇಷ ರಾಯಭಾರಿಗಳಾದ ಯಕ್ಷಿತ್ ಹಾಕತ್ತೂರು, ಮೋಹಿತ್ ಮಾಚಯ್ಯ, ಜೋಶಿಕ್, ಕೌಶಿಕ್ ಹಾಕತ್ತೂರು, ಸುಜಿತ್ ಹೆಬ್ಬಿಟ್ಟಗೇರಿ, ರಾಯಭಾರಿಗಳಾದ ಅಜಿತ್, ಪ್ರೀತಮ್, ಸುನಿಲ್, ಕೃತಿಕ್ ರಾಯಭಾರಿಗಳನ್ನು ಆಯ್ಕೆ ಮಾಡಿ ಅವರೊಂದಿಗೆ ಕಚೇರಿಯ ಸದಸ್ಯರನ್ನು ಒಟ್ಟುಗೂಡಿಸಿ ದೆಹಲಿಗೆ ಕಳುಹಿಸಿಕೊಡಲಾಯಿತು.

ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ. ಸುಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಅಂಚೆ ಇಲಾಖೆಯ ಹಿರಿಯ ಅಧಿಕಾರಿ ರವಿ, ಜಿಲ್ಲಾ ಯುವ ಒಕ್ಕೂಟ ಸಲಹೆಗಾರರು ಕಂದಾ ದೇವಯ್ಯ ಹಾಗೂ ಎಂ.ಬಿ.ಜೋಯಪ್ಪ, ತಾಲೂಕು ಯುವ ಒಕ್ಕೂಟದ ಅಧ್ಯಕ್ಷ ದಿಲೀಪ್ ಕುಮಾರ್, ನೆಹರು ಯುವ ಕೇಂದ್ರದ ಸಿಬ್ಬಂದಿಗಳಾದ ದೀಪ್ತಿ ರಂಜಿತ ಮತ್ತಿತರರು ಇದ್ದರು.

ಪೂರ್ವಜರ ಪರಿಶ್ರಮದಿಂದ ಸಂಸ್ಕಾರ ಉಳಿದಿದೆ

ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದಿಂದ ಆಯುಧಪೂಜೆ ಆಚರಣೆ



ವಿರಾಜಪೇಟೆ, ಅ.26– ಸಂಸ್ಕೃತಿ ಮತ್ತು ಪರಂಪರೆಗಳ ಆಚರಣೆಯಿಂದ ದೇಶ ಉಳಿಯಲು ಸಾಧ್ಯ. ಭಾರತ ಬಹು ಸಂಸ್ಕೃತಿಗಳ ದೇಶ. ಹಿಂದೂ ಧರ್ಮ ಅತ್ಯಂತ ಪುರಾತನವಾದದ್ದು. ಪೂರ್ವಜರ ಶ್ರಮದಿಂದ ಸಂಸ್ಕಾರ ಉಳಿದಿದೆ ಎಂದು ಬಿಜೆಪಿ ಜಿಲ್ಲಾ ಪ್ರಮುಖರಾದ ತೇಲಪಂಡ ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘ ವತಿಯಿಂದ ವಿರಾಜಪೇಟೆ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ 16ನೇ ವರ್ಷದ ಅದ್ದೂರಿ ಆಯುಧಪೂಜಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಆಯುಧ ಪೂಜೆ ಎಂಬುದು ಮಹಿಷಾಸುರನನ್ನು ಸಂಹಾರ ಮಾಡಿದ ದಿನ. ಹೋರಾಟದಲ್ಲಿ ಶ್ರೀ ದುರ್ಗೆ ಬಳಸಿದ ಆಯುಧಗಳನ್ನು ಪೂಜೆ ಮಾಡುವುದಾಗಿದೆ ಎಂದರು.

ಸರ್ಕಾರದ ಉಚಿತ ಬಸ್ ಪ್ರಯಾಣ ಕಾರ್ಯ ಉತ್ತಮವೆನಿಸಿದರೂ ಖಾಸಗಿ ಬಸ್ಸುಗಳ ನಿರ್ವಹಣೆಗೆ ಕಷ್ಟ ಎದುರಾಗಿದೆ. ಗ್ರಾಮೀಣ ಭಾಗದ ಜನರು ಖಾಸಗಿ ಬಸ್ಸುಗಳನ್ನು ಅವಲಂಭಿಸಿ ಬದುಕು ಕಂಡವರು ಇಂದು ಸಂಕಷ್ಟವನ್ನು ಎದುರಿಸುವಂತಾಗಿದೆ. ಸರ್ಕಾರ ಖಾಸಗಿ ಬಸ್ ಮಾಲೀಕರ ಮತ್ತು ಕಾರ್ಮಿಕರ ಹಿತ ಕಾಪಾಡುವ ನಿಟ್ಟಿನಲ್ಲಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವಂತಾಗಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಹನೀಫ್ ಚೋಕಂಡಳ್ಳಿ ಅವರು ಮಾತನಾಡಿ, ಖಾಸಗಿ ಬಸ್ಸುಗಳು ಸಮಾಜಕ್ಕೆ ತನ್ನ ಸೇವೆಯನ್ನು ಒದಗಿಸುತ್ತಿದೆ. ಬಡ ಕಾರ್ಮಿಕರು ಖಾಸಗಿ ಬಸ್‌ನ್ನು ಅವಲಂಬಿಸಿದ್ದಾರೆ ಎಂದರು. ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ ಮಾತನಾಡಿ, ಹಿಂದೂ ಧರ್ಮದ ಆಚರಣೆಗಳು ಉಳಿದಲ್ಲಿ ಮಾತ್ರ ದೇಶ ಅಭಿವೃದ್ಧಿ ಕಾಣಲು ಸಾಧ್ಯ. ಎಂದೆಂದು ಸಂಸ್ಕೃತಿಯನ್ನು ಮರೆಯಬಾರದು. ಪೂರ್ವಜರ ಕಾಲದಿಂದಲೂ ಆಚರಿಸಿಕೊಂಡು ಬಂದಿರುವ ಸಂಸ್ಕೃತಿ ಆಚರಣೆಯನ್ನು ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸುವ ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳಿಗೆ ತಿಳಿಸಿ ಕೊಡುವಂತಾಗಬೇಕು ಎಂದರು. ಕೊಡಗು ಜಿಲ್ಲಾ ಸಹಕಾರ ಮಾರಾಟ ಮಹಾಮಂಡಳ ಅಧ್ಯಕ್ಷ ವಾಟೇರಿರ ಬೋಪಣ್ಣ ಮಾತನಾಡಿದರು.

ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ ಅಧ್ಯಕ್ಷ ಕುಂಬೆಯಂಡ ಸುರೇಶ್ ದೇವಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಮೊಹಮ್ಮದ್ ಸಾಹೀಲ್, ಕೆ.ಎ.ಸಂಕೇತ್ ಮತ್ತು ಶ್ರಾವ್ಯ ಹಾಗೂ ಪೌರಕಾರ್ಮಿಕ ಶಂಕರಮ್ಮ, ಮೆಕ್ಯಾನಿಕ್ ಪಿ.ಕೆ. ಶಶಿಧರನ್, ಹಿರಿಯ ಚಾಲಕ ನೆಲ್ಲಮಕ್ಕಡ ಪೂಣಚ್ಚ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಮಾರಂಭದಲ್ಲಿ ಕಾಫಿ ಬೆಳೆಗಾರರಾದ ಕೋಡಿರ ವಿವೇಕ್, ವಿನಾಯಕ ಟೂರ್ಸ್ ಅಂಡ್ ಟ್ರಾವೆಲ್ಸ್ ಮಾಲೀಕ ಬಿ.ವಿ. ಹೇಮಂತ್, ಉದ್ಯಮಿಗಳಾದ ಟಿ.ಸಿ.ಸುರೇಶ್, ಮಹಾಲಕ್ಷ್ಮೀ ಜುವೆಲರ್ಸ್ ಮಾಲೀಕ ರಾಹುಲ್, ಚಿಲಿಗೇರಿ ಬಸ್ ಮಾಲೀಕರಾದ ತೀತಿರ ದರ್ಶನ್, ಭಗವತಿ ಡೆಕೋರೇಟರ್ಸ್ ಮಾಲೀಕ ಬೋಪಣ್ಣ, ಬಸ್ ಕಾರ್ಮಿಕ ಸಂಘದ ಉಪಾಧ್ಯಕ್ಷ ಪಿ.ಎಂ. ಕಾವೇರಪ್ಪ ಮತ್ತಿತರರು ಉಪಸ್ಥಿತರಿದ್ದರು. ಬಸ್ ಕಾರ್ಮಿಕರ ಸಂಘದ ಕಾರ್ಯದರ್ಶಿ ಜೂಡಿವಾಜ್ ಸ್ವಾಗತಿಸಿದರು, ಮಾಜಿ ಅಧ್ಯಕ್ಷ ದಿನೇಶ್ ನಾಯರ್ ನಿರೂಪಿಸಿದರು. ಆಯುಧ ಪೂಜೆ ಸಮಾರಂಭದಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಬೆಳಗ್ಗೆ ಖಾಸಗಿ ಬಸ್‌ಗಳಿಗೆ ಸಾಮೂಹಿಕ ಆಯುಧಪೂಜೆ ನೆರವೇರಿಸಲಾಯಿತು. ಸಂಘದ ಅಧ್ಯಕ್ಷ ಕುಂಬೆಯಂಡ ಸುರೇಶ್ ದೇವಯ್ಯ ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಸ್ಥಳೀಯ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ರಾತ್ರಿ ಮಂಗಳೂರಿನ ಶಾರದ ಮೇಲೋಡಿಸ್ ತಂಡದವರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಿತು.

ರಾಮಸಮುದ್ರದಲ್ಲಿ ನೀರಿನ ಟ್ಯಾಂಕ್ ನಿರ್ಮಾಣ

ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಶಾಸಕರಿಂದ ಗುದ್ದಲಿಪೂಜೆ



ಚಾಮರಾಜನಗರ, ಅ.26– ಅಮೃತ್–2.0 ಕಾರ್ಯಕ್ರಮದಡಿ ಕುಡಿಯುವ ನೀರು ಯೋಜನೆಯ 1 ಕೋಟಿ 20 ಲಕ್ಷ ವೆಚ್ಚದ ಜಲಸಂಗ್ರಹಗಾರ (ವಾಟರ್ ಟ್ಯಾಂಕ್) ನಿರ್ಮಾಣ ಕಾಮಗಾರಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಇಂದು ಗುದ್ದಲಿಪೂಜೆ ನೆರವೇರಿಸಿದರು.

ನಗರದ ರಾಮಸಮುದ್ರ ಬಡಾವಣೆಯಲ್ಲಿಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ನಗರಸಭೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕೇಂದ್ರ ಪುರಸ್ಕೃತ ಅಮೃತ್–2.0 ಕಾರ್ಯಕ್ರಮದಡಿ ಚಾಮರಾಜನಗರ ನೀರು ಸರಬರಾಜು ವ್ಯವಸ್ಥೆಯ ಸುಧಾರಣೆ ಯೋಜನೆ ಕಾರ್ಯಕ್ರಮದಲ್ಲಿ 15 ಲಕ್ಷ ಲೀ. ಸಂಗ್ರಹ ಸಾಮರ್ಥ್ಯದ ಜಲಸಂಗ್ರಹಗಾರ ಕಾಮಗಾರಿಗೆ ಶಾಸಕರು ಭೂಮಿಪೂಜೆ ಮಾಡಿ, ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಅವರು, ನಗರದ ನಾಗರಿಕರಿಗೆ ಸಿ.ಪಿ.ಎಚ್.ಇ.ಇ.ಓ ಮಾನದಂಡಗಳಿಗೆ ಅನುಗುಣವಾಗಿ ಕುಡಿಯುವ ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ ಯೋಜನೆಯನ್ನು ಕೇಂದ್ರ ಪುರಸ್ಕೃತ ಅಮೃತ್–2.0 ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳಲಾಗಿದೆ. ಹಾಗೆಯೇ ಜಿಲ್ಲಾ ಕೇಂದ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯ ಕ್ರಮ ವಹಿಸಲಾಗಿದೆ ಎಂದರು.

ರಾಮಸಮುದ್ರ ಬಡಾವಣೆಯಲ್ಲಿ ಈ ಹಿಂದೆ ಇದ್ದ ಜಲಸಂಗ್ರಹಗಾರ (ವಾಟರ್ ಟ್ಯಾಂಕ್) ಶಿಥಿಲಗೊಂಡು ಕುಸಿಯುವ ಸ್ಥಿತಿಯಲ್ಲಿತ್ತು. ಪ್ರಸ್ತುತ ಶಿಥಿಲಗೊಂಡಿದ್ದ ಹಳೇ ಟ್ಯಾಂಕ್ ಅನ್ನು ಕೆಡವಿ ಅದೇ ಜಾಗದಲ್ಲಿ 15 ಲಕ್ಷ ಲೀ. ನೀರು ಸಂಗ್ರಹ ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿದೆ. ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಂಡು ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಆಗುವಂತೆ ನೋಡಿಕೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ನಗರಸಭಾ ಸದಸ್ಯರಾದ ನಂಜುಂಡಸ್ವಾಮಿ, ಎಂ.ಆರ್. ರಾಜಪ್ಪ ಮಾಜಿ ಸದಸ್ಯರಾದ ನಾಗರಾಜು, ಪೌರಾಯುಕ್ತ ಎಸ್.ವಿ. ರಾಮದಾಸ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

ಬಿದ್ದು ಸಾವನ್ನಪ್ಪಿದ ಶಿಕ್ಷಕಿಗೆ ಶ್ರದ್ಧಾಂಜಲಿ



ಯಳಂದೂರು, ಅ.26– ಶಿಕ್ಷಕಿಯಾದ ಶ್ರೀಮತಿ ಪುಟ್ಟಿ ಅವರು ಶಿಕ್ಷಕಿಯರ ಜಾತ್ಯತೀತ ಗಟ್ಟಿಧ್ವನಿಯಾಗಿದ್ದರು ಎಂದು ಅಗಲಿದ ಶಿಕ್ಷಿಯನ್ನು ನೆನೆದು ಉಪಪ್ರಾಂಶುಪಾಲ ನಂಜುಂಡಯ್ಯ ಭಾವುಕರಾದರು. ಕಳೆದ ವಾರ ಮನೆಯಲ್ಲಿ ಬಿದ್ದು ಅಕಾಲಿಕ ಮರಣಕ್ಕೆ ತುತ್ತಾಗಿದ್ದ ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಯಳಂದೂರು ಘಟಕದ ಅಧ್ಯಕ್ಷೆಯಾಗಿದ್ದ ಶಿಕ್ಷಕಿ ಶ್ರೀಮತಿ ಪುಟ್ಟಿಯವರಿಗೆ ಸರ್ಕಾರಿ ನೌಕರರ ಸಂಘದ ಕಚೇರಿಯ ಆವರಣದಲ್ಲಿಂದು ಪುಣ್ಯಸ್ಮರಣೆ ಮತ್ತು ನುಡಿನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ಅವರು, ಶ್ರೀಮತಿ ಪುಟ್ಟಿಯವರು ನಮ್ಮ ಇಲಾಖೆಯ ಯಾವುದೇ ತರಬೇತಿ, ಸಭೆ ಹಾಗೂ ಶಿಕ್ಷಕಿಯರ ಸಂಘಟನೆ ಮುಂತಾದ ಚಟುವಟಿಕೆಗೆ ಸಂಬಂಧಿಸಿದಂತೆ ಮುಂದಾಳತ್ವವನ್ನು ವಹಿಸಿಕೊಂಡು ಯಶಸ್ವಿಗೊಳಿಸುತ್ತಿದ್ದರು ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕಿಯರು ಒಂದು ನಿಮಿಷ ಕಾಲ ಮೌನಾಚರಣೆ ಮಾಡಿ ನಂತರ ಶ್ರೀಮತಿ ಪುಟ್ಟಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮೊಂಬತ್ತಿ ಬೆಳಗಿಸಿ ಪುಣ್ಯಸ್ಮರಣೆ ಮತ್ತು ನುಡಿನಮನ ಸಲ್ಲಿಸಿದರು

ಈ ಸಂದರ್ಭದಲ್ಲಿ ಸಿಆರ್‌ಪಿ ಶಿವಾಲಂಕಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಹೊನ್ನೂರು ಸೋಮಣ್ಣ, ಸಾವಿತ್ರಿಬಾಪುಲೆ ಸಂಘದ ಜಿಲ್ಲಾಧ್ಯಕ್ಷೆ ಭಾಷಾ ದೇವಿ, ಜಿಲ್ಲಾ ಕಾರ್ಯದರ್ಶಿ ಸುಶೀಲ, ಶಿಕ್ಷಕರಾದ ಶಂಕರ್, ಮಹದೇವು, ಶಿಕ್ಷಕಿ ಗಣಿಗನೂರು ಮಹದೇವಮ್ಮ, ಶಿಕ್ಷಕರು ಮತ್ತು ಶಿಕ್ಷಕಿಯರು ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಣ್ಣೇಗಾಲದಲ್ಲಿ ಚಿರತೆ ಪ್ರತ್ಯಕ್ಷ

ಜಮೀನಿನಲ್ಲಿ ಮೇಯುತ್ತಿದ್ದ ಮೇಕೆ ಕೊಂದು ಪರಾರಿ



ಚಾಮರಾಜನಗರ, ಅ.26– ಹಾಡುಹಗಲೇ ಚಿರತೆಯೊಂದು ಕಾಣಿಸಿಕೊಂಡಿದ್ದು, ಜಮೀನಿನಲ್ಲಿ ಮೇಯುತ್ತಿದ್ದ ಮೇಕೆ ಮೇಲೆ ಚಿರತೆ ದಾಳಿ ನಡೆಸಿ ಕೊಂದು ಹಾಕಿರುವ ಘಟನೆ ತಾಲೂಕಿನ ಕಣ್ಣೇಗಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀ ದುರ್ಗಾ ಮಹಾಲಕ್ಷ್ಮೀ ದೇವಸ್ಥಾನದ ಸಮೀಪದ ಜಮೀನಿನೊಂದರಲ್ಲಿ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಸುಬ್ಬನಾಯಕ ಅವರು ಮೇಕೆ ಮೇಯಿಸುವಾಗ ಈ ಘಟನೆ ನಡೆದಿದೆ. ಈ ಘಟನೆ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿ ಬೋನು ಇಡುವುದಾಗಿ ತಿಳಿಸಿದ್ದಾರೆ.

ಮೇಕೆ ಕಳೆದುಕೊಂಡಿರುವ ಸುಬ್ಬನಾಯಕ ಅವರಿಗೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು. ಬೋನು ಇಟ್ಟು ಚಿರತೆ ಹಿಡಿದು ಹಾವಳಿ ತಪ್ಪಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

44ನೇ ದಿನಕ್ಕೆ ಕಾಲಿಟ್ಟ ಕಾವೇರಿ ಪ್ರತಿಭಟನೆ



ಚಾಮರಾಜನಗರ, ಅ.26 – ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಕಳೆದ 44 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಅಣಕು ಪುಟ್ ಬಾಲ್ ಆಟ ಆಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಪುಟ್‌ಬಾಲ್ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಣಕು ಪುಟ್‌ಬಾಲ್ ಆಟ ಆಡಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ಮಹೇಶ್‌ಗೌಡ, ನಿಜಧ್ವನಿ ಗೋವಿಂದರಾಜು, ಲಿಂಗರಾಜು, ತಾಂಡವಮೂರ್ತಿ, ಗು.ಪುರುಷೋತ್ತಮ್, ಬಸವರಾಜುನಾಯಕ, ಚಾ.ಹ.ರಾಮು, ವೀರಭದ್ರ, ರಾಜಪ್ಪ, ಮೂಡ್ಲಪುರ ಪ್ರಕಾಶ್, ಸೋಮವಾರಪೇಟೆ ಮಂಜು, ಮಿಮಿಕ್ರಿ ಮಲ್ಲಣ್ಣ ಚಾ.ಸಿ.ಸಿದ್ದರಾಜು, ಭಾಗವಹಿಸಿದ್ದರು.

ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ 487.560 ಲೀ ಮದ್ಯ, 76.900 ಲೀ ಬಿಯರ್ ನಾಶ ಪಡಿಸಿದ ಅಬಕಾರಿ ಇಲಾಖೆ

ಚಾಮರಾಜನಗರ, ಅ.26– ಚಾಮರಾಜನಗರ ವಲಯ ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆಯಿಂದ ದಾಖಲಿಸಲಾದ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ 487.560 ಲೀ ಮದ್ಯ ಹಾಗೂ 76.900 ಲೀ ಬಿಯರ್ ಅನ್ನು (ಅಂದಾಜು ಮೌಲ್ಯ 2,30,000 ರೂ) ಚಾಮರಾಜನಗರ ವಲಯ ಕಚೇರಿಯ ಆವರಣದಲ್ಲಿ ಚಾಮರಾಜನಗರ ಉಪವಿಭಾಗದ ಅಬಕಾರಿ ಉಪ ಅಧೀಕ್ಷಕರಾದ ಎಂ.ಡಿ. ಮೋಹನ್ ಕುಮಾರ್ ಅವರ ನೇತೃತ್ವದಲ್ಲಿ ಇಂದು ನಾಶಪಡಿಸಲಾಯಿತು. ವಲಯ ಅಬಕಾರಿ ನಿರೀಕ್ಷಕರಾದ ಸಿ.ಎಂ. ಮಹದೇವ, ಚಾಮರಾಜನಗರ ಉಪವಿಭಾಗ ಅಬಕಾರಿ ನಿರೀಕ್ಷಕರಾದ ಎಂ.ಬಿ. ಉಮಾಶಂಕರ್, ಚಾಮರಾಜನಗರ ತಾಲೂಕು ಕಚೇರಿಯ ಗ್ರಾಮ ಆಡಳಿತ ಅಧಿಕಾರಿ ಎಸ್. ಉಜ್ವಲ್, ಕೆ.ಎಸ್.ಬಿ.ಸಿ.ಎಲ್. ಡಿಪೋ ಸಹಾಯಕ ವ್ಯವಸ್ಥಾಪಕರಾದ ಕೆ.ಎಂ. ಸಿದ್ದರಾಜು ಹಾಗೂ ಚಾಮರಾಜನಗರ ವಲಯದ ಸಿಬ್ಬಂದಿಗಳಾದ ಆರ್. ರಾಜೇಶ್, ಸಿ. ಮಣಿಕಂಠ, ಆರ್. ರಾಜು ಈ ವೇಳೆ ಹಾಜರಿದ್ದರು.

ಅ.30ರಂದು ಕುದೇರು, ದೇಮಹಳ್ಳಿ ಗ್ರಾಪಂಗಳಲ್ಲಿ ಜನಸಂಪರ್ಕ ಸಭೆ

ಚಾಮರಾಜನಗರ, ಅ.26– ಚಾಮರಾಜನಗರ ತಾಲೂಕು ವ್ಯಾಪ್ತಿಯ ಕುದೇರು ಮತ್ತು ದೇಮಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆಯನ್ನು ಅ.30ರಂದು ಏರ್ಪಡಿಸಲಾಗಿದೆ.

ಅ.30ರಂದು ಬೆಳಗ್ಗೆ 11 ಗಂಟೆಗೆ ಕುದೇರು ಗ್ರಾಮದ ಛತ್ರಿ ಮರದ ಹತ್ತಿರ ಹಾಗೂ ದೇಮಹಳ್ಳಿ ಪಂಚಾಯಿತಿಯಲ್ಲಿ ಮಧ್ಯಾಹ್ನ 2 ಗಂಟೆಗೆ ಗ್ರಾಪಂ ಆವರಣದಲ್ಲಿ ಜನಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ತಾಪಂ ಕಾರ್ಯನಿರ್ವಾಹಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಎಸ್‌ಐಗಳು, ಪಿಎಸ್‌ಐಗಳಾಗಿ ಬಡ್ತಿ ಹೊಂದಿ ಅಧಿಕಾರ ಸ್ವೀಕಾರ



ಗುಂಡ್ಲುಪೇಟೆ, ಅ.26– ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ಗಳಾದ ಎಂ.ಎಸ್. ಶಿವಶಂಕರಪ್ಪ ಮತ್ತು ಜಯರಾಮ್ ಪಿಎಸ್‌ಐ ಆಗಿ ಬಡ್ತಿ ಹೊಂದಿದ್ದು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಅಧಿಕಾರ ಸ್ವೀಕರಿಸಿದರು.

ತಾಲೂಕಿನ ಬೇಗೂರು ಪೊಲೀಸ್ ಠಾಣೆಯಲ್ಲಿ ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂ.ಎಸ್. ಶಿವಶಂಕರಪ್ಪ ಮತ್ತು ಜಯರಾಮ್ ಅವರು ಪಿಎಸ್‌ಐ ಆಗಿ ಬಡ್ತಿ ಹೊಂದಿ, ಪಟ್ಟಣದ ಪೊಲೀಸ್‌ಠಾಣೆಯಲ್ಲಿ ಅಧಿಕಾರ ಸ್ವೀಕರಿಸಿದರು. ಈ ವೇಳೆ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಕಾನೂನು ಮತ್ತು ಸುವ್ಯವಸ್ಥೆಯ ಪಿಎಸ್‌ಐ ಸಾಹೇಬಗೌಡ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ಎಂ. ಆನಂದ್ ನೇಮಕ



ಚಾಮರಾಜನಗರ, ಅ.26– ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ಎಂ. ಅನಂದ್ ನೇಮಕಗೊಂಡಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡರ ಅನುಮೋದನೆಯೊಂದಿಗೆ ಅನಂದ್ ಅವರನ್ನು ನೇಮಕ ಮಾಡಲಾಗಿದೆ.

ಮಹದೇಶ್ವರ ಬೆಟ್ಟದಲ್ಲಿ ಅಪರಿಚಿತ ಶವ ಪತ್ತೆ

ಚಾಮರಾಜನಗರ, ಅ.26– ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಮಹಾರಾಜ ಛತ್ರದ ಒಳಭಾಗದಲ್ಲಿ ಅಪರಿಚಿತ ಶವ ಪತ್ತೆಯಾಗಿದೆ. ಸುಮಾರು 80 ರಿಂದ 90 ವರ್ಷ ವಯಸ್ಸಿನ ವೃದ್ಧೆಯಾಗಿದ್ದು, ಬಿಳಿ ಮೈಬಣ್ಣ, ಸಣಕಲು ಶರೀರ, ಕೋಲುಮುಖ, ಬಿಳಿ ತಲೆ ಕೂದಲು ಹೊಂದಿರುತ್ತಾರೆ. ವಾರಸುದಾರರು ಮಲೆ ಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆ ದೂ.ಸಂ 08225-272141 ಅಥವಾ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡುವಂತೆ ಮಲೆ ಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಚಾಮುಂಡೇಶ್ವರಿ ರಥೋತ್ಸವ



ಅಲಂಕಾರ ಮಾಡಲಾಯಿತು. ಅಂದರೆ ಚಾಮುಂಡೇಶ್ವರಿ ದೇವಿಯನ್ನು ಸಿಂಹದ ಮೇಲೆ ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಗುರುವಾರ ಮುಂಜಾನೆಯೇ ದೇವಾಲಯಕ್ಕೆ ಆಗಮಿಸಿದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ತಾಯಿ ಪ್ರಮೋದಾ ದೇವಿ ಜೊತೆ ಚಾಮುಂಡೇಶ್ವರಿ ದೇವಿಗೆ ಅಗ್ರ ಪೂಜೆ ಸಲ್ಲಿಸಿದರು. ಯದುವಂಶರ ಕುಲದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ತಾಯಿ–ಮಗ ಸುಮಾರು ಅರ್ಧ ಗಂಟೆ ಕಾಲ ವಿಶೇಷ ಪೂಜೆ ನೆರವೇರಿಸಿದರು.

ಅರಮನೆಯಿಂದ ತಂದಿದ್ದ ವಜ್ರಾಭರಣಗಳಿಂದ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಅಲಂಕರಿಸಲಾಯಿತು. ನಂತರ ಯದುವೀರ್ ಅವರು ದೇವಸ್ಥಾನದ ಸುತ್ತ ನಡೆದ ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ಸಾಗಿದರು. ಮಂಗಳವಾದ್ಯ, ಪೊಲೀಸ್ ಬ್ಯಾಂಡ್‌ನೊಂದಿಗೆ ಸಾಗಿದ ಉತ್ಸವ ಮೂರ್ತಿಯ ಮೆರವಣಿಗೆಗೆ ಲಿಂಗದೀರ ಕುಣಿತ ಸೇರಿದಂತೆ ಹಲವು ಜಾನಪದ ಕಲಾ ತಂಡಗಳು ಮೆರಗು ನೀಡಿದವು. ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸುವ ಮುನ್ನ ಯದುವೀರ್ ಅವರು ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ ಮಂಗಳಾರತಿ ಮಾಡಿದರು. ಈ ವೇಳೆ ಚಾಮುಂಡೇಶ್ವರಿ ದೇವಾಲಯದ ಅರ್ಚಕ ವೃಂದ ಮಂತ್ರ ಘೋಷ ಮೊಳಗಿಸಿದರು. ತರುವಾಯ ಕ್ರೇನ್ ಮೂಲಕ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾನೆ ಮಾಡಲಾಯಿತು. ಇಂದು ಬೆಳಿಗ್ಗೆ 7 ಗಂಟೆ 50 ನಿಮಿಷದಿಂದ 8 ಗಂಟೆ 20 ನಿಮಿಷದೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಯದುವೀರ್ ಅವರು ಸಾಂಕೇತಿಕವಾಗಿ ಹಗ್ಗವನ್ನು ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಪತ್ನಿ ಲಲಿತಾ ಹಾಗೂ ಕುಟುಂಬಸ್ಥರ ಜೊತೆ ಭಕ್ತಿ ಭಾವದಿಂದ ರಥ ಎಳೆದರು.

ಸಹಸ್ರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದ ಭಕ್ತ ಸಾಗರ ಚಾಮುಂಡೇಶ್ವರಿಗೆ ಜೈಕಾರ, ಘೋಷಣೆಯೊಂದಿಗೆ ರಥ ಎಳೆದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ರಥದ ಚಕ್ರದ ಬಳಿ ಯಾರೂ ಸುಳಿಯದಂತೆ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ರಥದ ಮುಂಭಾಗ ಶ್ರೀ ಚಾಮುಂಡೇಶ್ವರಿ ದೇವಿ ಫಲಕವನ್ನು ಹೂವಿನಿಂದ ಅತ್ಯಾಕರ್ಷಕವಾಗಿ ಸಿಂಗರಿಸಲಾಗಿತ್ತು. ಚಾಮರ ಹಾಗೂ ಬಣ್ಣ ಬಣ್ಣದ ವಸ್ತ್ರಗಳಿಂದ ರಥವನ್ನು ವರ್ಣರಂಜಿತವಾಗಿ ಅಲಂಕರಿಸಲಾಗಿತ್ತು. ಈ ವೇಳೆ ಅರಮನೆಯ ಸಿಬ್ಬಂದಿ ಚಾಮುಂಡೇಶ್ವರಿ ದೇವಿಗೆ ಚೌಲಿ ಜೋಡಿ ಹಾಗೂ ಜಿಲ್ಲೊ ಮರ್ಯಾದೆಯನ್ನು ನೀಡುತ್ತಾ ರಥೋತ್ಸವದ ಮುಂಚೂಣಿಯಲ್ಲಿ ಸಾಗಿದರು. ಪೊಲೀಸ್ ಬ್ಯಾಂಡ್ ಹಾಗೂ ಮಂಗಳ ವಾದ್ಯದೊಂದಿಗೆ ಚಾಮುಂಡೇಶ್ವರಿ ರಥ ಮಹಾಬಲೇಶ್ವರ ದೇವಸ್ಥಾನ, ನಾರಾಯಣ ಸ್ವಾಮಿ ದೇವಸ್ಥಾನದಿಂದ ಸಾಂಗವಾಗಿ ಸಾಗಿತು. ಸಹಸ್ರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದ ಭಕ್ತರು ಭಕ್ತಿ ಭಾವದಿಂದ ರಥಕ್ಕೆ ಹಣ್ಣು, ಜವನ ಎಸೆದು ತಮ್ಮ ಇಷ್ಟಾರ್ಥ ಸಿದ್ಧಿಸಲಿ ಎಂದು ಶಕ್ತಿ ದೇವತೆಯಲ್ಲಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯವರು ಕುಶಾಲ ತೋಪುಗಳನ್ನು ಸಿಡಿಸುವ ಮೂಲಕ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಗೌರವ ವಂದನೆ ಸಲ್ಲಿಸಿದರು.

ಚಾಮುಂಡಿಬೆಟ್ಟದ ನಾರಾಯಣ ಸ್ವಾಮಿ ದೇವಸ್ಥಾನದ ಎದುರಿನ ಕಲ್ಲು ಮೆಟ್ಟಿಲುಗಳ ಮೇಲೆ ಕುಳಿತಿದ್ದ ಸಹಸ್ರಾರು ಭಕ್ತರು ನಾಡದೇವತೆ ದರ್ಶನ ಪಡೆದರು.

ಹೀಗೆ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಬಂದ ತಾಯಿಯ ರಥ ದೇವಾಲಯದ ಪ್ರವೇಶ ದ್ವಾರದಲ್ಲಿ ಸಮಾಪ್ತಿಗೊಂಡಿತು. ಚಾಮುಂಡೇಶ್ವರಿ ದೇವಿಯ ಜಾತ್ರೆಯಲ್ಲಿ ಗ್ರಾಮೀಣ ಭಾಗದ ಜನರೇ ಹೆಚ್ಚಾಗಿ ಸೇರಿದ್ದರು. ಕಡ್ಲೆಪುರಿ, ಖಾರಾ ಹಾಗೂ ಸಿಹಿ ತಿಂಡಿಗಳು, ಆಟಿಕೆ ಸಾಮಾನುಗಳು, ಗೃಹಿಣಿಯರಿಗೆ ಅವಶ್ಯವಿರುವ ಗೃಹ ಬಳಕೆಯ ವಸ್ತುಗಳ ಮಾರಾಟ ಜಾತ್ರೆಯ ವಾತಾವರಣಕ್ಕೆ ಮೆರಗು ನೀಡಿತು.

ನಾಡದೇವತೆ ಸರ್ವರಿಗೂ ಒಳಿತು ಉಂಟು ಮಾಡಲಿ

ರಥೋತ್ಸವದಲ್ಲಿ ಪಾಲ್ಗೊಂಡಿದ್ದ ರಾಜವಂಶಸ್ಥ ಯದುವೀರ್ ಅವರು, ನಾಡಿನ ಜನತೆಗೆ ತಾಯಿ ಚಾಮುಂಡೇಶ್ವರಿ ದೇವಿ ಒಳಿತು ಉಂಟು ಮಾಡಲಿ ಎಂದು ಶುಭ ಹಾರೈಸಿದರು. ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಶಾಂತಿಯುತವಾಗಿ, ಯಶಸ್ವಿಯಾಗಿ ನಡೆದಿದೆ. ಅದರಂತೆ ನಾಡದೇವತೆಯ ರಥೋತ್ಸವ ಕೂಡ ಅದ್ದೂರಿಯಿಂದ ನಡೆದಿದ್ದು, ನಾಡಿನ ಜನರಿಗೆ ದೇವತೆ ಒಳ್ಳೆಯದು ಮಾಡಲಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಮೋದಾದೇವಿ ಒಡೆಯರ್ ಅವರು, ರಥೋತ್ಸವ ವಿಜೃಂಭಣೆಯಿಂದ ನಡೆದಿದ್ದು, ಎಲ್ಲರಿಗೂ ದೇವರು ಒಳಿತು ಮಾಡಲಿ ಎಂದು ಹಾರೈಸಿದರು.

ನಾಡಿನ ಜನರ ಪರವಾಗಿ ನಾಡದೇವತೆ ಬೇಡಿದ್ದೇನೆ

ಪ್ರತಿ ವರ್ಷದಂತೆ ಈ ಬಾರಿ ಕೂಡ ಕುಟುಂಬ ಸಮೇತ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜಿ.ಟಿ.ದೇವೇಗೌಡರು ನಾಡಿನ ಜನರ ಪರವಾಗಿ ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ತರುವಾಯ ಮಾತನಾಡಿದ ಜಿ.ಟಿ.ದೇವೇಗೌಡರು, ಸತ್ಸಂಪ್ರದಾಯದಂತೆ ತಾಯಿ ಚಾಮುಂಡೇಶ್ವರಿ ರಥೋತ್ಸವ ನಡೆದಿದೆ. ಪ್ರಮೋದಾದೇವಿ ಒಡೆಯರ್ ಹಾಗೂ ಯದುವೀರ್ ಅವರು ಪೂಜೆ ಸಲ್ಲಿಸಿದ್ದಾರೆ. ಉತ್ತಮ ಮಳೆಯಾಗಿ ನಮ್ಮನ್ನೆಲ್ಲಾ ಕಾಪಾಡಮ್ಮ ಎಂದು ಕರ್ನಾಟಕ ರಾಜ್ಯದ ಜನರ ಪರವಾಗಿ ಚಾಮುಂಡೇಶ್ವರಿ ದೇವಿಯನ್ನು ಭಿನ್ನವಿಸಿಕೊಂಡಿದ್ದೇನೆ. ಸರ್ವರಿಗೂ ಸುಖ,ಶಾಂತಿ, ನೆಮ್ಮದಿ ಕೊಡುವಂತೆ ಪ್ರಾರ್ಥಿಸಿದ್ದೇನೆ ಎಂದು ಗೌಡರು ಹೇಳಿದರು.

ಸರ್ಕಾರಕ್ಕೆ ಮರಳಿಸಲು ಒಂದು ಅವಕಾಶ

ಗ್ರಾಮೀಣ ಪ್ರದೇಶದ ಕೆಲವರ ಮನೆಗಳಲ್ಲಿ ಜಿಂಕೆ ಚರ್ಮ, ಆನೆ ದಂತದಿಂದ ಮಾಡಿದ ಕಲಾಕೃತಿಗಳು, ಜಿಂಕೆ ಮತ್ತು ಸಾರಂಗದ ಕೊಂಬು ಇತ್ಯಾದಿಗಳನ್ನು ಇಟ್ಟುಕೊಂಡಿರುತ್ತಾರೆ. ಇದು ಅಪರಾಧ ಎಂಬುದೂ ಅವರಿಗೂ ತಿಳಿದಿಲ್ಲ.

ವರ್ತೂರು ಸಂತೋಷ ಪ್ರಕರಣ ವರದಿಯಾದ ಬಳಿಕ, ವನ್ಯಜೀವಿ ಉತ್ಪನ್ನಗಳ ಅಕ್ರಮ ದಾಸ್ತಾನಿನ ಬಗ್ಗೆ ಹೆಚ್ಚಾಗಿ ದೂರುಗಳು ಬರುತ್ತಿವೆ. ಕಾನೂನಿನ ಅರಿವಿಲ್ಲದ ಶ್ರೀಸಾಮಾನ್ಯರಿಗೆ ಆಗುವ ತೊಂದರೆ ತಪ್ಪಿಸಲು ಒಂದು ಬಾರಿ ಕೊನೆಯದಾಗಿ ಇಂತಹ ಅಕ್ರಮ ಸಂಗ್ರಹಣೆ/ದಾಸ್ತಾನಿನ ಬಗ್ಗೆ ಘೋಷಣೆ ಮಾಡಿಕೊಳ್ಳಲು ಮತ್ತು ಸರ್ಕಾರಕ್ಕೆ ಮರಳಿಸಲು ಅವಕಾಶ ನೀಡುವ ಬಗ್ಗೆ ಪರಾಮರ್ಶಿಸಿ, ಇದಕ್ಕೆ ಇತಿಶ್ರೀ ಹಾಡಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು.

ಅಳಿವಿನಂಚಿನಲ್ಲಿರುವ, ಅಮೂಲ್ಯ ಮತ್ತು ಅಪರೂಪದ ವನ್ಯ ಜೀವಿಗಳಾದ ಹುಲಿ, ಚಿರತೆ, ಚಿಂಕಾರ, ಕೃಷ್ಣಮೃಗ, ಸಾಂಬಾರ್, ಕರಡಿ ಸೇರಿದಂತೆ ಹಲವು ಕಾಡು ಪ್ರಾಣಿಗಳನ್ನು ಪರಿಶಿಷ್ಟ 1ರಲ್ಲಿ ಪಟ್ಟಿ ಮಾಡಲಾಗಿದ್ದು, ಇಂತಹ ಪ್ರಾಣಿಗಳನ್ನು ಕೊಲ್ಲುವುದು, ಬೇಟೆ ಆಡುವುದು, ಅಂತಹ ಪ್ರಾಣಿಗಳ ದೇಹದ ಯಾವುದೇ ಭಾಗದಿಂದ ತಯಾರಿಸಿದ ವಸ್ತುವನ್ನು ಅಲಂಕಾರಿಕವಾಗಿ ಮನೆಯಲ್ಲಿಡುವುದು, ಧರಿಸುವುದು ಕೂಡ ಅಪರಾಧವಾಗಿರುತ್ತದೆ ಎಂದು ತಿಳಿಸಿದರು.

ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಎಲ್ಲರಿಗೂ ಕಾನೂನು ಸಮಾನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಗಣ್ಯರೂ ಸೇರಿದಂತೆ ಹಲವರಿಗೆ ನೋಟಿಸ್ ನೀಡಲಾಗಿದೆ. ಅಧಿಕಾರಿಗಳು ಕಾನೂನು ರೀತ್ಯ ಮತ್ತು ಆಯಾ ಸಂದರ್ಭಕ್ಕೆ ಅನುಗುಣವಾಗಿ ತಮ್ಮ ವಿವೇಚನಾಧಿಕಾರ ಬಳಸಿ ಕ್ರಮ ಜರುಗಿಸಲಿದ್ದಾರೆ ಎಂದರು.

800 ಹುದ್ದೆ ಭರ್ತಿ: ಅರಣ್ಯ ಇಲಾಖೆಯಲ್ಲಿ ಸುಮಾರು 4 ಸಾವಿರ ಹುದ್ದೆ ಖಾಲಿ ಇದ್ದು, ಈಗಾಗಲೇ ಹಣಕಾಸು ಇಲಾಖೆ 800 ಹುದ್ದೆ ಭರ್ತಿಗೆ ಅನುಮತಿ ನೀಡಿದೆ. ಶೀಘ್ರವೇ ಇದರ ಭರ್ತಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

ವನ್ಯಜೀವಿ ಆಭರಣಕ್ಕೆ ನಿರ್ಬಂಧ: ಎಲ್ಲ ಚಿನ್ನಾಭರಣ ಮಳಿಗೆಗಳಲ್ಲಿ ತಮ್ಮಲ್ಲಿ ವನ್ಯಜೀವಿಯ ಯಾವುದೇ ಆಭರಣ ತಯಾರಿಸುವುದಿಲ್ಲ, ಮಾರಾಟ ಮಾಡುವುದಿಲ್ಲ. ಇದು ಶಿಕ್ಷಾರ್ಹ ಅಪರಾಧ ಎಂಬ ಫಲಕ ಹಾಕುವಂತೆ ಸೂಚಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು. ಇತ್ತೀಚೆಗೆ ಬೆಳಗಾವಿ ವಿಭಾಗದಲ್ಲಿ ಖಾನಾಪುರ ಬಳಿಯ ಜಳಗಾ ಅರಣ್ಯದ ವ್ಯಾಪ್ತಿಯಲ್ಲಿ ಮಧ್ಯಪ್ರದೇಶದ ಚಿಕ್ಕಾಅಲಿಯಾಸ್ ಕೃಷ್ಣಾ ಪಾಟ್ಲೆ ಪವಾರ್ ಎಂಬುವನನ್ನು ಬಂಧಿಸಲಾಗಿದ್ದು, ಆತ ಹುಲಿ ಕಳ್ಳಬೇಟೆಗಾರನಾಗಿದ್ದು, ಆತನ ವಿರುದ್ಧ ಹಲವು ರಾಜ್ಯಗಳಲ್ಲಿ ದೂರು ದಾಖಲಾಗಿದೆ. ಅರಣ್ಯ ಇಲಾಖೆ ಕಳ್ಳಬೇಟೆ ನಿಗ್ರಹಕ್ಕೂ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ನಕಲಿ ಲಾಕೆಟ್ ಕೂಡ ಧರಿಸದಂತೆ ಮನವಿ

ಚಿತ್ರನಟರು, ಗಣ್ಯರು ನಕಲಿ ಹುಲಿ ಉಗುರಿನ ಲಾಕೆಟ್ ಕೂಡ ಧರಿಸಿದರೂ ಇತರರಿಗೆ ಪ್ರೇರಣೆ ಸಿಗುತ್ತದೆ. ಅವರಿಗೆ ಸಾವಿರಾರು ಅಭಿಮಾನಿಗಳು ಇರುತ್ತಾರೆ. ಅವರು ಕೂಡ ತಮ್ಮ ನಾಯಕನಂತೆ ಹುಲಿ ಉಗುರಿನ ಲಾಕೆಟ್ ಧರಿಸಲು ಬಯಸುತ್ತಾರೆ. ಆಗ ಬೇಡಿಕೆ ಹೆಚ್ಚುತ್ತದೆ. ವನ್ಯಜೀವಿಗಳ ಹತ್ಯೆ ಆಗುತ್ತದೆ. ಇದಕ್ಕೆ ಪರೋಕ್ಷ ಕುಮ್ಮಕ್ಕು ನೀಡಿದಂತೆ ಆಗುತ್ತದೆ. ಹೀಗಾಗಿ ಸಾಮಾಜಿಕ ಬದ್ಧತೆಯ ದೃಷ್ಟಿಯಿಂದ ಗಣ್ಯರು, ನಟರು ನಕಲಿ ಪೆಂಡೆಂಟ್ ಕೂಡ ಧರಿಸಬಾರದು ಎಂದು ಮನವಿ ಮಾಡಿದರು. ಅರಣ್ಯ ಇಲಾಖೆಗೆ 1926 ಎಂಬ ಸಹಾಯವಾಣಿ ಇದ್ದು ಸಾರ್ವಜನಿಕರು ಈ ಸಂಖ್ಯೆಗೆ ಕರೆ ಮಾಡಿ ದೂರು ದಾಖಲಿಸಲು, ಅರಣ್ಯ ಇಲಾಖೆಗೆ ಸಂಬಂಧಿಸಿದ ಮಾಹಿತಿ ಪಡೆಯಲು ಅವಕಾಶವಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿ ಆಸ್ಪತ್ರೆ ಕಟ್ಟಡಗಳ ನವೀಕರಣ ಕಾಮಗಾರಿ ಡಿಸೆಂಬರ್ ಇಲ್ಲವೇ ಜನವರಿ ಒಳಗೆ ಪೂರ್ಣಗೊಳಿಸಿ

- ಅಧಿಕಾರಿಗಳಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಸೂಚನೆ
- ಜನರಿಗೆ ಉತ್ತಮ ಚಿಕಿತ್ಸಾ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಿ

ಮೈಸೂರು, ಅ.26(ಆರ್‌ಕೆ)–ಮೈಸೂರು ಮೆಡಿಕಲ್ ಕಾಲೇಜಿನ ಬೋಧನಾ ಆಸ್ಪತ್ರೆ ಕಟ್ಟಡಗಳ ನವೀಕರಣ ಕಾಮಗಾರಿಗಳನ್ನು ಈ ಡಿಸೆಂಬರ್ ಇಲ್ಲವೇ ಮುಂದಿನ ಜನವರಿಯೊಳಗೆ ಪೂರ್ಣಗೊಳಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಆರ್.ಪಾಟೀಲ್ ಸೂಚನೆ ನೀಡಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಸಭಾಂಗಣದಲ್ಲಿ ಇಂದು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಸಂಸ್ಥೆಯ ಶತಮಾನೋತ್ಸವ ಆಚರಣೆ ಅಂಗವಾಗಿ ಮೈಸೂರು ಮೆಡಿಕಲ್ ಕಾಲೇಜು ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡ, ವಿದ್ಯಾರ್ಥಿ ನಿಲಯ, ಕೆ.ಆರ್.ಆಸ್ಪತ್ರೆ, ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳ ರಿಪೇರಿ ಮತ್ತು ಪುನರು ಜ್ಜೀವನ ಕಾಮಗಾರಿ ಆರಂಭವಾಗಿದ್ದು, ಗುಣಮಟ್ಟ ಕಾಪಾಡಿಕೊಂಡು ಮುಂದಿನ ಡಿಸೆಂಬರ್ ಇಲ್ಲ ಜನವರಿ ವೇಳೆಗೆ ಪೂರ್ಣಗೊಳಿಸಲು ಕ್ರಮ ವಹಿಸಬೇಕೆಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಶತಮಾನೋತ್ಸವ ನಿಮಿತ್ತ ಅಗತ್ಯವಿರುವ ಶಾಶ್ವತ ಹಾಗೂ ನೆನಪಿನಲ್ಲಿ ಉಳಿಯುವಂತಹ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕಾರ್ಯಕ್ರಮಗಳು ಲೋಪವಾಗದಂತೆ ನಡೆಯಲು ಕ್ರಮ ವಹಿಸಿ ಎಂದ ಡಾ. ಪಾಟೀಲ್, ಕೆಆರ್.ಆಸ್ಪತ್ರೆಯಲ್ಲಿ ಹೊಸ ಓಪಿಡಿ ಕಾಂಪ್ಲೆಕ್ಸ್‌ಗೆ 75 ಕೋಟಿ ರೂ. ಯೋಜನೆಯ ಪ್ರಸ್ತಾವನೆ ಬಗ್ಗೆ ನಿಗಾ ವಹಿಸುತ್ತೇನೆ ಎಂದು ತಿಳಿಸಿದರು.



ಬೆಂಗಳೂರಿನ ಇಂದಿರಾ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ ಘಟಕವನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಸ್ಥಾಪಿಸಿ, 150 ಹಾಸಿಗೆ ಸಾಮರ್ಥ್ಯದ ನವಜಾತ ಶಿಶು ಐಸಿಯು ಸೇವೆ ಆರಂಭಿಸುವುದು, ಐಪಿಡಿ–ಓಪಿಡಿ ಕಟ್ಟಡದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋಯೂರಾಲಜಿ (INU) ಯನ್ನು ಅಗತ್ಯ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲು ಪ್ರಸ್ತಾವನೆ ಸಲ್ಲಿಸಿ ಎಂದು ಡೀನ್ ಡಾ. ಕೆ.ಆರ್.ದಾಕ್ಷಾಯಿಣಿ ಅವರಿಗೆ ಸೂಚಿಸಿದರು.

ಖಾಲಿ ಹುದ್ದೆ ಭರ್ತಿ: ಕಾಲೇಜು ಮತ್ತು ಅಧೀನ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಪದೋನ್ನತಿ ಮೂಲಕ ಭರ್ತಿ ಮಾಡಿ. ಉಳಿದವುಗಳಿಗೆ ನೇರ ಸಂದರ್ಶನದ ಮೂಲಕ ಭರ್ತಿ ಮಾಡಿಕೊಂಡು ರೋಗಿಗಳಿಗೆ ಉತ್ತಮ ಸೇವೆ ಒದಗಿಸಿ ಎಂದು ಸಚಿವರು ತಿಳಿಸಿದರು.

ವೈದ್ಯಕೀಯ ಸಲಕರಣೆಗಳು: ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 37 ಕೋಟಿ ರೂ. ವೆಚ್ಚದ ವೈದ್ಯಕೀಯ ಸಲಕರಣೆ ಒದಗಿಸುವ ಕಡತ ಬಾಕಿ ಉಳಿದಿದ್ದು, ಸರ್ಕಾರದ ಹಂತದಲ್ಲಿ ತಾವು ಪ್ರಯತ್ನಿಸಿ ಅನುಮೋದನೆ ಕೊಡಿಸುತ್ತೇನೆ. ನೀವು ಬೆಂಗಳೂರಿಗೆ ಬಂದು ಫಾಲೋ ಅಪ್ ಮಾಡಿ ಎಂದು ಡಾ. ಪಾಟೀಲ್ ಅಧಿಕಾರಿಗಳಿಗೆ ಸೂಚಿಸಿದರು.

100 ಡಯಾಲಿಸಿಸ್: ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 20 ಹಾಗೂ ಪಿಕೆಟಿಬಿ ಆಸ್ಪತ್ರೆಯಲ್ಲಿ 80 ಹಾಸಿಗೆಯುಳ್ಳ ಡಯಾಲಿಸಿಸ್ ಯೂನಿಟ್ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ಕೊಡಿಸುವಂತೆಯೂ ಡೀನ್ ಅವರ ಮನವಿಗೆ ಸ್ಪಂದಿಸಿದ ಸಚಿವರು, ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಕಾಲೇಜು ಕ್ಯಾಂಪಸ್: ಮುಖ್ಯ ಮಂತ್ರಿಗಳ ತವರಿನ ಮೆಡಿಕಲ್ ಕಾಲೇಜು ಕ್ಯಾಂಪಸ್ ಅನ್ನು ಉತ್ತಮಪಡಿಸಬೇಕು. ಮೂಲ ಸೌಲಭ್ಯ ಒದಗಿಸಿ ವೈದ್ಯಕೀಯ ಬೋಧನೆ ಮತ್ತು ಚಿಕಿತ್ಸೆ ಗುಣಮಟ್ಟ ಹೆಚ್ಚಿಸಬೇಕು. ಶತಮಾನೋತ್ಸವ ಸಮಾರಂಭದ ಅಂಗವಾಗಿ ವಿವಿಧ ಯೋಜನೆ ಅನುಷ್ಠಾನಕ್ಕೆ ಪ್ರಸ್ತಾವನೆ ಸಲ್ಲಿಸಿ ಪೂರ್ವ ಅನುಮೋದನೆ ಪಡೆದುಕೊಳ್ಳುವಂತೆಯೂ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.


ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಸುಜಾತ ರಾಥೋಡ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮುಖ್ಯ ಆಡಳಿತಾಧಿಕಾರಿ ಕಲ್ಪಶ್ರೀ, ಹಣಕಾಸು ಅಧಿಕಾರಿ ವಿದ್ಯಾ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ. ಹೆಚ್.ಪಿ. ಶೋಭಾ, ಚೆಲುವಾಂಬ ಆಸ್ಪತ್ರೆಯ ಡಾ. ರಾಜೇಂದ್ರ ಕುಮಾರ್, ಪಿಕೆಟಿಬಿ ಆಸ್ಪತ್ರೆಯ ಡಾ. ಪ್ರಶಾಂತ್, ಸ್ಥಾನಿಕ ವೈದ್ಯಾಧಿಕಾರಿಗಳು, ವಿಭಾಗಗಳ ಮುಖ್ಯಸ್ಥರು, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಅದಕ್ಕೂ ಮೊದಲು ಸಚಿವರು ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ ಕುಮಾರ್ ಅವರೊಂದಿಗೆ ಜಯದೇವ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಚೆಲುವಾಂಬ ಮತ್ತು ಕೆ.ಆರ್.ಆಸ್ಪತ್ರೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಇಂಟೇಕ್ ಹೆಚ್ಚಳ

100 ವರ್ಷಗಳ ಇತಿಹಾಸ ಹೊಂದಿರುವ ರಾಜ್ಯದ ಅತೀ ಹಳೆಯ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಎಂಬಿಬಿಎಸ್ ಸೀಟುಗಳು ಕೇವಲ 150ಕ್ಕೆ ಸೀಮಿತವಾಗಿರುವುದಕ್ಕೆ ಅಸಮಾಧಾನ ಹೊರ ಹಾಕಿದ ಸಚಿವರು, ಮುಂದಿನ ವರ್ಷದಿಂದ ಇಂಟೇಕ್ ಸಾಮರ್ಥ್ಯವನ್ನು 200 ವಿದ್ಯಾರ್ಥಿಗಳಿಗೆ ಹೆಚ್ಚಿಸಲು ಅಗತ್ಯ ಮೂಲ ಸೌಲಭ್ಯ ಅಭಿವೃದ್ಧಿಪಡಿಸುವಂತೆಯೂ ಇದೇ ಸಂದರ್ಭ ಸಲಹೆ ನೀಡಿದರು.

ನ.2ರಿಂದ ಕನ್ನಡ ಹಬ್ಬದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು



ಮೈಸೂರು, ಅ.26(ಜಿಎ)–ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಗರದ ಕಲಾಮಂದಿರದಲ್ಲಿ ನ.2ರಿಂದ 6ರವರೆಗೆ ಕನ್ನಡ ಹಬ್ಬ ಆಯೋಜಿಸಲಾಗಿದ್ದು, ವಿವಿಧ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಟ್ರಸ್ಟ್ ಸಂಚಾಲಕ ಸುಧಾಕರ್ ಹೊಸಳ್ಳಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಪ್ರಾಥಮಿಕ ಶಾಲೆಯಿಂದ ಕಾಲೇಜುವರೆಗಿನ ವಿದ್ಯಾರ್ಥಿಗಳಿಗೆ ನಾಡ ಭಕ್ತಿಗೀತೆ/ ಜಾನಪದ ಗೀತೆ, ಸಮೂಹ ನೃತ್ಯ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಉನ್ನತ ಶಿಕ್ಷಣ ವಿಷಯದಲ್ಲಿ ಚರ್ಚಾ ಸ್ಪರ್ಧೆ ನಡೆಯಲಿದೆ. ಇವುಗಳಲ್ಲಿ ಪ್ರಥಮ 3 ಸ್ಥಾನಗಳಿಗೆ 2 ಸಾವಿರದಿಂದ 10 ಸಾವಿರದವರೆಗೂ ನಗದು ಬಹುಮಾನವಿದೆ.

4ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ. ಪ್ರಥಮದಲ್ಲಿ ನೋಂದಾಯಿಸಿದ 15 ಕವಿಗಳಿಂದ ಕನ್ನಡ ನಾಡು, ನುಡಿ, ಪರಂಪರೆ ವಿಷಯದಲ್ಲಿ ಕವಿಗೋಷ್ಠಿ ನಡೆಯಲಿದೆ. ಕಾಲೇಜು ವಿದ್ಯಾರ್ಥಿಗಳಿಗೆ ಥಟ್ ಅಂತ ಹೇಳಿ ರಸಪ್ರಶ್ನೆ ಸ್ಪರ್ಧೆಯೂ ಇದ್ದು, ಅ.29ರಂದು ಬೆಳಗ್ಗೆ 10.30ಕ್ಕೆ ಎಂಜಿನಿಯರ್‌ಗಳ ಸಂಸ್ಥೆಯಲ್ಲಿ ಪ್ರಥಮ ಸುತ್ತು ನಡೆಯಲಿದ್ದು, ಅರ್ಹತೆ ಪಡೆದ 6 ತಂಡಗಳಿಗೆ ನಾ.ಸೋಮೇಶ್ವರ ಅವರಿಂದ ನ.5ರಂದು ಕಲಾಮಂದಿರದಲ್ಲಿ ಅಂತಿಮ ಸ್ಪರ್ಧೆ ನಡೆಯಲಿದೆ. ಇವಗಳ ವಿಜೇತರಿಗೆ ಫಲಕ, ಟ್ರೋಫಿ ನೀಡಲಾಗುವುದು ಎಂದರು.

ನೋಂದಣಿಗೆ ಅ.29 ಕೊನೆಯ ದಿನವಾಗಿದ್ದು, ಮಾಹಿತಿ ಹಾಗೂ ನೋಂದಣಿಗೆ 99006 00151, 99026 33652 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಸದಸ್ಯರಾದ ಗೌರವ್ ಸುಧಾ ಮುರಳಿ, ಹರೀಶ್ ಶೆಣೈ, ಗೋಕುಲ್ ಉಪಸ್ಥಿತರಿದ್ದರು.

ಶಾಶ್ವತ ಸೇವಾ ಚಾರಿಟೆಬಲ್ ಟ್ರಸ್ಟ್ ನ.1 ರಂದು ಉದ್ಘಾಟನೆ



ಮೈಸೂರು, ಅ.26(ಜಿಎ)–ಶಾಶ್ವತ ಸೇವಾ ಚಾರಿಟೆಬಲ್ ಟ್ರಸ್ಟ್ ನ.1ರಂದು ಉದ್ಘಾಟನೆಗೊಳ್ಳಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಬಿ.ಲೋಕೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ನಗರದ ಲಲಿತಾದ್ರಿಪುರದ(ಮಾರ್ವೆಲ್ ಪಿ.ಯು. ಕಾಲೇಜು ಎದುರು) ಟ್ರಸ್ಟ್‌ನ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಟ್ರಸ್ಟ್ ಉದ್ಘಾಟಿಸಲಿದ್ದಾರೆ. ಅಮ್ಮ ಇಂಡಿಯಾ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಡಿಎಸ್‌ಸಿ ಡೆಂಟಲ್ ಕೇರ್ ಹಾಗೂ ಜೀವಧಾರ ರಕ್ತ ನಿಧಿ ಸಹಯೋಗದೊಂದಿಗೆ ಏರ್ಪಡಿಸಿರುವ ಉಚಿತ ಆರೋಗ್ಯ ಶಿಬಿರವನ್ನು ಮೇಯರ್ ಶಿವಕುಮಾರ್ ಹಾಗೂ ಉಪಮೇಯರ್ ಜಿ.ರೂಪಾ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಸಂಸದ ಪ್ರತಾಪ್ ಸಿಂಹ ಅತಿಥಿಗಳಾಗಿರುವರು. ಸಾರ್ವಜನಿಕರು ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ಕಣ್ಣಿನ ಪರೀಕ್ಷೆ, ಹಲ್ಲಿನ ಪರೀಕ್ಷೆ ಮಾಡಿಸಿಕೊಳ್ಳಬಹುದು. ರಕ್ತದಾನದಲ್ಲಿಯೂ ಭಾಗಿಯಾಗಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಉಪಾಧ್ಯಕ್ಷ ಬಿ.ಎನ್.ಮಹೇಶ್, ಸಂಚಾಲಕರಾದ ಎಚ್.ರುಕ್ಮಿಣಿ, ಆರ್.ಎನ್.ಗೀತಾ, ಕಾರ್ಯದರ್ಶಿ ಎನ್.ನಾಗಮ್ಮ, ಪಿ.ಪುಷ್ಪಲತಾ, ಖಜಾಂಚಿ ಲಾವಣ್ಯ ಉಪಸ್ಥಿತರಿದ್ದರು.

ನಾಳೆ ಮಹರ್ಷಿ ವಾಲ್ಮೀಕಿ ಜಯಂತಿ

ಕಾರ್ಯಕ್ರಮ ಯಶಸ್ಸಿಗೆ ನಾಯಕರ ಸಂಘದ ಪದಾಧಿಕಾರಿಗಳ ಮನವಿ

ಮೈಸೂರು, ಅ.26(ಜಿಎ)–ಮೈಸೂರು ಜಿಲ್ಲಾಡಳಿತದಿಂದ ನಗರದ ಕಲಾಮಂದಿರದಲ್ಲಿ ಅ.28ರಂದು ನಡೆಯಲಿರುವ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಎನ್.ಮಹದೇವಸ್ವಾಮಿ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ವಾಲ್ಮೀಕಿ ಭಾವಚಿತ್ರವನ್ನು ವಿವಿಧ ಕಲಾ ತಂಡಗಳ ಪ್ರದರ್ಶನದೊಂದಿಗೆ ಮೆರವಣಿಗೆಯಲ್ಲಿ ಕಲಾಮಂದಿರಕ್ಕೆ ತರಲಾಗುತ್ತದೆ. ಬಳಿಕ ನಡೆಯುವ ಸಭಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರಶಾಂತ್ ನಾಯಕ್ ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ, ಕಡಕೊಳ ಕುಮಾರಸ್ವಾಮಿ, ಖಜಾಂಚಿ ಕುಮಾರಬೀಡು ಮರಿಸ್ವಾಮಿ ನಾಯಕ್, ಪತ್ರಿಕಾ ಕಾರ್ಯದರ್ಶಿ ವಿನೋದ್ ನಾಗವಾಲ, ಮುಖಂಡರಾದ ವೀರನಗೆರೆ ದೇವರಾಜು, ಟೆನ್ನಿಸ್ ಗೋಪಿ ಉಪಸ್ಥಿತರಿದ್ದರು.

ಪುನೀತ್ 2ನೇ ಪುಣ್ಯಸ್ಮರಣೆ

ಅ.29ರಂದು ಉಚಿತ ಕಣ್ಣಿನ ತಪಾಸಣಾ ಶಿಬಿರ



ಮೈಸೂರು, ಅ.26(ಜಿಎ)–ರಾಜಕುಮಾರ್ ಕಲಾ ಸೇವಾ ಟ್ರಸ್ಟ್‌ನಿಂದ ಪುನೀತ್ ರಾಜಕುಮಾರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನಗರದ ಪುರಭವನದಲ್ಲಿ ಅ.29ರಂದು ಬೆಳಗ್ಗೆ 7.30ಕ್ಕೆ ಕಣ್ಣಿನ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಜಯರಾಮರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಇಳೈ ಆಳ್ವಾರ್ ಸ್ವಾಮೀಜಿ, ಸಂಸದ ಪ್ರತಾಪ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ ಅವರು ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮಧ್ಯಾಹ್ನ ಅನ್ನಸಂತರ್ಪಣೆ ಆಯೋಜಿಸಲಾಗಿದ್ದು, ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಕಣ್ಣಿನ ತಪಾಸಣಾ ಶಿಬಿರ ಮಧ್ಯಾಹ್ನ 2 ಗಂಟೆವರೆಗೂ ನಡೆಯಲಿದೆ. ಈ ವೇಳೆ ಗಾಯನ ಕಾರ್ಯಕ್ರಮವೂ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಸುಧೀಂದ್ರ, ಶಶಿ, ಸುರೇಶ್, ಶಿವು, ನಂದಕುಮಾರ್ ಉಪಸ್ಥಿತರಿದ್ದರು.

ಅ.29ಕ್ಕೆ 'ದ್ರೋಪತಿ ಹೇಳ್ತವೆ' ನಾಟಕ ಪ್ರದರ್ಶನ

ಮೈಸೂರು, ಅ.26(ಜಿಎ)– ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್‌ನಿಂದ ನಗರದ ಕಿರು ರಂಗಮಂದಿರದಲ್ಲಿ ಅ.29ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ 'ದ್ರೋಪತಿ ಹೇಳ್ತವೆ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎನ್ ಧನುಷ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಕವು ಜನಪದ ಹಾಗೂ ಕುಮಾರವ್ಯಾಸ ಭಾರತದ ಕಥೆಯ ಮಿಶ್ರಣವಾಗಿದೆ. ಗಣೇಶ್ ಮಂದಾರ್ತಿ ಅವರು ನಿರ್ದೇಶನ, ವಿನ್ಯಾಸ ಮತ್ತು ಸಂಗೀತ ನೀಡಿದ್ದಾರೆ. ದ್ರೌಪದಿಯ ಮನೋಭಾವದಲ್ಲಿ ಇಡೀ ಮಹಾಭಾರತವನ್ನು ಕಟ್ಟಿಕೊಡುವ ಪ್ರಯತ್ನವಾಗಿದೆ ಎಂದರು.

ನಾಟಕಕ್ಕೂ ಮುನ್ನ ಮಧ್ಯಾಹ್ನ 3ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ರವೀಶಾಸ್ತ್ರಿ, ಹೋಟೆಲ್ ಮಾಲೀಕರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಾರಾಯಣ ಹೆಗಡೆ, ಬಿ.ಎನ್.ಐ ಸ್ಥಳೀಯ ನಿರ್ದೇಶಕ ಕಿಶೋರ್ ರಾಚಯ್ಯ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.



ಜಗ್ಗೇಶ್, ದರ್ಶನ್, ನಿಖಿಲ್ ಧರಿಸಿದ್ದ ವರ್ಜಿನಲ್ ಹುಲಿ ಉಗುರು ಪತ್ತೆ ಮಾಡಿ; ಕ್ರಮ ಕೈಗೊಳ್ಳಿ

ಅರಣ್ಯ ಇಲಾಖೆಗೆ ಕೆಪಿಸಿಸಿ ವಕ್ತಾರ ಲಕ್ಷ್ಮಣ ಆಗ್ರಹ

ಮೈಸೂರು, ಅ.26(ಬಿಎಲ್‌ಯು)–ಸಂಸದ ಜಗ್ಗೇಶ್, ನಟರಾದ ದರ್ಶನ್ ಹಾಗೂ ನಿಖಿಲ್ ಕುಮಾರಸ್ವಾಮಿ ಧರಿಸಿದ್ದ ಅಸಲಿ ಹುಲಿ ಉಗುರ ಪತ್ತೆ ಮಾಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅರಣ್ಯ ಇಲಾಖೆಯನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಎಂಬುದು ವರ್ತೂರು ಸಂತೋಷ್‌ಗೂ ಒಂದೇ, ದರ್ಶನ್, ಜಗ್ಗೇಶ್ ಹಾಗೂ ನಿಖಿಲ್ ಕುಮಾರಸ್ವಾಮಿಗೂ ಒಂದೇ. ಈ ನಿಟ್ಟಿನಲ್ಲಿ ಇವರು ಧರಿಸಿದ್ದ ವರ್ಜಿನಲ್ ಹುಲಿ ಉಗುರು ಪತ್ತೆ ಮಾಡಿ ಕ್ರಮ ಕೈಗೊಳ್ಳಬೇಕು ಎಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದರು.

ತಮ್ಮ ಮನೆ ಮೇಲೆ ಅರಣ್ಯ ಇಲಾಖೆಯವರು ದಾಳಿ ಮಾಡುವ ಮುನ್ನವೇ ಕುಮಾರಸ್ವಾಮಿ, ತಮ್ಮ ಮಗ ದನದ ಕೊಂಬಿನ ಪೆಂಡೆಂಟ್ ಧರಿಸಿದ್ದ ಎಂದು ಸಮಜಾಯಿಷಿ ನೀಡಿದ್ದಾರೆ. ಅಸಲಿ ಚಿನ್ನದ ಪೆಂಡೆಂಟ್‌ನಲ್ಲಿ ನಕಲಿ ಹೇಗೆ ಧರಿಸುತ್ತೀರಾ ಎಂಬುದು ಅನುಮಾನ ಮೂಡಿಸಿದೆ ಎಂದು ಲಕ್ಷ್ಮಣ್ ಪ್ರಶ್ನಿಸಿದ್ದಾರೆ.



ಕುಮಾರಸ್ವಾಮಿ ಅವರು ಬಾಯಿಗೆ ಬಂದಂತೆ ಮಾತನಾಡುತ್ತಾ ತಮ್ಮ ವರ್ಚಸ್ಸು ತಾವೆ ಕುಗ್ಗಿಸಿಕೊಳ್ಳುತ್ತಿದ್ದಾರೆ. ಮತ್ತೊಬ್ಬ ಒಕ್ಕಲಿಗ ನಾಯಕ ರಾಜಕೀಯವಾಗಿ ಬೆಳೆಯುವುದನ್ನು ಸಹಿಸದೇ ಡಿ.ಕೆ.ಶಿವಕುಮಾರ್ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರರ 80 ಕೋಟಿ ಬಾಕಿ ಉಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎರಡು ಸರ್ಕಾರದ ಅವಧಿಯಲ್ಲಿದ್ದ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಲಕ್ಷ್ಮಣ ಸರ್ಕಾರವನ್ನು ಒತ್ತಾಯಿಸಿದರು.

ರಾಮನಗರ ಈ ಮೊದಲು ಬೆಂಗಳೂರು ವ್ಯಾಪ್ತಿಯಲ್ಲೇ ಇತ್ತು. ತರುವಾಯ ಕುಮಾರಸ್ವಾಮಿ ಅವರೇ ರಾಮನಗರವನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾಡಿದರು. ಈಗ ರಾಮನಗರ ಬೆಂಗಳೂರು ವ್ಯಾಪ್ತಿಗೆ ಸೇರಿದರೆ ಕೈಗಾರಿಕೆಗಳು ಸ್ಥಾಪನೆಯಾಗಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯುತ್ತದೆ. ಭೂಮಿ ಬೆಲೆ ದ್ವಿಗುಣಗೊಂಡು ಜನರ ಜೀವನ ಶೈಲಿ ಕೂಡ ಬದಲಾಗುತ್ತದೆ. ಈ ವಾಸ್ತವ ಅರಿಯದೆ ರಾಮನಗರವನ್ನು ಬೆಂಗಳೂರಿಗೆ ಸೇರಿಸುವುದನ್ನು ಕುಮಾರಸ್ವಾಮಿ ವಿರೋಧಿಸುವುದು ಸರಿಯಲ್ಲ ಎಂದು ಲಕ್ಷ್ಮಣ ಹೇಳಿದರು.

ಬೆಂಗಳೂರು–ಮೈಸೂರು ನಡುವಿನ ನೈಸ್ ಯೋಜನೆಯನ್ನು ಹೆಚ್.ಡಿ. ದೇವೇಗೌಡರ ಕುಟುಂಬ ವಿರೋಧಿಸಿತ್ತು. ನೈಸ್ ಯೋಜನೆ ಹಾದು ಹೋಗಲಿದ್ದ ಪ್ರದೇಶದಲ್ಲಿ ಕುಮಾರಸ್ವಾಮಿ ಕುಟುಂಬದವರ ಬೇನಾಮಿ ಜಮೀನು ಇದ್ದ ಕಾರಣ ವಿರೋಧ ವ್ಯಕ್ತಪಡಿಸಿದ್ದರು. ಈ ವಿಚಾರವನ್ನು ನೈಸ್ ಮುಖ್ಯಸ್ಥ ಅಶೋಕ್ ಖೇಣಿ ಅವರೇ ನ್ಯಾಯಾಲಯಕ್ಕೆ ತಿಳಿಸಿದ್ದಾರೆ ಎಂದರು.

ಪೆನ್ ಡ್ರೈವ್ ಮಾಹಿತಿಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಹೇಳುತ್ತಿದ್ದ ಕುಮಾರಸ್ವಾಮಿ, ಈಗ ಸರಕು ಬಿಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರ ಬತ್ತಳಿಕೆಯಲ್ಲಿ ಏನೇನು ಬಾಣಗಳಿವೆಯೊ ಅದನ್ನು ಬಿಡಲಿ ಎಂದು ಲಕ್ಷ್ಮಣ ಸವಾಲು ಹಾಕಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯ ಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಕಾರ್ಪೊರೇಟರ್ ಶಿವಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.





ಟ್ರೈಲರ್‌ನಲ್ಲಿ ಯತಿರಾಜ್ ಸತ್ಯದರ್ಶನ

ಪತ್ರಕರ್ತ ನಂತರ ಕಲಾವಿದ, ಈಗ ನಿರ್ದೇಶಕನಾಗಿರುವ ಯತಿರಾಜ್ ನಿರ್ದೇಶನದ ಏಳನೇ ಚಿತ್ರ 'ಸತ್ಯಂ ಶಿವಂ'. ಬುಲೆಟ್‌ರಾಜ ಅವರ ನಿರ್ಮಾಣದ ಎರಡನೇ ಚಿತ್ರ ಇದಾಗಿದ್ದು, ಟ್ರೈಲರ್ ಬಿಡುಗಡೆ ಹಾಗೂ ಎರಡು ಹಾಡುಗಳ ಪ್ರದರ್ಶನ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಿರ್ದೇಶಕ ದಯಾಳ್ ಪದ್ಮನಾಭನ್, ಸಂಗೀತ ನಿರ್ದೇಶಕ ವಿ.ಮನೋಹರ್ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಯತಿರಾಜ್, ಸತ್ಯಂ ಶಿವಂ ಎಂದರೆ ಎರಡು ಪಾತ್ರಗಳ ಹೆಸರಲ್ಲ. ನಮ್ಮೊಳಗಿರುವ ಕೆಟ್ಟದ್ದನ್ನು ಹೊರಹಾಕಿ ನಿಶ್ಕಲ್ಮಶ ಮನಸಿನಿಂದ ನೋಡಿದಾಗ ಸತ್ಯದ ದರ್ಶನವಾಗುತ್ತದೆ. ಈ ಮೂಲಕ ಜೀವನದ ಬೆಲೆ ಏನು ಎಂಬುದನ್ನು ಹೇಳಹೊರಟಿದ್ದೇವೆ. ಚಿತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್, ಕ್ರೈಂ, ರೌಡಿಸಂನಂಥ ಕಂಟೆಂಟ್ ಇದ್ದರೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನ ಮಾಡಿದ್ದೇವೆ. 22 ದಿನಗಳ ಕಾಲ ಮೈಸೂರು ಶ್ರೀರಂಗಪಟ್ಟಣ, ನಂದಿಬೆಟ್ಟ ಅಲ್ಲದೆ ಒಂದು ಕ್ಲಬ್‌ನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಅಯ್ಯರ್ ಸ್ಟುಡಿಯೋದಲ್ಲಿ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆದಿದೆ, ಶೂಟಿಂಗ್ ಟೈಂನಲ್ಲಿ ತುಕಾಲಿ ಸಂತು ಹೇಳಿದ ಸಮಯಕ್ಕೆ ಬಾರದೆ ನಮಗೆ ತುಂಬಾ ತೊಂದರೆ ಕೊಟ್ಟರು. ಚಿತ್ರದಲ್ಲಿ ಪ್ರಬುದ್ಧತೆ ಇರುವ ಪಾತ್ರ ನನ್ನದು ಎಂದರು.

ನಾಯಕ ಹಾಗೂ ನಿರ್ಮಾಪಕರೂ ಆಗಿರುವ ಬುಲೆಟ್ ರಾಜು ಈ ಚಿತ್ರದಲ್ಲಿ ಒಬ್ಬ ಸುಪಾರಿ ಕಿಲ್ಲರ್ ಆಗಿ ನಟಿಸಿದ್ದಾರೆ. ಅವರ ಪಾತ್ರದ ಸುತ್ತ ನಡೆಯುವ ಕಥೆ ಚಿತ್ರದಲ್ಲಿದೆ, ನಿರ್ದೇಶಕ ಯತಿರಾಜ್ ಹೇಳಿದ ಹಾಗೆ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಿಕೊಟ್ಟಿದ್ದಾರೆ. ಇದು ನನ್ನ ನಿರ್ಮಾಣದ 2ನೇ ಚಿತ್ರ, ಹೀರೋ ಪಾತ್ರವನ್ನು ಬೇರೆಯವರು ಮಾಡಬೇಕಿತ್ತು, ಅವರು ಕೈಕೊಟ್ಟಿದ್ದರಿಂದ ಕೊನೆಗೇ ನಿರ್ದೇಶಕರೇ ನನ್ನ ಕೈಲಿ ಈ ಪಾತ್ರ ಮಾಡಿಸಿದ್ದಾರೆ, ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವುದಾಗಿ ತಿಳಿಸಿದರು. ಸಂಗೀತ ನಿರ್ದೇಶಕ ವಿ.ಮನೋಹರ್ ಮಾತನಾಡಿ ಚಿತ್ರದಲ್ಲಿ 2 ಹಾಡುಗಳಿದ್ದು, ಕನ್ನಡದವರೇ ಆದ ವಿಶಾಖ ನಾಗಲಾಪುರ, ಪ್ರತಿಮಾ ಭಟ್ ಹಾಗೂ ಮೇಘನಾ ಹಳ್ಳಿಯಾಳ ದನಿಯಾಗಿದ್ದಾರೆ ಎಂದು ಹೇಳಿದರು. ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಹಾಗೂ ಛಾಯಾಗ್ರಾಹಕ ವಿದ್ಯಾ ನಾಗೇಶ್ ಮತ್ತು ನೃತ್ಯ ನಿರ್ದೇಶಕ ಫೈವ್‌ಸ್ಟಾರ್ ಗಣೇಶ್ ತಮ್ಮ ಅನುಭವಗಳನ್ನು ವಿವರಿಸಿದರು. ಚಿತ್ರದ ನಾಯಕಿಯಾಗಿ ಸಂಜನಾ ನಾಯ್ದು ಕಾಣಿಸಿಕೊಂಡಿದ್ದು, ನಟಿ ತೇಜಸ್ವಿನಿ ಯತಿರಾಜ್ ಅವರ ಜೋಡಿಯಾಗಿ ನಟಿಸಿದ್ದಾರೆ. ಜೊತೆಗೆ ಹಿರಿಯ ನಟಿ ಸುಂದರ ಶ್ರೀ ಅವರು ಮುಖ್ಯ ಪಾತ್ರವೊಂದನ್ನು ನಿರ್ವಹಿಸಿದ್ದಾರೆ.



ಎಚ್.ಸಿ.ಹರೀಶ್ ಅವರ 'ಅವನಿ' ಕಾದಂಬರಿಯನ್ನಾಧರಿಸಿ ನಿರ್ಮಾಣವಾಗಿರುವ 'ಮಗ್ಗಿಪುಸ್ತಕ' ಚಿತ್ರದ ಫಸ್ಟ್‌ಲುಕ್ ಅನ್ನು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅನಾವರಣಗೊಳಿಸಿ, ಚಿತ್ರತಂಡಕ್ಕೆ ಶುಭ ಕೋರಿದ್ದಾರೆ. ಚಿನ್ನಾಸ್ವಾಮಿ ಫಿಲಂ ಸಂಸ್ಥೆಯಡಿ ಚಿನ್ನಸ್ವಾಮಿ ಯತಿರಾಜ್ ತಮ್ಮ ಸ್ನೇಹಿತರ ಜೊತೆಗೂಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಹರೀಶ್ ಅವರೇ ಈ ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ 'ಸ.ಹಿ.ಪ್ರಾ. ಶಾಲೆ ಕಾಸರಗೋಡು' ಚಿತ್ರದ ದಡ್ಡಪ್ರವೀಣ ಖ್ಯಾತಿಯ ರಂಜನ್ ಸಜ್ಜು, ಶ್ರೀರಕ್ಷಾ, ಮೈಸೂರು ರಮಾನಂದ, ರಂಗಾಯಣ ರಘು, ಗಿರಿಜಾ ಲೋಕೇಶ್, ಪ್ರಮೋದ್ ಶೆಟ್ಟಿ, ಬಿರಾದಾರ, ಮಿಮಿಕ್ರಿ ಗೋಪಿ, ಚಂದ್ರಪ್ರಭಾ, ವಾಣಿ, ರಾನ್ವಿ ಶೇಖರ್, ಕೃಷ್ಣ ಮಹೇಶ್, ವರದ, ಶ್ರೀನಿವಾಸ್‌ಗೌಡ, ಮೂಗು ಸುರೇಶ್ ಪ್ರಮುಖ ತಾರಾಬಳಗದಲ್ಲಿದ್ದಾರೆ. ಮೈಸೂರು, ಮಂಗಳೂರು, ಎಚ್‌ಡಿ ಕೋಟೆ, ನಂಜನಗೂಡು, ಬೆಂಗಳೂರು ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ನಂದಕುಮಾರ್ ಅವರ ಛಾಯಾಗ್ರಹಣ, ಯಶಸ್ ನಾಚಪ್ಪ ಅವರ ಸಂಗೀತ ಈ ಚಿತ್ರಕ್ಕಿದೆ, ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಮುಂದಿನ ವರ್ಷ ಸಿನಿಮಾವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದೆ.

ಮೊದಲನೋಟ ಒಡೆಯರ್ ಬಿಡುಗಡೆ

ಟೀಸರ್‌ನಲ್ಲಿ 'ಸಪ್ಲೈಯರ್ ಶಂಕರ'ನ ಕಥೆ-ವ್ಯಥೆ

ಗಂಟುಮೂಟೆ, ಟಾಮ್ ಅಂಡ್ ಜೆರ್ರಿ ಖ್ಯಾತಿಯ ನಟ ನಿಶ್ಚಿತ್ ಕೊರೋಡಿ ಈಗ 'ಸಪ್ಲೈಯರ್ ಶಂಕರ್'ನಾಗಿ ಪ್ರೇಕ್ಷಕರ ಮುಂದೆ ಬರಲಿದ್ದಾನೆ. ರಂಜಿತ್‌ಸಿಂಗ್ ರಜಪೂತ್ ಅವರ ನಿರ್ದೇಶನದ 'ಸಪ್ಲೈಯರ್ ಶಂಕರ್' ಚಿತ್ರವೀಗ ಬಿಡುಗಡೆಯ ಹಂತ ತಲುಪಿದ್ದು, ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ತ್ರಿನೇತ್ರ ಫಿಲಂಸ್ ಮೂಲಕ ಎಂ.ಚಂದ್ರಶೇಖರ್ ಹಾಗೂ ನಾಗೇಂದ್ರಸಿಂಗ್ ನಿರ್ಮಾಣದ ಈ ಚಿತ್ರದಲ್ಲಿ ನಿಶ್ಚಿತ್ ಕೆರೋಡಿ ಹಾಗೂ ದೀಪಿಕಾ ಆರಾಧ್ಯ ಜೋಡಿಯಾಗಿ ನಟಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ರಂಜಿತ್, ಬಾರ್ ಸಪ್ಲೆಯರ್ ಒಬ್ಬನ ಜೀವನದಲ್ಲಿ ನಡೆಯುವ ಏರಿಳಿತಗಳ ಕಥೆ ಇದಾಗಿದ್ದು, ಶಂಕರನ ಪಾತ್ರಕ್ಕಾಗಿ ನಾಯಕ ನಿಶ್ಚಿತ್ ಕರೋಡಿ ಅವರು ಬಹಳ ಶ್ರಮಪಟ್ಟಿದ್ದಾರೆ. ನನ್ನ ಕಥೆಗೆ ಜೀವ ತುಂಬಿದ್ದು ನಿರ್ಮಾಪಕರಾದ ಚಂದ್ರಶೇಖರ್ ಹಾಗೂ ನಾಗೇಂದ್ರ ಸಿಂಗ್. ವಿಶೇಷವಾಗಿ ಈ ಚಿತ್ರದಲ್ಲಿ ಹೆಚ್ಚಾಗಿ ಹೊಸಬರ ತಂಡವೇ ಕೆಲಸ ಮಾಡಿದೆ. ಶೀಘ್ರದಲ್ಲೇ ಸಪ್ಲೆಯರ್ ಶಂಕರ ಚಿತ್ರಮಂದಿರಗಳಿಗೆ ಬರುತ್ತಿದ್ದಾನೆ ಎಂದರು. ನಂತರ ನಿರ್ಮಾಪಕರಾದ ಚಂದ್ರಶೇಖರ್ ಹಾಗೂ ನಾಗೇಂದ್ರ ಸಿಂಗ್ ಮಾತನಾಡಿ, ರಂಜಿತ್ ಹೇಳಿದ ಕಥೆ ನಮಗೆ ಇಷ್ಟವಾಗಿ, ಚಿತ್ರನಿರ್ಮಾಣಕ್ಕೆ ಮುಂದಾದೆವು. ಸದ್ಯದಲ್ಲೇ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ನಂತರ ನಾಯಕ ನಿಶ್ಚಿತ್ ಕರೋಡಿ ಮಾತನಾಡುತ್ತಾ, ನಾನು ಈ ಹಿಂದೆ ಗಂಟುಮೂಟೆ ಹಾಗೂ ಟಾಮ್ ಅಂಡ್ ಜೆರ್ರಿ ಚಿತ್ರಗಳಲ್ಲಿ ನಟಿಸಿದ್ದೆ. ಇದು ನನ್ನ ಮೂರನೇ ಚಿತ್ರ. ನಿರ್ದೇಶಕ ರಂಜಿತ್ ಒಳ್ಳೆಯ ಕಥೆ ಮಾಡಿಕೊಂಡಿದ್ದರು, ನಾನಿಲ್ಲಿ ಬಾರ್ ಸಪ್ಲೇಯರ್ ಶಂಕರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಹಾಗಂತ ಚಿತ್ರದಲ್ಲಿ ಬರೀ ಸಪ್ಲೇಯರ್ ಕಥೆ ಮಾತ್ರವಲ್ಲ. ಕಾಮಿಡಿ, ಸೆಂಟಿಮೆಂಟ್, ಲವ್, ಥ್ರಿಲ್ಲರ್ ನಂಥ ಎಲ್ಲ ಮನರಂಜನಾತ್ಮಕ ಅಂಶಗಳೂ ಇವೆ ಎಂದರು. ನಾಯಕಿ ದೀಪಿಕಾ ಆರಾಧ್ಯ ಮಾತನಾಡುತ್ತಾ, ಈ ಚಿತ್ರದಲ್ಲಿ ನಾನು ಒಬ್ಬ ಶಿಕ್ಷಕಿಯ ಪಾತ್ರ ಮಾಡಿರುವುದಾಗಿ ಹೇಳಿದರು ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಟೈಟಲ್ ಹೇಳುವಂತೆ ಒಬ್ಬ ಬಾರ್ ಸಪ್ಲೈಯರ್ ಸುತ್ತ ಇಡೀ ಚಿತ್ರದ ಕಥೆ ಸಾಗುತ್ತದೆ. ಗೋಪಾಲಕೃಷ್ಣ ದೇಶಪಾಂಡೆ, ಜ್ಯೋತಿರೈ, ನವೀನ್ ಡಿ.ಪಡಿಲ್ ಸೇರಿದಂತೆ ಒಂದಷ್ಟು ಹೊಸ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ.

'ಸೈಕಲ್ ಸವಾರಿ' ಉತ್ತರ ಕರ್ನಾಟಕ ಸೊಗಡಿನ ಚಿತ್ರ

ಮಿಠಾಯಿ ಮಾರುವ ಬಡ ಯುವಕ, ಶ್ರೀಮಂತ ಯುವತಿಯ ಮಧ್ಯೆ ಆಗುವ ಪ್ರೀತಿ, ಮುಂದೆ ಅದರಿಂದಾಗುವ ಸಮಸ್ಯೆಗಳನ್ನು ಒಳಗೊಂಡ ದುರಂತ ಪ್ರೇಮ ಕಥೆಯೊಂದಿಗೆ ಹೇಳುವ ಚಿತ್ರವೇ 'ಸೈಕಲ್ ಸವಾರಿ', ನ.3ರಂದು ರಾಜ್ಯಾದ್ಯಾಂತ 30ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಈ ಚಿತ್ರ ತೆರೆಗೆ ಬರಲಿದೆ. ಊರಲ್ಲಿ ಬಾಂಬೆ ಮಿಠಾಯಿ ಮಾರಿಕೊಂಡಿರುವ ಹುಡುಗನನ್ನು ಶ್ರೀಮಂತ ಮನೆತನದ ಹುಡುಗಿಯೊಬ್ಬಳು ಈತನ ಹಿಂದೆ ಬಿದ್ದು ಲವ್ ಮಾಡುತ್ತಾಳೆ. ಅದು ಹುಡುಗಿಯ ಮನೆಯವರಿಗೆ ಗೊತ್ತಾದಾಗ ಏನೆಲ್ಲಾ ನಡೆಯುತ್ತೆ ಅನ್ನೋದನ್ನು ಚಿತ್ರದಲ್ಲಿ ನೋಡಬಹುದು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಸಿನಿಮಾದ ನಾಯಕ ಹಾಗೂ ನಿರ್ದೇಶಕ ದೇವು ಕೆ. ಅಂಬಿಗಾ ಮಾತನಾಡಿ, ನಾವೆಲ್ಲ ಬಿಜಾಪುರ ಮೂಲದವರು, ಉತ್ತರ ಕರ್ನಾಟಕ ಸೊಗಡಿನ ಭಾಷೆಯನ್ನು ನಮ್ಮ 'ಸೈಕಲ್ ಸವಾರಿ' ಸಿನಿಮಾದಲ್ಲಿ ಕಾಣಬಹುದು. ಚಿತ್ರದಲ್ಲಿ ಉತ್ತರ ಕರ್ನಾಟಕದ ಕಲಾವಿದರಿಗೆ ಹೆಚ್ಚು ಅವಕಾಶ ನೀಡಿದ್ದೇವೆ. ಅಲ್ಲದೆ ಸಿನಿಮಾದಲ್ಲಿ ನಾಯಕನ ಪಾತ್ರವನ್ನು ನಾನೇ ನಿಭಾಯಿಸಿದ್ದೇನೆ. ನಾಯಕಿಯಾಗಿ ವಿಜಯಪುರ ಮೂಲದ ದೀಕ್ಷಾ ಬೀಸೆ ಕಾಣಿಸಿಕೊಂಡಿದ್ದಾರೆ. ಭರತನಾಟ್ಯ ಕಲಾವಿದೆಯಾದ ದೀಕ್ಷಾ ಮೊದಲ ಬಾರಿಗೆ ನಟಿಸಿದ್ದಾರೆ, ಈ ಸಿನಿಮಾದಲ್ಲಿ ಐದು ಮೆಲೋಡಿ ಹಾಡುಗಳಿದ್ದು, ಸಿನಿಮಾದ ಕಥೆಗೆ ಪೂರಕವಾಗಿ ಮೂಡಿಬಂದಿವೆ. ರೋಹನ್ ದೇಸಾಯಿ ಅವರು ಚಿತ್ರದ ಸಂಗೀತ ಸಂಯೋಜನೆ ಹಾಗೂ ಛಾಯಾಗ್ರಹಣ ನಿಭಾಯಿಸಿದ್ದು, ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಚಿತ್ರೀಕರಣ ಮಾಡಲಾಗಿದೆ ಎಂದು ತಿಳಿಸಿದರು. ಲಾಕ್ಡೌನ್ ಸಂದರ್ಭದಲ್ಲಿ ಕಿರುಚಿತ್ರ ಮಾಡಬೇಕೆಂದು ಈ ಕಥೆಯನ್ನು ರೆಡಿಮಾಡಿಕೊಂಡಿದ್ದೆ. ನಂತರ ನಿರ್ಮಾಪಕ ಸುರೇಶ ಶಿವೂರ ಹಾಗೂ ಪೋಸ್ಟ್ ಪ್ರೊಡಕ್ಷನ್ ಸಂದರ್ಭದಲ್ಲಿ ಲೋಕೇಶ ಸವದಿ ಅವರು ನೀಡಿದ ಸಹಕಾರದಿಂದ ಸಿನಿಮಾ ದೊಡ್ಡ ಪ್ರಮಾಣದಲ್ಲಿಯೇ ನಿರ್ಮಾಣವಾಯಿತು. ಈಗಾಗಲೇ ನಮ್ಮ ಚಿತ್ರದ ಟ್ರೈಲರ್ ಹಾಗೂ ಹಾಡುಗಳನ್ನು ಕೇಳಿದ ಎಲ್ಲರೂ ಮೆಚ್ಚಿಕೊಂಡಿದ್ದಾರೆ, ಸಿನಿಮಾ ಕೂಡ ಅದೇ ರೀತಿ ಎಲ್ಲರಿಗೂ ಇಷ್ಟವಾಗುವಂತಿದೆ. ಖಳನಾಯಕನ ಪಾತ್ರದಲ್ಲಿ ವಿನೋದ್ ಹಿರೇಮಠ ಹಾಗೂ ಶಿವಾಜಿ ಅವರು ಕಾಣಿಸಿಕೊಂಡಿದ್ದು, ಉತ್ತಮ ಪಾತ್ರ ನಿರ್ವಹಣೆ ಮಾಡಿದ್ದಾರೆ. ಚಿತ್ರದ ಮತ್ತೊಬ್ಬ ನಾಯಕಿಯಾಗಿ ಕಾವ್ಯ ಹಾಗೂ ನಾಯಕನ ತಾಯಿಯ ಪಾತ್ರದಲ್ಲಿ ಗೀತಾ ರಾಘವೇಂದ್ರ ಅವರು ನಟಿಸಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ನಿರ್ಮಾಪಕ ಲೋಕೇಶ್ ಸವದಿ, ಆನಂದ ಕಾಂಬಳೆ, ರಾಮಚಂದ್ರ ಹಂಜಿಗಿ, ವಿನೋದ ಹಿರೇಮಠ ಮುಂತಾದವರಿದ್ದರು.

ಸಿನಿಪದಬಂಧ-497

1		2		3		4		■	■	■
	■		■		■		■	5	■	■
	■	6			■	■	■		■	7
	■		■		■	8	■	9		
	■	■	10		11			■	■	
12			■	■		■	■	13		
	■	■	14	15		16		■	■	
17		18	■		■		■	19	■	
	■		■	■	■	20			■	
■	■		■	21	■		■		■	
■	■	■	22							

ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಚಿರಂತ್, ನಂ. 287, ಎಂ.ಎಸ್. ಜೋಯಿಸ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು-24

ಎಡದಿಂದ ಬಲಕ್ಕೆ

1. ಕನ್ಯೆಯೊಬ್ಬಳಿಗೆ ಮೂರು ಜನರ ದೃಷ್ಟಿ ಬೀಳಲು ಮಧುಸೂದನರಾವ್ ನಿರ್ದೇಶಕ 8
6. ದೇವರಾಜ್ ವ್ಯಾಘ್ರ ರೂಪದವನು 3
9. ರುದ್ರನಾಗ ಚಿತ್ರದ ನಾಯಕಿ 3
10. ಕೆ.ಶಿವರಾಮಕಾರಂತರ ಬೆಟ್ಟದಿ ಕಾಣಿಸಿಕೊಂಡವರಿಗೆ ಇಲ್ಲಿ ಒಂದಕ್ಷರವಿಲ್ಲ 5
12. ಬಿದಿರಿನ ಬುಟ್ಟಿಗೆ ಹೀಗೊಂದು ಹೆಸರಿರಲು ನಟಿಯೊಬ್ಬಳು ಪ್ರತ್ಯಕ್ಷ! 3
13. ಶಿವಣ್ಣ ಗಂಡು ಕುರಿ 3
14. ರವಿಚಂದ್ರನ್ ಹೇಳಿದ ಹುಸಿಗಳ ಸಂಖ್ಯೆ 5
17. ಪ್ರಜ್ವಲ್ ದೇವರಾಜ್ ಸೇವಕ 3
20. ಸಿರಿಯ ಜೊತೆಗಿನ ಶ್ರೀಗಂಧ 3
22. ನಮ್ಮ ರಾಜಧಾನಿಯೊಳಗೆ ಪ್ರೀತಿ ಸೇರಿಕೊಂಡಿದೆ 8

ಮೇಲಿನಿಂದ ಕೆಳಕ್ಕೆ

1. ಅವಳಿಜವಳಿಯಾದರೂ ಸ್ವಭಾವದಲ್ಲಿ ವ್ಯತ್ಯಾಸವಿದೆ 9
2. ಕನ್ನಡದ ಲೇಡಿ ಟೈಗರ್ 4
3. ನಳಿನಿ ನೇಯ್ದ ಜಾಲ 5
4. ಇಂದ್ರಜಿತ್ ಕ್ಲೈಮ್ಯಾಕ್ಸ್‌ನಲ್ಲಿ ಎತ್ತಿದ ಅವತಾರ 2
5. ವಿಷ್ಣುವರ್ಧನ್- ಭಾರತಿ ಅಭಿನಯದ ವಿಗ್ರಹ ರೂಪದವಳು 3
7. ಗಂಡ ಹೆಂಡತಿ, ಎರಡು ಮಕ್ಕಳಿರಲು ಚಿತ್ರವೊಂದು ಸಿಗುತ್ತದೆ 9
8. ಮಾಲಾಶ್ರೀ ಹಿರಿಯ ಸೋದರಿ 2
11. ಅಂಬರೀಷ್ ಅಭಿನಯದ ಹೊಟ್ಟೆಕಿಚ್ಚು 3
15. ಶಿವಣ್ಣನ ಜಗತ್ತು 2
16. ಮಯೂರಿ ಎಂದೊಡನೆ ನೆನಪಾಗುವ ನಟಿ 5
18. ಮನ ಮೆಚ್ಚಿದ "ಸತಿ" 3
19. ಅಂಬಿಯ ಸದ್ದಿಲ್ಲದ ಹಾಡು 4
21. ಆದಿತ್ಯ-ರಕ್ಷಿತಾ ಅಭಿನಯದಲ್ಲಿನ ಆಂಗ್ಲ ಪ್ರೇಮ 2



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 496ರ ಉತ್ತರ

ನ	ವ	ರಾ	ತ್ರಿ	■	ಮೈ	ಸೂ	ರು	ದ	ಸ	ರಾ
ವ	■	■	■	■	ಹಿ	■	■	■	■	ಜಾ
ದು	ರ್ಗಾ	ಷ್ಟ	ಮಿ	■	ಷಾ	■	ಬೃಂ	ದಾ	ವ	ನ
ರ್ಗಾ	■	■	ಶ	■	ಸು	■	■	■	■	ನ್ನ
■	ಅಂ	ದ	ದ	ಅ	ರ	ಮ	ನೆ	■	ತಾ	ರಾ
■	ಬಾ	■	ಯ	■	ಮ	■	ನ	■	■	ಜಾ
ಕ	ರಿ	■	ಜ	■	ರ್ದಿ	■	ಪಿ	■	ರ	■
■	■	■	ವಿ	■	ನಿ	■	ರ	ಣ	ಧೀ	ರ
ಚಂ	ದ್ರ	ಮ	■	ಮ	■	ನ	ಲಿ	■	■	ಥಾ
ದ	■	■	■	ಯೂ	■	■	■	ಲಿ	■	ವ
ನ	ಮ್ಮ	ಸಂ	ಸಾ	ರ	ಆ	ನಂ	ದ	ಸಾ	ಗ	ರ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನುಗು ಮೀನು ಮರಿ ಉತ್ಪಾದನೆ ಕೇಂದ್ರ ಅಭಿವೃದ್ಧಿಗೆ ಸಹಕಾರ

● ಸಚಿವ ಮಂಕಾಳ ಎಸ್.ವೈದ್ಯ ಭರವಸೆ ● ನುಗು ಮೀನುಮರಿ ಉತ್ಪಾದನೆ ಕೇಂದ್ರಕ್ಕೆ ಭೇಟಿ

ಸರಗೂರು, ಅ.26–ನುಗು ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರದ ಅಭಿವೃದ್ಧಿಗೆ ಇಲಾಖೆಯಿಂದ ಸಹಕಾರ ನೀಡಲಾಗುವುದು ಎಂದು ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಮಂಕಾಳ ಎಸ್.ವೈದ್ಯ ಭರವಸೆ ನೀಡಿದರು.

ತಾಲೂಕಿನ ನುಗು ಮೀನು ಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿ ಮಾತನಾಡಿದ ಅವರು, ಮೀನುಮರಿ ಉತ್ಪಾದನೆ ಮತ್ತು ಪಾಲನೆಯಲ್ಲಿ ರಾಜ್ಯದಲ್ಲೇ 2ನೇ ಸ್ಥಾನದಲ್ಲಿರುವ ನುಗು ಕೇಂದ್ರವನ್ನು ಅಭಿವೃದ್ಧಿ ಪಡಿಸಲು ಇಲಾಖೆ ವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು. ಹೆಚ್ಚು ನೀರು ಇರುವ ಈ ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನೆರವು ನೀಡಲಿದ್ದಾರೆ ಎಂದು ತಿಳಿಸಿದರು.

ಇದೀಗ 30 ಎಕರೆ ಪ್ರದೇಶದಲ್ಲಿ ಮೀನು ಮರಿ ಉತ್ಪಾದನೆ ಮಾಡಲಾಗುತ್ತಿದೆ. ಕೃಷಿ ಇಲಾಖೆಯ 10 ಎಕರೆ ಜಾಗ ಖಾಲಿ ಇರುವುದರಿಂದ ಇದನ್ನು ಸಹ ಮೀನುಗಾರಿಕೆ ಇಲಾಖೆ ಹೆಸರಿಗೆ ಕೂಡಲೇ ಹಸ್ತಾಂತರಿಸಲಾಗುವುದು. ಇದರಿಂದ 40 ಎಕರೆ ಪ್ರದೇಶ ಇಲಾಖೆಗೆ ಸೇರಿದರೆ ಹೆಚ್ಚು ಅಭಿವೃದ್ಧಿಗೆ ಅಧಿಕಾರಿಗಳು ಕ್ರಮವಹಿಸಬೇಕು. ಆಗ ಅಭಿವೃದ್ಧಿಗೊಳಿಸಲು ಸಹಕಾರವಾಗಲಿದ್ದು, ಮೀನುಮರಿ ಉತ್ಪಾದನೆ ತರಬೇತಿ ಕೇಂದ್ರವನ್ನೂ ಸ್ಥಾಪನೆ ಮಾಡಲು ಅನುಕೂಲವಾಗಲಿದೆ ಎಂದರು.



ಸರಗೂರಿನ ನುಗು ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರದ ಉಪನಿರ್ದೇಶಕ ಮಹದೇವ್ ಮಾತನಾಡಿ, 5 ವಿವಿಧ ತಳಿಗಳ ಮೀನುಮರಿಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. 2023–24ನೇ ಸಾಲಿನಲ್ಲಿ ಹದಿನಾಲ್ಕುವರೆ ಕೋಟಿ ಸ್ಪಾನ್ ಮೀನುಮರಿ, 50 ಲಕ್ಷ ಬಿತ್ತನೆ ಮರಿ, ಎರಡೂವರೆ ಲಕ್ಷ ಕಿರುಮೀನು ಮರಿಗಳನ್ನು ರೈತರು, ಮೀನು ಸಾಕಣಿಕೆ ಕೇಂದ್ರಗಳಿಗೆ ಮಾರಾಟ ಮಾಡಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಸಚಿವ ಮಂಕಾಳ ಎಸ್.ವೈದ್ಯ, ಸ್ಪಾನ್ ಮೀನು ಮರಿ, ಬಿತ್ತನೆ ಮೀನು ಮರಿ, ಕಿರು ಮೀನುಮರಿ ಉತ್ಪಾದನೆ ಘಟಕಗಳಿಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ನಂತರ ಮೀನು ಮರಿ ಕೊಳಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

> ಕಾಡಿನಿಂದ ಆನೆಗಳು ಬರುವ ಸ್ಥಳಗಳನ್ನು ಗುರುತಿಸಿ ಕಂದಕ ಹಾಗೂ ಸೋಲಾರ್ ಬೇಲಿ ನಿರ್ಮಿಸಲು ಗಮನ ಹರಿಸಲಾಗುವುದು. ಮುಂದಿನ ದಿನಗಳಲ್ಲಿ ಇಲಾಖೆಯ ಸಿಬ್ಬಂದಿಗೆ ಹೆಚ್ಚಿನ ಸೌಲಭ್ಯ ಒದಗಿಸಲಾಗುವುದು.
> –ಮಂಕಾಳ ಎಸ್.ವೈದ್ಯ, ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ.

ಮೀನುಗಾರಿಕೆ ಇಲಾಖೆಯ ನಿರ್ದೇಶಕ ದಿನೇಶ್ ಕುಮಾರ್ ಕಲ್ಲೇರ್, ಮೈಸೂರು ವಲಯದ ಜಂಟಿ ನಿರ್ದೇಶಕ ಗಣೇಶ್, ತಾಲೂಕಿನ ನುಗು ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರದ ಸಹಾಯಕ ನಿರ್ದೇಶಕ ನಾಗರಾಜು, ಎಫ್‌ಡಿಎ ಗೋಪಾಲಕೃಷ್ಣ, ಮೇಲ್ವಿಚಾರಕ ನಟರಾಜು, ಸಚಿವರ ಆಪ್ತ ಕಾರ್ಯದರ್ಶಿ ಪಿ.ಸಿ.ರವೀಂದ್ರ, ಅಂಗರಕ್ಷಕ ನಾಗರಾಜ್, ಚಾಲಕ ರಾಜು, ಕ್ಷೇತ್ರಪಾಲಕ ಸಿಬ್ಬಂದಿ ಪಾಂಡುರಂಗ, ಮಂಜುನಾಥ್, ಮರಿಸ್ವಾಮಿ, ಶಂಕರ್, ಹೀರನಾಯಕ, ನಿಂಗಶೆಟ್ಟಿ, ಶಿವಮಲ್ಲು ಹಾಜರಿದ್ದರು.

ನಾಳೆ ನಂಜನಗೂಡಿನಲ್ಲಿ ಅದ್ಧೂರಿ ವಾಲ್ಮೀಕಿ ಜಯಂತಿ



ನಂಜನಗೂಡು, ಅ.26–ತಾಲೂಕು ಆಡಳಿತ ಮತ್ತು ತಾಲೂಕು ನಾಯಕರ ಸಂಘದ ವತಿಯಿಂದ ಅ.28ರಂದು ನಗರದಲ್ಲಿ ಅದ್ಧೂರಿಯಾಗಿ ವಾಲ್ಮೀಕಿ ಜಯಂತಿ ಆಚರಣೆ ನಡೆಸಲಾಗುವುದು ಎಂದು ನಾಯಕರ ಸಂಘದ ಗೌರವಾಧ್ಯಕ್ಷ ಸಿ.ಚಿಕ್ಕರಂಗ ನಾಯಕ ಹೇಳಿದರು.

ಕಳೆದ 3 ವರ್ಷಗಳಿಂದ ಕೊರೊನಾ ಮತ್ತು ಶೇ.7.5ರಷ್ಟು ಮೀಸಲಾತಿ ಹೆಚ್ಚಿಸುವಂತೆ ಬಹಿಷ್ಕರಿಸಿದ್ದರಿಂದ ವಾಲ್ಮೀಕಿ ಜಯಂತಿಯನ್ನು ಸರಳ ಆಚರಣೆಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಈ ಬಾರಿ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ. ಅ.28ರ ಬೆಳಗ್ಗೆ 9 ಗಂಟೆಗೆ ಜನಗರದ ಜ್ಯೂನಿಯರ್ ಕಾಲೇಜು ಮೈದಾನದಿಂದ ವಾಲ್ಮೀಕಿ ಮಹರ್ಷಿ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ವಿಶೇಷ ಸಾರೋಟ್‌ನಲ್ಲಿ ಮೆರವಣಿಗೆ ಮಾಡಲಾಗುವುದು. ಮಧ್ಯಾಹ್ನ 12 ಗಂಟೆಗೆ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಕಲಾಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿಜೆ ಬೇಡ: ಕಳೆದ ಬಾರಿ ಸಮಾಜದ ವತಿಯಿಂದ ಪ್ರತಿ ಗ್ರಾಮಗಳಿಗೆ ತೆರಳಿ ಸಮಾಜದ ಮುಖಂಡರು ಹಾಗೂ ಯಜಮಾನರನ್ನು ಆಹ್ವಾನಿಸಲಾಗಿತ್ತು. ಈ ಬಾರಿ ಸಮಯದ ಅಭಾವದಿಂದಾಗಿ ಖುದ್ದಾಗಿ ಆಹ್ವಾನ ನೀಡಲು ಸಾಧ್ಯವಾಗುತ್ತಿಲ್ಲ. ಪ್ರತಿ ಗ್ರಾಮಸ್ಥರನ್ನು ಕರಪತ್ರ ಮತ್ತು ಮಾಧ್ಯಮಗಳ ಮೂಲಕ ಆಹ್ವಾನಿಸಲಾಗುತ್ತಿದ್ದು, ಸಮಾಜದ ಮುಖಂಡರು ಆಗಮಿಸಬೇಕು. ಕೆಲ ವರ್ಷಗಳ ಹಿಂದೆ ಡಿಜೆಯಿಂದ ಅನೇಕ ಅವಘಡ ಸಂಭವಿಸಿರುವ ಕಾರಣ ಈ ಬಾರಿ ಡಿಜೆ ಸೌಂಡ್‌ಗೆ ನಿರ್ಬಂಧ ಹೇರಲಾಗಿದೆ. ಸಮಾಜದವರು ಡಿಜೆ ತರಬಾರದು, ಬದಲಾಗಿ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಶಿಸ್ತಿನಿಂದ ಭಾಗವಹಿಸಬೇಕು ಎಂದು ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ನಾಯಕರ ಸಂಘದ ಅಧ್ಯಕ್ಷ ಬಂಗಾರಸ್ವಾಮಿ, ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಖಜಾಂಚಿ ರಂಗಸ್ವಾಮಿ, ಮುಖಂಡರಾದ ದೊರೆಸ್ವಾಮಿ ನಾಯಕ, ಶಿವಕುಮಾರ್, ಚಂದ್ರು, ಮಹದೇವ ನಾಯಕ ಇದ್ದರು.

ಕೆ.ಆರ್.ನಗರದಲ್ಲಿ ವಿಜೃಂಭಣೆಯ ಗಣಪತಿ ವಿಸರ್ಜನೆ

ಕೆ.ಆರ್.ನಗರ: ಪಟ್ಟಣದ ಪುರಸಭೆ ಬಯಲು ರಂಗಮಂದಿರದಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿ ಮೂರ್ತಿ ವಿಸರ್ಜನೆಯ ಮೆರವಣಿಗೆ ಬುಧವಾರ ವಿಜೃಂಭಣೆಯಿಂದ ನಡೆಯಿತು.

ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅಲಂಕೃತಗೊಂಡ ತೆರೆದ ವಾಹನದಲ್ಲಿ ಗಣಪತಿ ಮೂರ್ತಿಯನ್ನು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ಹಳೇ ಎಡತೊರೆಯ ಅರ್ಕೇಶ್ವರಸ್ವಾಮಿ ದೇವಸ್ಥಾನದ ಬಳಿಯ ಕಾವೇರಿ ನದಿಯಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ವಿಸರ್ಜಿಸಲಾಯಿತು.



ಮಹಾಗಣಪತಿ ಸೇವಾ ಸಮಿತಿಯ 64ನೇ ವರ್ಷದ ಅಂಗವಾಗಿ 10 ದಿನ ರಾಜ್ಯಮಟ್ಟದ ಪೌರಾಣಿಕ ನಾಟಕ ಸ್ಪರ್ಧೆ ಏರ್ಪಡಿಸಲಾಗಿತ್ತು ಜತೆಗೆ ಅನ್ನಸಂತರ್ಪಣೆ ಕಾರ್ಯಕ್ರಮ ಸೇರಿದಂತೆ ವಿವಿಧ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ವಿಧಾನಪರಿಷತ್ ಸದಸ್ಯರಾದ ಉಮಾಶ್ರೀ, ಎಚ್.ವಿಶ್ವನಾಥ್, ಶಾಸಕ ಡಿ.ರವಿಶಂಕರ್ ಬುಧವಾರ ರಾತ್ರಿ ನಡೆದ ಸಮಾರಂಭದಲ್ಲಿ ನಾಟಕ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿದರು.

ಉಮಾಶ್ರೀ ಮಾತನಾಡಿ, ಪೌರಾಣಿಕ ನಾಟಕಗಳು ಮನುಷ್ಯನ ಬದುಕಿಗೆ ಹತ್ತಿರವಾಗಿವೆ. ಉತ್ತಮವಾದ ಜೀವನ ನಡೆಸಲು ಮಾರ್ಗದರ್ಶನ ಮಾಡಲಿವೆ. ನಾಟಕ ಆಯೋಜನೆ ಮಾಡಿದ ಸೇವಾ ಸಮಿತಿ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನರಿಗೆ ಉಪಯುಕ್ತವಾದ ಕಾರ್ಯಕ್ರಮಗಳನ್ನು ನೀಡಿ ಜತೆಗೆ ನುಡಿದಂತೆ ನಡೆಯುತ್ತಿದೆ. ಇದರಿಂದ ಸರ್ಕಾರ ದೇವರ ಕೃಪೆಯಿಂದ ಜನರ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಗಿದೆ. ಶಾಸಕ ರವಿಶಂಕರ್ ಉತ್ತಮ ಆಡಳಿತ ಮತ್ತು ಅಭಿವೃದ್ಧಿ ಕೆಲಸ ಮಾಡಲು ಎಲ್ಲರೂ ಸಹಕಾರ ನೀಡಬೇಕು ಎಂದರು.

ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಮೂಳೆತಜ್ಞ ಡಾ.ಮೆಹಬೂಬ್‌ಖಾನ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಅರುಣ್ ಕುಮಾರ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಮಹಾಗಣಪತಿ ಸೇವಾ ಸಮಿತಿ ಅಧ್ಯಕ್ಷ ತಮ್ಮನಾಯಕ, ಪದಾಧಿಕಾರಿಗಳಾದ ಕೆ.ಜಿ.ಸುಬ್ರಹ್ಮಣ್ಯ, ಹೆಚ್.ಸಿ.ರಾಜು, ಗುರುಶಂಕರ್, ಎಸ್.ಯೋಗಾನಂದ್, ಶ್ರೀನಿವಾಸ್, ಜಿ.ರಮೇಶ್, ಪ್ರಕಾಶ್, ಐಸ್‌ಕ್ರೀಮ್ ಸತೀಶ್, ನಾಗರಾಜನಾಯಕ, ಆನಂದ್, ಗಣಪತಿ ರವಿ, ಜಾನಪದ ಪರಿಷತ್ತಿನ ಪದಾಧಿಕಾರಿಗಳಾದ ಸೈಯದ್ ರಿಜ್ವಾನ್, ರಾಜಯ್ಯ, ತಿಮ್ಮಶೆಟ್ಟಿ, ವ್ಯಾನ್ ಸುರೇಶ್, ಕಾಂತರಾಜು ಮುಂತಾದವರು ಹಾಜರಿದ್ದರು.

ಕೇಂದ್ರ ಸರ್ಕಾರದಿಂದ ರೈತರನ್ನು ಉದ್ದಿಮೆದಾರರನ್ನಾಗಿಸುವ ಉದ್ದೇಶ



ತಿ.ನರಸೀಪುರ, ಅ.26–ಕುರಿ ಮತ್ತು ಮೇಕೆ ಉತ್ಪಾದಕ ಕಂಪನಿ ನೋಂದಾಯಿತ ರೈತ ಉತ್ಪಾದಕ ಸಂಸ್ಥೆಯಾಗಿದ್ದು, ಕೇಂದ್ರ ಸರ್ಕಾರ ರೈತರನ್ನೇ ಉದ್ದಿಮೆದಾರರನ್ನಾಗಿ ಮಾಡಬೇಕೆಂಬ ಉದ್ದೇಶ ಹೊಂದಿದೆ ಎಂದು ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕ ಡಾ.ನಾಗರಾಜು ಹೇಳಿದರು.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಜಿಲ್ಲಾ ಪಂಚಾಯಿತಿ ಹಾಗೂ ಮೈರಾಡ ಕಾವೇರಿ ಪ್ರಾದೇಶಿಕ ಸಂಸ್ಥೆ ವತಿಯಿಂದ ಗುರುವಾರ ನಡೆದ ತಿ.ನರಸೀಪುರ ಕುರಿ ಮತ್ತು ಮೇಕೆ ರೈತ ಉತ್ಪಾದಕ ಕಂಪನಿಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಗುರುತಿಸಿ ಮೀನುಗಾರಿಕೆ, ತೋಟಗಾರಿಕೆ, ರೇಷ್ಮೆ, ಪಶುಪಾಲನೆ ಇಲಾಖೆಯನ್ನು 2 ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಕುರಿ ಮತ್ತು ಉಣ್ಣೆ ನಿಗಮದ ವತಿಯಿಂದ ನಿರ್ವಹಣೆ ಮಾತಿಲಾಗುತ್ತಿದೆ ಎಂದು ತಿಳಿಸಿದರು.

ಹಣಕಾಸು ಸಹಕಾರ ನೀಡುವ ಜತೆಗೆ ಮೈರಾಡ ಸಂಸ್ಥೆಯ ಮುಂದಾಳತ್ವದಲ್ಲಿ ಕಂಪನಿಯನ್ನು ಮುನ್ನಡೆಸಲಾಗುತ್ತಿದೆ. ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲು ಕಂಪನಿಯ ಮುಖ್ಯ ಉದ್ದೇಶವಾಗಿದೆ. ಅರಿವು ಮೂಡಿಸಿದ ನಂತರ 20 ಆಸಕ್ತ ರೈತರ ಗುಂಪು ಮಾಡಿ, ಅವರಲ್ಲಿ ಒಬ್ಬರನ್ನು ನಿರ್ದೇಶಕರನ್ನಾಗಿ ಮಾಡಲಾಗುವುದು. ತಾಲೂಕಿನಲ್ಲಿ 15 ರಿಂದ 20 ಗುಚ್ಚ ಗ್ರಾಮಗಳನ್ನು ಮಾಡಿದ್ದು, ಎಲ್ಲಾ ಗ್ರಾಮದಲ್ಲಿ ಅರಿವು ಮೂಡಿಸಿ ಸಂಘಟಿತರನ್ನಾಗಿ ಮಾಡಿ ನಂತರ ಷೇರುದಾರರನ್ನಾಗಿ ಮಾಡಲಾಗುವುದು. ಷೇರುದಾರರ ಸಂಖ್ಯೆ 300 ದಾಟುತ್ತಿದ್ದಂತೆ ಸರ್ಕಾರದಿಂದಲೇ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಯ್ಕೆ ಮಾಡಿ, ಅರಿವು ಕಾರ್ಯಕ್ರಮಕ್ಕೆ ಹಣಕಾಸಿನ ನೆರವು ಹಾಗೂ ಪ್ರವಾಸ ವೆಚ್ಚವನ್ನು ನೀಡಲಾಗುವುದು ಎಂದರು.

ಗಂಗಾ ಚಾರಿಟಬಲ್ ಅಧ್ಯಕ್ಷರಾಜ್ ಕಾಮಯ್ಯ ಮಾತನಾಡಿದರು. ಕಂಪನಿ ಅಧ್ಯಕ್ಷ ಉಮಾಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಎಂ.ಶಾಂತ, ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ವಿನಯ್ ಸಿಂಗ್ ರಾವತ್, ಆರ್ಥಿಕ ಸಾಕ್ಷರತಾ ಸಲಹೆಗಾರ ಎಸ್.ವಿ.ರಮೇಶ್ ರಾವ್, ಅರುಣ್ ಇದ್ದರು.

ಕರ್ತವ್ಯಲೋಪದಡಿ ನಾಲ್ವರ ಅಮಾನತು

ಹೆಚ್.ಡಿ.ಕೋಟೆ, ಅ.26–ಅಕ್ರಮ ಸಕ್ರಮ ಯೋಜನೆಯಡಿ ಕರ್ತವ್ಯಲೋಪ ಎಸಗಿರುವ ಆರೋಪದಡಿ ಕಂದಾಯ ನಿರೀಕ್ಷಕ ಮಹೇಶ್, ಎಫ್‌ಡಿಎ ವಿಷ್ಣು ಗ್ರಾಮ ಲೆಕ್ಕಿಗ ಅನಿಲ್, ಮುಜರಾಯಿ ಇಲಾಖೆ ಗುಮಾಸ್ತ ಹರೀಶ್ ಸೇರಿ ನಾಲ್ವರನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಮಾನತುಗೊಳಿಸಿದ್ದಾರೆ.



ಮಹೇಶ್



ಹರೀಶ್

ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಅವರು, ಹಿಂದಿನ ತಹಶೀಲ್ದಾರ್ ಕೆ.ಆರ್.ರತ್ನಾಂಬಿಕೆ, ಸಿರಸ್ತೇದಾರ್ ಕುಮಾರ್ ಸೇರಿ 6 ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಅಮಾನತುಗೊಳಿಸುವಂತೆ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದರು. ಆದರೆ, ಜಿಲ್ಲಾಧಿಕಾರಿ ಸಮಗ್ರ ತನಿಖೆ ನಡೆಸಿ ಗುರುವಾರ ನಾಲ್ವರನ್ನು ಅಮಾನತುಪಡಿಸಿದ್ದಾರೆ.

ಪಟ್ಟಣದ ಕಂದಾಯ ಇಲಾಖೆಯ ಅಣ್ಣೂರಿನ ವ್ಯಾಪ್ತಿಯ ವಿಎ ಅನಿಲ್‌ಕುಮಾರ್ ಮತ್ತು ಮುಜರಾಯಿ ಇಲಾಖೆಯ ಹರೀಶ್ ಅವರು ತಮ್ಮ ಪತ್ನಿ ಭವ್ಯ ಮತ್ತು ಸಂಬಂಧಿಕರಾದ ಸುಜಾತ ಅವರಿಗೆ ಪಡುಕೋಟೆ ಕವಲ್ ಸರ್ವೇ ನಂ.53ರಲ್ಲಿ ಸುಮಾರು ಐದು ಎಕರೆ ಜಮೀನನ್ನು ಕಬಳಿಸಲು ಸಾಗುವಳಿ ಪತ್ರ ನೀಡಲು ನಕಲು ದಾಖಲೆ ಸೃಷ್ಟಿಸಿದ್ದಾರೆ. ಇದಕ್ಕೆ ಸಹಕರಿಸಿದ ತಹಶೀಲ್ದಾರ್ ರತ್ನಾಂಬಿಕೆ, ಸಿರಸ್ತೇದಾರ್ ಕುಮಾರ್, ಕಂದಾಯ ನಿರೀಕ್ಷಕ ಮಹೇಶ್, ಎಫ್‌ಡಿಎ ವಿಷ್ಣು ಅವರು ಕರ್ತವ್ಯಲೋಪ ಎಸಗಿ ಭೂ ಹಗರಣ ನಡೆಸಿರುವುದನ್ನು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ತನಿಖೆ ನಡೆಸಿ, ಕಳೆದ ತಿಂಗಳು ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದರು.

ಕಗ್ಗಲಿಹುಂಡಿ ಬಾಳೆ ತೋಟದಲ್ಲಿ ಬೀಡುಬಿಟ್ಟ ಕಾಡಾನೆಗಳು

ಮಲ್ಕುಂಡಿ, ಅ.26–ಕಾಡಿನಿಂದ ನಾಡಿಗೆ ಲಗ್ಗೆಇಟ್ಟ ಕಾಡಾನೆಗಳು ನಂಜನಗೂಡು ತಾಲೂಕಿನ ಮಲ್ಕುಂಡಿ ಸಮೀಪದ ಕಗ್ಗಲಿಹುಂಡಿ ಗ್ರಾಮದ ಬಾಳೆ ತೋಟದಲ್ಲಿ ಬೀಡುಬಿಟ್ಟು, ಫಸಲನ್ನು ನಾಶಪಡಿಸಿವೆ.

ಮಲ್ಕುಂಡಿ ಗ್ರಾಮದ ರೈತ ಕಿಟ್ಟಪ್ಪ ಅವರ ಜಮೀನಿಗೆ ಬುಧವಾರ ರಾತ್ರಿ ಲಗ್ಗೆಇಟ್ಟ ಕಾಡಾನೆಗಳು, ಬೆಳಗ್ಗೆಯಾದರು ಕಾಡಿನತ್ತ ಹೋಗದೆ ಬಾಳೆ ತೋಟದಲ್ಲೇ ಬೀಡುಬಿಟ್ಟು ಸುಮಾರು 2 ಎಕರೆ ಬಾಳೆ ಫಸಲುಗಳನ್ನು ಸಂಪೂರ್ಣವಾಗಿ ನಾಶಪಡಿಸಿವೆ.



ಗುರುವಾರ ಬೆಳಗ್ಗೆ ಆನೆಗಳನ್ನು ಕಂಡ ಸಾರ್ವಜನಿಕರು ಗಾಬರಿಗೊಂಡು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದಾರೆ. ನಂತರ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಹಗಲು ವೇಳೆ ರೈತರು ಜಮೀನುಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದ ಆನೆಗಳನ್ನು ಈಗ ಕಾಡಿಗೆ ಓಡಿಸಲು ಸಾಧ್ಯವಿಲ್ಲ. ಸಂಜೆ ಆನೆಗಳನ್ನು ಕಾಡಿನತ್ತ ಓಡಿಸಲಾಗುವುದು ಎಂದು ಆರ್‌ಎಫ್‌ಓ ಜನಾರ್ಧನ್ ತಿಳಿಸಿದರು.

ಕಾಡಾನೆಗಳ ನೋಡಲು ಅಕ್ಕಪಕ್ಕದ ಗ್ರಾಮದ ಸಾರ್ವಜನಿಕರು ಮುಗ್ಗಿಬಿದ್ದರು. ಹುಲ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ರಮೇಶ್ ಕಟ್ಟಿ ಬಂದೋಬಸ್ತ್ ಮಾಡಿದರು.

ಸಾಲ ಮಾಡಿ ಬೆಳೆದ ಫಸಲು ಕಾಡಾನೆ ಪಾಲಾದರೆ ಸಾಲ ತೀರಿಸುವುದು ಹೇಗೆ? ಮಳೆ ಇಲ್ಲದೇ ಬರಗಾಲದಲ್ಲೂ ಬೆಳೆದ ಫಸಲುಗಳನ್ನು ಕಾಡುಪ್ರಾಣಿಗಳು ನಾಶ ಮಾಡುತ್ತಿವೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಸರ್ಕಾರ ಕ್ರಮ ಕೈಕೊಳ್ಳಬೇಕು. ಬೆಳ್ಳಂಬೆಳ್ಳಗೆ ಕಾಡಾನೆಗಳ ಆಟಹಾಸದಿಂದ ರೈತರು ತಮ್ಮ ಜಮೀನುಗಳಿಗೆ ತೆರಳಲು ಭಯಭೀತರಾಗಿದ್ದಾರೆ. ಆನೆಗಳು ರೈತರ ಜಮೀನುಗಳಿಗೆ ಬಾರದಂತೆ ತಡೆಯಲು ಅರಣ್ಯ ಅಧಿಕಾರಿಗಳು ಮುಂದಾಗಬೇಕು ಎಂದು ರೈತ ಕಿಟ್ಟಪ್ಪ ಒತ್ತಾಯಿಸಿದ್ದಾರೆ.

ಆಹಾರ ಇಲಾಖೆ ಕಚೇರಿಗೆ ಅಡ್ಡಹಳ್ಳಿ ಗ್ರಾಮಸ್ಥರ ಮುತ್ತಿಗೆ

ಹೆಚ್.ಡಿ.ಕೋಟೆ, ಅ.26– ಪಡಿತರ ವಿತರಣೆಯಲ್ಲಿ ಅಕ್ರಮ ನಡೆದಿರುವ ನ್ಯಾಯಬೆಲೆ ಅಂಗಡಿಯಲ್ಲಿ ಆಹಾರ ಪದಾರ್ಥಗಳನ್ನು ವಿತರಿಸಬಾರದು. ಪಡಿತರ ವಿತರಣೆಗೆ ಉಪಕೇಂದ್ರ ತೆರೆಯಬೇಕು ಎಂದು ಒತ್ತಾಯಿಸಿ ತಾಲೂಕಿನ ಅಡ್ಡಹಳ್ಳಿ ಗ್ರಾಮಸ್ಥರು ಗುರುವಾರ ಆಹಾರ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕ ಎ.ಎಸ್.ನಂದಕುಮಾರ್ ಮೂರು ವರ್ಷಗಳ ಹಿಂದೆ ಪಡಿತರ 300 ಮೂಟೆ ರಾಗಿಯನ್ನು ವಿತರಿಸದೆ ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿದ್ದಾಗ ಗ್ರಾಮಸ್ಥರೇ ಹಿಡಿದು ದೂರು ನೀಡಿದ್ದರು. ಆಗ ನ್ಯಾಯಬೆಲೆ ಅಂಗಡಿಯನ್ನು ಸೀಜ್ ಮಾಡಿಸಲಾಗಿತ್ತು. ನಂತರ ಬೇರೆ ಗ್ರಾಮದ ಪಡಿತರ ಅಂಗಡಿ ಮಾಲೀಕರ ಮೂಲಕ ಅಡ್ಡಹಳ್ಳಿ ಗ್ರಾಮದಲ್ಲಿ ಪಡಿತರ ವಿತರಿಸಲಾಗುತ್ತಿತ್ತು. ಈಗ ನ್ಯಾಯಬೆಲೆ ಅಂಗಡಿ ಮಾಲೀಕ ಎ.ಎಸ್.ನಂದಕುಮಾರ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅಡ್ಡಹಳ್ಳಿ ಗ್ರಾಮದಲ್ಲಿ ಪಡಿತರ ವಿತರಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಬಡವರಿಗೆ ಆಹಾರ ಪದಾರ್ಥವನ್ನು ವಿತರಿಸದೆ ವಂಚಿಸಿದ ನ್ಯಾಯಬೆಲೆ ಅಂಗಡಿ ಮಾಲೀಕರ ಪರವಾನಗಿಯನ್ನು ರದ್ದು ಮಾಡಬೇಕು. ಗ್ರಾಮಕ್ಕೆ ಬೇರೆ ನ್ಯಾಯ ಬೆಲೆ ಅಂಗಡಿ ಮಾಲೀಕರಿಂದ ಪಡಿತರದಾರರಿಗೆ ಆಹಾರ ಪದಾರ್ಥಗಳನ್ನು ವಿತರಿಸಬೇಕು. ಇಲ್ಲ ಆಹಾರ ಇಲಾಖೆಯವರೇ ಬಂದು ಪಡಿತರ ವಿತರಿಸಲಿ. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.



> ಜನರಿಗೆ ವಂಚಿಸಿದ್ದ ನ್ಯಾಯಬೆಲೆ ಅಂಗಡಿ ಮಾಲೀಕನಿಗೆ ಮತ್ತೆ ಪಡಿತರ ವಿತರಿಸಲು ಅನುಮತಿ ನೀಡಿರುವುದ ಸರಿಯಾದ ಕ್ರಮವಲ್ಲ. ಆತನ ಬಳಿಯೇ ಆಹಾರ ಪದಾರ್ಥ ಪಡೆದುಕೊಳ್ಳುವಂತೆ ಇಲಾಖೆಯ ಅಧಿಕಾರಿಗಳು ಸೂಚಿಸಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ? ಆತ ಮತ್ತೆ ಅಕ್ರಮ ಎಸಗುವುದರಲ್ಲಿ ಯಾವುದೇ ಅನುಮಾನವಿಲ್ಲ,
> –ಅಡ್ಡಹಳ್ಳಿ ಮಂಜುನಾಥ್, ಗ್ರಾಮದ ಮುಖಂಡ

> ನ್ಯಾಯಬೆಲೆ ಅಂಗಡಿ ಮಾಲೀಕ ಎ.ಎಸ್.ನಂದಕುಮಾರ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ನ್ಯಾಯಾಲಯದ ತೀರ್ಪನ್ನು ಎಲ್ಲರೂ ಗೌರವಿಸಬೇಕು. ಅಡ್ಡಹಳ್ಳಿ ಗ್ರಾಮದಲ್ಲಿ ಪಡಿತರ ವಿತರಣೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಇಲಾಖೆಯ ಮೇಲಧಿಕಾರಿಗಳಿಗಳ ಗಮನಕ್ಕೆ ತರಲಾಗಿದೆ.
> –ಮಂಜುಳಾ, ಆಹಾರ ಇಲಾಖೆಯ ಶಿರಸ್ತೇದಾರ್

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಹುಚ್ಚಪ್ಪ, ಮಂಜುನಾಥ್, ರಮೇಶ್, ಕುಮಾರ್, ಸಣ್ಣಸ್ವಾಮಿ, ನಂಜುಂಡಯ್ಯ, ಮಹೇಶ, ಕೃಷ್ಣ, ಭಾಸ್ಕರ್, ಮಲ್ಲಯ್ಯ, ರತ್ನಯ್ಯ, ಶಿವಣ್ಣ, ರತ್ನಮ್ಮ, ಕಮಲಮ್ಮ, ಸಿಂಗಯ್ಯ, ಚಿನ್ನಯ್ಯ, ಮಂಜುನಾಥ್, ಉಮೇಶ, ಚಂದ್ರೇಗೌಡ, ಈಶ್ವರ, ಅನಿಲ್‌ಕುಮಾರ್, ರಮೇಶ್, ಬೆಟ್ಟಯ್ಯ, ಶಿವರಾಜ್, ಶಾರದಮ್ಮ, ಮಂಜುಳಾ, ಮಲ್ಲಮ್ಮ, ರಾಜಮ್ಮ, ಸುಮಿತ್ರ, ಸುನಂದ, ಸೌಭಾಗ್ಯ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಿಯೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ರೋನಿ (ಕ)	2 ಪ್ರದರ್ಶನಗಳು
ಇನಾಮ್‌ದಾರ್(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಜ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಅತ್ತಿಗೋಡು ಗ್ರಾಮದ ಈಶ್ವರ ದೇವಾಲಯದಲ್ಲಿ ಪಾರ್ವತಿ ದೇವಿಗೆ ನವರಾತ್ರಿ ಅಂಗವಾಗಿ ಒಂಬತ್ತು ದಿನ ವಿವಿಧ ಪೂಜಾ ಕಾರ್ಯ ನೆರವೇರಿಸಲಾಯಿತು. ಪ್ರಧಾನ ಅರ್ಚಕ ಹಿರೇಮಠ್, ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿದರು.

ಉದಯಕುಮಾರ್ ನಿಧನ



ಹೆಚ್.ಡಿ.ಕೋಟೆ: ವರ್ಗಾವಣೆಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿ ಉದಯಕುಮಾರ್(57) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರು ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಐದು ವರ್ಷ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಕೊಳ್ಳೆಗಾಲ ತಾಲೂಕಿನ ಮುಡಿಗುಂಡ ಗ್ರಾಮದ ಮೃತರ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನೀವು ನಮ್ಮ ನೆನಪಿನಲ್ಲಿರುವಿರಿ.
ಶ್ರೀಮತಿ ದೇವಮ್ಮ
ದುಃಖತಪ್ತರು: ಮಕ್ಕಳು ಹಾಗೂ ಕುಟುಂಬವರ್ಗದವರು

9ನೇ ವರ್ಷದ ಪುಣ್ಯಸ್ಮರಣೆ




ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ಸ್ಮರಣೆ ಹಾಗೂ ಆಶೀರ್ವಾದ ಬಯಸುವ
ಮಕ್ಕಳಾದ: ಎಂ.ಎಸ್. ಸತೀಶ್ ಮತ್ತು ಎಂ.ಹರೀಶ್, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಶ್ರೀಮತಿ ಬಸವಲಿಂಗಮ್ಮ
W/o ದಿ॥ ಕೆ.ಮುತ್ತಯ್ಯ

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತ ಹೆಣ್ಣು ಮಕ್ಕಳು ಮತ್ತು ಮೊಮ್ಮಕ್ಕಳು
ಪುಟ್ಟಬೋರಮ್ಮ
ತೆಂಕಲಕೊಪ್ಪಲು

2ನೇ ವರ್ಷದ ಪುಣ್ಯಸ್ಮರಣೆ



ಸ್ವಾಮಿಗೌಡ. ಎನ್
ದುಃಖತಪ್ತರು: ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು (ಮಜ್ಜಿಗೆಮರ ಗ್ರಾಮ)

8ನೇ ವರ್ಷದ ಸವಿನೆನಪು



ನೀವು ಮರೆಯಾಗಿ 8 ವರ್ಷಗಳು ಕಳೆದರು ನಿಮ್ಮ ನೆನಪು ಸದಾ ಮನಸ್ಸಿನಲ್ಲಿದೆ.
ಮಗ ಬಿ.ನಾಗೇಂದ್ರ ಕುಮಾರ್, ಸೊಸೆ ಶಿಲ್ಪ, ಮೊಮ್ಮಗಳು ಎನ್.ಹರ್ಷಿತಾ, ಅಳಿಯ ಮಹಾದೇವು, ಮೊಮ್ಮಗ ಎಂ.ವಿಹಾನ್ ಗೌಡ
ತಮ್ಮ ನಂಜುಂಡಯ್ಯ ಅವರ ಮಗ ಎನ್.ಮಂಜುನಾಥ್
ಶ್ರೀಮತಿ ಗೌರಮ್ಮ

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಮೈಸೂರಿನ ಚಾಮುಂಡಿ ಬೆಟ್ಟದ, ಚಾಮುಂಡಿ ತಾಯಿಯ ಪ್ರಧಾನ ಅರ್ಚಕರಾದ
ಡಾ|| ಶಶಿಶೇಖರ್ ದೀಕ್ಷಿತ್. ಎನ್
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಾಶಯ ಕೋರುವವರು: ದೇವಾಲಯದ ನೌಕರರು, ಚಾಮುಂಡಿ ಬೆಟ್ಟದ ಗ್ರಾಮಸ್ಥರು, ಮುಖಂಡರು ಹಾಗೂ ಅಭಿಮಾನಿಗಳು

WANTED

We are reputed **Bluestar Airconditioner** Channel partner **BREEZAIRINDIA** is Looking for below candidates for immediate **HIRING**

1. **Accountant 3 Posts :** Degree Must with exp 5 to 6 years in Complete accounting
2. **Front office assistant 02 posts:** Any degree with Good communication skills. Must know Complete Computer Operations. Exp. 2 to 3 years
3. **Site Engineers:** BE Mechanical/ Electrical with auto cad knowledge Exp 2 to 3 Years
4. **Auto Cad draftsman:** BE Mechanical or Any equivalent Degree Exp. 2 to 3 years
5. **Supervisors:** Diploma in Electrical or Mechanical Exp. in Hvac system 1 to 2 years
6. **Air Conditioner Technicians :** 2 to 3 years Exp.
7. **Helpers :** ITI, JOC & Diploma or SSLC Pass/ Fail candidates can apply
8. **Office Boy:** SSLC, PUC Pass/ Fail

All interested candidates must send your resume to: **vpdcool@gmail.com**
Or what's app to 8431435001 or for more information you can call
89510 78005 or 79969 90001

ನಂದಿ ರಾಯಲ್ಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ.1136, ಸಿ.ಹೆಚ್ ನಂ.2/2, 3ನೇ ಮಹಡಿ, ಬಲ್ಲಾಳ್ ವೃತ್ತ, ಮಹೇಶ್ ಪ್ರಸಾದ್ ಹೋಟೆಲ್ ಹಿಂಭಾಗ, ಚಾಮರಾಜಪುರಂ, ಮೈಸೂರು – 570004

ಟೆಂಡರ್ ಪ್ರಕಟಣೆ

ಮೇಲ್ಕಂಡ ಸಂಘದ ಸದಸ್ಯರ ಕೋರಿಕೆ ಮೇರೆಗೆ ಬಡಾವಣೆ ರಚಿಸಲು ಅಗತ್ಯವಿರುವಷ್ಟು ಜಮೀನು ಹೊಂದಿರುವ ಅರ್ಹ ಮತ್ತು ಆಸಕ್ತಿಯುಳ್ಳ ಅಭಿವೃದ್ಧಿದಾರರಿಂದ ಟೆಂಡರ್ ಆಹ್ವಾನಿಸಲಾಗುತ್ತಿದೆ.

1. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ ಅಥವಾ ಮೈಸೂರು ತಾಲ್ಲೂಕು ವ್ಯಾಪ್ತಿಯಲ್ಲಿ ಅಥವಾ ಮೈಸೂರಿನ ಹೃದಯ ಭಾಗದಿಂದ ಕನಿಷ್ಠ 20 ಕಿ.ಮೀ. ಒಳಗೆ ಅಭಿವೃದ್ಧಿಪಡಿಸುವಷ್ಟು ಅಗತ್ಯವಿರುವ ಜಮೀನನ್ನು ಬೇಕಾಗಿದೆ.
2. ಕನಿಷ್ಠ 80 ರಿಂದ 100 ನಿವೇಶನಗಳ ಅವಶ್ಯಕವಿರುತ್ತದೆ.
3. ಡೆವಲಪರ್ಸ್ ನೊಂದಣಿ ಹೊಂದಿರುವ ದಾಖಲೆ ಹಾಜರುಪಡಿಸುವುದು.
4. GST & Income Tax ಮತ್ತು ನೊಂದಣಿ ಹೊಂದಿದವರಾಗಿರಬೇಕು.
5. ನಮ್ಮ ಸಂಘಕ್ಕೆ ನೀಡುವ ಒಟ್ಟು ಸೈಟಿನ ವಿವರ & ಅಳತೆಯ ವಿವರ ಒದಗಿಸಬೇಕು
6. ಜಮೀನು ಖರೀದಿ, ನಕ್ಷೆ ಮಂಜೂರಾತಿ ಹಾಗೂ ಮೂಲ ಸೌಕರ್ಯಗಳಾದ ರಸ್ತೆ ನಿರ್ಮಾಣ, ಒಳಚರಂಡಿ, ನೀರು ಸರಬರಾಜು, ವಿದ್ಯುತ್, ಎಸ್‌ಟಿಪಿ ಘಟಕ ನಿರ್ಮಾಣ, ಓವರ್‌ಹೆಡ್ ಟ್ಯಾಂಕ್, ನೆಲಮಟ್ಟದ ಜಲ ಸಂಗ್ರಹಗಾರ, ಬಡಾವಣೆ ಮುಂಬಾಗದ ಆರ್ಚ್ ಹಾಗೂ ಉದ್ಯಾನವನ (ಪಾರ್ಕ್) ಸೇರಿದಂತೆ ಬಡಾವಣೆಯಲ್ಲಿರುವ ಎಲ್ಲಾ ರೀತಿಯ ಮೂಲಸೌಕರ್ಯಗಳೊಡನೆ ಬಡಾವಣೆ ಅಭಿವೃದ್ಧಿಪಡಿಸಿ ಹಾಗೂ ಸರ್ಕಾರಕ್ಕೆ ಹಾಗೂ ವಿವಿಧ ಇಲಾಖೆಗಳಿಗೆ ಪಾವತಿಸುವ ಶುಲ್ಕಗಳು ಸೇರಿದಂತೆ ಸೇರಿದಂತೆ ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವ ವೆಚ್ಚ ಸೇರಿದಂತೆ ಪ್ರತಿ ಚದರ ಅಡಿಗೆ ತಗುಲುವ ವೆಚ್ಚವನ್ನು ಅಂಕಿಅಂಶಗಳನ್ನು ಸೊಸೈಟಿಗೆ ಸಲ್ಲಿಸುವುದು.

ಆಸಕ್ತರು ಸಂಪರ್ಕಿಸಿ: ಮುಖ್ಯ ಪ್ರವರ್ತಕರು: **99019 41234**

भारत सरकार Government of India
भाभा परमाणु अनुसंधान केंद्र Bhabha Atomic Research Centre
येलवाल Yelwal, मैसूरु Mysuru - 571 130

विज्ञापन सं. / Advertisement No. – BARC/MYS/VC/2023

चिकित्सक की आवश्यकता/REQUIRED PHYSICIAN

भाभा परमाणु अनुसंधान केंद्र के आरएमपी स्थित कुवेंपुनगर एवं येलवाल कॉलोनियों के औषधालयों में सामान्य औषधी के लिए आगंतुक परामर्शदाता के रूप में नियुक्ति के लिए आवेदन आमंत्रित किये जाते हैं।

Applications are invited for appointment as VISITING CONSULTANT in General Medicine at the dispensaries of BARC functioning at RMP Colonies at Kuvempunagar and Yelwal.

योग्यता /अनुभव Qualification / Experience	एमबीबीएस, एम.डी (सामान्य औषधी)। कम से कम 5 साल के अनुभव वालों को वरीयता दी जाएगी। MBBS, M.D. General Medicine) Minimum 5 yrs of experience is preferable
नियुक्ति की अवधि Period of appointment	प्रथमतः एक वर्ष और परस्पर सहमति से इसका विस्तार किया जा सकता है। One year at the first instance and likely to be extended on mutual consent
परामर्श समय Consultation Hours	प्रत्येक महीने में अदल-बदल में आने वाले सप्ताहों में कुवेंपुनगर औषधालय में 2 घंटे के 4 आगमन (माह के प्रथम एवं तृतीय सप्ताह के शनिवार को) और येलवाल औषधालय में 2 घंटे के 4 आगमन (माह के द्वितीय एवं चतुर्थ सप्ताह के शनिवार को)। 4 Visits of 2 hrs., each in a month in alternative weeks at Kuvempunagar (Saturdays of 1st 3rd week of the month) and Yelwal Dispensaries (Saturdays of 2nd 4th week of the month)
मानदेय Honorarium	प्रत्येक आगमन के लिए समेकित मानदेय रु.2500/- (रुपये दो हज़ार पाँच सौ मात्र)। डॉक्टर को ड्यूटी स्थल पर आने-जाने के लिए स्वयं से परिवहन की व्यवस्था करनी होगी। Consolidated honorarium of Rs. 2500/- per visit. Doctor shall make her/his own arrangement for transport to attend the duty place.

उपरोक्त मापदंडों को पूरा करने वाले उम्मीदवारों को साधारण कागज पर अपने पूरे बायो-डाटा एवं नये पासपोर्ट साइज फोटो सहित अपनी शैक्षणिक योग्यताओं, अनुभव इत्यादि की प्रतियों के साथ प्रशासनिक अधिकारी- III, भाभा परमाणु अनुसंधान केंद्र, डाक बैग सं.1, डाकघर - येलवाल, मैसूरु - 571130 के पते पर ऐसे भेजें कि आवेदन दिनांक **13 नवंबर, 2023** से पहले उक्त पते पर पहुंच जाए।

Candidates fulfilling the above criteria may apply on plain paper with their full bio-data and recent passport size photograph along with the copies of certificates of educational qualifications, Experience etc., to the Administrative Officer-III, Bhabha Atomic Research Centre, Post Bag No. 1, Yelwal P.O., Mysore – 571 130 so as to reach not later than **13 November, 2023.**

नोट: भाभा परमाणु अनुसंधान केंद्र, मैसूरु बिना कोई कारण बताये किसी या सभी आवेदनों को अस्वीकार करने का अधिकार सुरक्षित रखता है।

Note: Bhabha Atomic Research Centre, Mysuru reserves the right to reject any or all applications without assigning any reasons therefor.

-sd/-
प्रशासनिक अधिकारी-III/Administrative Officer-III

केनरा बैंक Canara Bank
सिंडिकेट Syndicate
Together We Can

ಪ್ರಾದೇಶಿಕ ಕಛೇರಿ ಮೈಸೂರು ಗ್ರಾಮೀಣ

ಈ ದಿನ (27.10.2023)
ಕೆನರಾ ಬ್ಯಾಂಕ್
ಹೊಸ ಶಾಖೆಗಳನ್ನು ತೆರೆಯುವುದನ್ನು ಹೆಮ್ಮೆಯಿಂದ ಘೋಷಿಸುತ್ತದೆ

ಬನ್ನೂರು
ಮೊದಲನೆಯ ಮಹಡಿ, ಮುನ್ಸಿಪಾಲಿಟಿ ಕಚೇರಿ ಎದುರು, M.M.ರಸ್ತೆ, ಬನ್ನೂರು ತಿ.ನರಸೀಪುರ ತಾ||, ಮೈಸೂರು ಜಿ||-571 101
: ಉದ್ಘಾಟನೆ :
ಶ್ರೀ. ಆರ್. ಹೇಮಂತ ರಾಜು, K.M.A.S, ಮುಖ್ಯ ಅಧಿಕಾರಿ
ಪುರಸಭೆ ಕಚೇರಿ, ಬನ್ನೂರು

&

ಬಿಳಿಕೆರೆ
ಕೃಷ್ಣ ಕಾಂಪ್ಲೆಕ್ಸ್, B.M ಬೈಪಾಸ್ ರಸ್ತೆ, ಬಿಳಿಕೆರೆ, ಹುಣಸೂರು ತಾ||, ಮೈಸೂರು ಜಿ|| - 571 103
: ಉದ್ಘಾಟನೆ :
ಶ್ರೀಮತಿ. ಪಿ.ಡಿ ಶ್ವೇತಾ ಅಧ್ಯಕ್ಷರು
ಬಿಳಿಕೆರೆ ಗ್ರಾಮ ಪಂಚಾಯಿತಿ, ಬಿಳಿಕೆರೆ.

-: ನಿಮ್ಮನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಿರುವ :-
ಶ್ರೀ. ಉಮೇಶ್ ಪಿ.ಎಸ್
ಪ್ರಾದೇಶಿಕ ಮುಖ್ಯಸ್ಥರು
ಪ್ರಾದೇಶಿಕ ಕಛೇರಿ ಮೈಸೂರು ಗ್ರಾಮೀಣ

www.canarabank.com | 1 Bank Number 1800 1030



ಜನಸಾಗರ ಹರಿದು ಬರುತ್ತಿದೆ.
ಸಾಹಸಗಳ ಸುರಿಮಳೆ, ಉತ್ತಮ ಮನರಂಜನೆ
ಜಂಬೊ ಸರ್ಕಸ್
ಬನ್ನಿ ನೋಡಿ ಆನಂದಿಸಿ
ಮುಂಗಡ ಬುಕ್ಕಿಂಗ್ ರೂ. 300/-
ದಿನ 3 ಪ್ರದರ್ಶನಗಳು 1ಕ್ಕೆ, 4ಕ್ಕೆ ಮತ್ತು 7ಕ್ಕೆ
ಇಥಿಯೋಪಿಯನ್, ಟ್ಯಾನ್‌ಜೇನಿಯನ್, ಆಫ್ರಿಕನ್ ಕಲಾವಿದರು ಹಾಗೂ ಇತರೆ ದೇಶಗಳ ಕಲಾವಿದರ ಸಾಹಸಮಯ ಪ್ರದರ್ಶನ
ಪ್ರವೇಶ ದರ: ರೂ. 100/-, ರೂ. 150/-, ರೂ. 250/-, ರೂ. 300/-
ಕಾರಂಜಿ ಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್‌ಬಾದ್, ಮೈಸೂರು
ಕರೆ ಮಾಡಿ: 7991172237 / 9496790336 for advance booking: bookmyseats.in







WANTED

SIGMA HOSPITAL THE HEALING TOUCH
SIGMA HOSPITAL
SARASWATHIPURAM, MYSORE

VACANCY
• OT & AT Technician : 03 (Fresher or Experienced)
Qualification: Dip. In OT & AT
• Ward Staff Nurse: 05 (Fresher or Experienced)
ICU Staff Nurse: 01 (minimum 5 years Experience)
Qualification: GNM / BSc Nursing
Salary: Best in Industry

For More Details Contact: Mrs. Niriksha Urs (HR)
Contact No.: 8123758382
Drop your resume to Mail ID: hrdsigma100@gmail.com

